# ಸಂವಿಧಾನ ಓದು

## ವಿದ್ಯಾರ್ಥಿ ಯುವಜನರಿಗಾಗಿ ಕೈಪಿಡಿ

**ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್**
ನಿವೃತ್ತ ನ್ಯಾಯಮೂರ್ತಿಗಳು, ಕರ್ನಾಟಕ ಉಚ್ಚ ನ್ಯಾಯಾಲಯ



# ಸಂವಿಧಾನ ಓದು

## ವಿದ್ಯಾರ್ಥಿ ಯುವಜನರಿಗಾಗಿ ಕೈಪಿಡಿ

**ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್**

ಸಹಯಾನ
ಡಾ. ಆರ್.ವಿ.ಭಂಡಾರಿ ನೆನಪಿನ
ಸಂಸ್ಕೃತಿ ಅಧ್ಯಯನ ಕೇಂದ್ರ, ಕೆರೆಕೋಣ

ಮತ್ತು

ಸಮುದಾಯ
ಕರ್ನಾಟಕ

# ಲೇಖಕರ ಪರಿಚಯ

ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ ದಾಸ್ ಅವರು ಹುಟ್ಟಿದ್ದು ಕೋಲಾರ ಜಿಲ್ಲೆ ಮುಳಬಾಗಿಲು ತಾಲೂಕಿನ ಹೆಬ್ಬಣಿ ಗ್ರಾಮದಲ್ಲಿ 12 ಫೆಬ್ರುವರಿ 1952 ರಂದು. ಸ್ವಾತಂತ್ರ್ಯ ಹೋರಾಟಗಾರರಾಗಿದ್ದ ಎಚ್.ಎನ್.ನಾಗಪ್ಪನವರು ಇವರ ತಂದೆ. ತಾಯಿ ಪಾರ್ವತಮ್ಮ.

ಶಾಲಾ ದಿನಗಳಿಂದಲೇ ಪ್ರಜಾಸತ್ತಾತ್ಮಕ ಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದ ಅವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಕಾನೂನು ಪದವಿಯನ್ನು ಪಡೆದರು. ಅಖಿಲ ಭಾರತ ವಕೀಲರ ಸಂಘಟನೆಯಲ್ಲಿ ಕ್ರಿಯಾಶೀಲ ಪಾತ್ರ ವಹಿಸಿದ ಇವರು ಯಂಗ್ ಅಡ್ವೊಕೇಟ್ಸ ಫೋರಂ ಇದರ ಸಂಸ್ಥಾಪಕ ಕಾರ್ಯದರ್ಶಿಗಳು.

21 ಅಕ್ಟೋಬರ್ 2004ರಂದು ಕರ್ನಾಟಕ ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿ ನೇಮಕಗೊಂಡರು. ನಿವೃತ್ತಿಯ ನಂತರ ದೆಹಲಿಯಲ್ಲಿ ಸರ್ವೋಚ್ಚ ನ್ಯಾಯಾಲಯದ ಹಿರಿಯ ವಕೀಲರಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಸರಕಾರ ನೇಮಿಸಿದ ಹಲವು ಆಯೋಗಗಳ ಅಧ್ಯಕ್ಷರಾಗಿ ಕೆಲಸ ನಿರ್ವಹಿಸಿದ ಖ್ಯಾತಿ ಇವರದು.

ಒಳ್ಳೆಯ ವಾಗ್ಮಿಗಳೂ, ಬರಹಗಾರರೂ ಆಗಿರುವ ಇವರ ಚಿಂತನಾ ಪರವಾದ ಮುಖ್ಯ ಪುಸ್ತಕಗಳು – ಸಮಾಜವಾದ; ಕರ್ನಾಟಕದಲ್ಲಿ ನ್ಯಾಯಾಂಗ; ಅಸ್ಪೃಶ್ಯತೆ, ಸಮಾಜ ಮತ್ತು ಕಾನೂನು; ಅರಿವು ಬೆಳಕು; ಮಹಿಳಾ ಅಸಮಾನತೆ; ಛಾಲೆಂಜಸ್ ಆ್ಯಂಡ್ ಪ್ರಾಬ್ಲೆಮ್ಸ ಬಿಫೋರ್ ಯಂಗ್ ಲಾಯರ್ಸ್; ಚಾಲೆಂಜಸ್ ಟು ದ ಕಾನ್‌ಸ್ಟಿಟ್ಯೂಷನ್. ಜಾಗತಿಕ ಧುರೀಣ ಡಾ. ಅಂಬೇಡ್ಕರ್, ಡಾ. ಅಂಬೇಡ್ಕರ್ ಮತ್ತು ಕಾರ್ಮಿಕ ಕಾನೂನು.

# THE CONSTITUTION OF INDIA

## PREAMBLE

**WE, THE PEOPLE OF INDIA,**
having solemnly resolved to constitute India into a
**SOVEREIGN SOCIALIST**
**SECULAR DEMOCRATIC REPUBLIC**
and to secure to all its citizens:
**JUSTICE**, social, economic and political;
**LIBERTY** of thought, expression,
belief, faith and worship;
**EQUALITY** of status and of opportunity;
and to promote among them all
**FRATERNITY** assuring the dignity of the
individual and the unity and
integrity of the Nation;
**IN OUR CONSTITUENT ASSEMBLY**
this twenty-sixth day of November, 1949, do
**HEREBY ADOPT, ENACT AND GIVE TO**
**OURSELVES THIS CONSTITUTION.**

**SAMVIDHANA ODU** - a handbook about the Indian Constitution for youth and students by Justice H N Nagamohandas, Bengaluru.

Publisher : **SAHAYANA, KEREKON**
Areangadi, Honnavar, Uattar kannada-581 334
e-mail :rvsahayana@gmail.com, Ph. : 9448729359
© : Author
Price : Rs. 30.00

Year : Aug 2018

Paper used : 70 GSM Maplitho

No. of pages : 88

ಪ್ರಥಮ ಮುದ್ರಣ : ಆಗಸ್ಟ್ ೨೦೧೮

ಪುಟಗಳು : ೮೮+೪

ಕಾಗದ : ೭೦ ಜಿಎಸ್‌ಎಂ ಮ್ಯಾಪ್ಲಿತೊ

ಪುಸ್ತಕದ ಅಳತೆ : ೧/೮ ಡೆಮಿ

ಬೆಲೆ : ರೂ. ೩೦-೦೦

ಪ್ರತಿಗಳು : ೨೦೦೦

ಪ್ರಕಾಶಕರು : **ಸಹಯಾನ, ಕೆರೆಕೋಣ**
ಅರೇಅಂಗಡಿ, ಹೊನ್ನಾವರ
ಉತ್ತರ ಕನ್ನಡ - ೫೮೧ ೩೩೪
e-mail : rvsahayana@gmail.com
Ph. : 9448729359

ಮುದ್ರಣ : **ಕ್ರಿಯಾ,** # ೪೦/೫, ೨ನೇ ಬಿ ಮುಖ್ಯರಸ್ತೆ, ೧೬ ನೇ ಅಡ್ಡರಸ್ತೆ,
ಸಂಪಂಗಿರಾಮನಗರ, ಬೆಂಗಳೂರು-೫೬೦ ೦೨೭

# ಪ್ರಕಾಶಕರ ಮಾತು

ವಿಶ್ವಮಾನ್ಯತೆಯನ್ನು ಪಡೆದ ನಮ್ಮ ದೇಶದ ಸಂವಿಧಾನವು ಸಮಾನತೆಯನ್ನು ಸಾಕಾರಗೊಳಿಸುವ ಒಂದು ಮಹತ್ವದ ಕಲ್ಪನೆಯಾಗಿದೆ. ಸಂವಿಧಾನದ ಶಿಲ್ಪಿ ಡಾ. ಬಿ. ಆರ್. ಅಂಬೇಡ್ಕರ್‌ರವರ ಕನಸಿನ ಭಾರತವನ್ನು ನನಸು ಮಾಡುವ ನೆಲೆಯಲ್ಲಿ ನಮ್ಮ ಸಂವಿಧಾನದ ವಿನ್ಯಾಸಗಳು, ಆಶಯಗಳು ಬಹಳ ಸಶಕ್ತವಾಗಿದ್ದು, ಇದು ನಮ್ಮ ಸ್ವಾತಂತ್ರ್ಯ ಚಳುವಳಿಗಾರರು ಕಂಡ ಕನಸು ಕೂಡ ಆಗಿತ್ತು.

ಇತ್ತೀಚಿನ ದಿನಗಳಲ್ಲಿ ಸಂವಿಧಾನದ ಆಶಯಗಳ ಮೇಲೆಯೇ ಗದಾಪ್ರಹಾರ ನಡೆಯುತ್ತಿರುವುದು ಆತಂಕಕಾರಿ ವಿಷಯವಾಗಿದೆ. ದಲಿತರು, ದಮನಿತರು, ಮಹಿಳೆಯರನ್ನೂ ಒಳಗೊಂಡಂತೆ ದೇಶದ ಎಲ್ಲಾ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ದುರ್ಬಲ ಜನಸಮುದಾಯದ ಪಾಲಿಗೆ ಸಂವಿಧಾನದ ಆಶಯಗಳು ಇನ್ನೂ ಪೂರ್ಣವಾಗಿ ಕೈಗೂಡದ ಕನಸಿನ ಗಂಟಾಗಿದೆ. ಎಲ್ಲಾ ಮಿತಿಗಳ ನಡುವೆ ಕೂಡ ಸ್ವತಂತ್ರ ಭಾರತದ ಏಳು ದಶಕಗಳ ಸಾಧನೆ ಗಮನಾರ್ಹವಾದದ್ದು. ಇದು ಸಾಧ್ಯವಾಗಿರುವುದು ಸಂವಿಧಾನದ ಆಶಯಗಳು ಭಾಗಶಃವಾಗಿಯಾದರೂ ಜಾರಿಯಾಗಿರುವುದರಿಂದ ಎನ್ನುವ ಸತ್ಯ ನಮ್ಮೊಂದಿಗಿದೆ.

ಸ್ವಾತಂತ್ರ್ಯ, ಸಮತೆ, ಭ್ರಾತೃತ್ವ, ಸಮಾಜವಾದಿ ಮತ್ತು ಜಾತ್ಯತೀತ ಭಾವನೆಗಳನ್ನು ಮೂಡಿಸುವ ದೃಢ ಸಂಕಲ್ಪದ ಆಶಯಗಳನ್ನು ಜನಸಾಮಾನ್ಯರಿಗೆ, ಅದರಲ್ಲಿಯೂ ಭಾರತದ ಭವಿಷ್ಯವನ್ನು ನಿರ್ಮಾಣ ಮಾಡುವ ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿ–ಯುವಜನರಿಗೆ ಸರಳವಾಗಿ ತಿಳಿಸುವ ಅಗತ್ಯವನ್ನು ಮನಗಂಡ ಸಂವಿಧಾನ ತಜ್ಞರೂ ಆದ ನಿವೃತ್ತ ನ್ಯಾಯಮೂರ್ತಿ ಶ್ರೀ ಎಚ್.ಎನ್.ನಾಗಮೋಹನ ದಾಸ್ ಅವರು ರಚಿಸಿದ **"ಸಂವಿಧಾನ ಓದು"** ಎನ್ನುವ ಕೃತಿಯೊಂದನ್ನು ಪ್ರಕಟಿಸುತ್ತಿದ್ದೇವೆ. ತನ್ಮೂಲಕ ನಮ್ಮ ಸಂವಿಧಾನವನ್ನು ನಮ್ಮ ಬದುಕಿನ ಕ್ರಮವಾಗಿ ಹೇಗೆ ರೂಢಿಸಿಕೊಳ್ಳಬೇಕೆನ್ನುವ ಆಲೋಚನೆಯನ್ನು ವಿದ್ಯಾರ್ಥಿ–ಯುವಜನರಲ್ಲಿ ಮೂಡಿಸುವ ಉದ್ದೇಶ ಪ್ರಕಾಶನದ್ದು.

ಆದರೆ ಸಂವಿಧಾನವನ್ನು ಅದರ ರಚನೆಯ ಹಿಂದಿರುವ

*"ಯುವಪೀಳಿಗೆಯನ್ನು ದಿಕ್ಕುಗೆಡಿಸುವ ಪ್ರಯತ್ನ ಇಂದು ವ್ಯವಸ್ಥಿತವಾಗಿ ನಡೆಯುತ್ತಿದೆ. ನಮ್ಮನ್ನು ಮುನ್ನಡೆಸಬೇಕಾದ ಸಂವಿಧಾನವನ್ನು ನಾವು ಕಾಪಿಟ್ಟುಕೊಳ್ಳಬೇಕಾದ ಗಳಿಗೆಯಿದು."*

ಆಶಯದೊಂದಿಗೆ ಪೂರ್ಣ ಪ್ರಮಾಣದಲ್ಲಿ ಜಾರಿಗೊಳಿಸದ ಸಂದರ್ಭದಲ್ಲಿ ಹುಟ್ಟಿಕೊಂಡ ಅತೃಪ್ತಿಗಳನ್ನು ಬಳಸಿ, ಹುಸಿ ಸಂಸ್ಕೃತಿಯ ಪ್ರಚಾರದ ಮೂಲಕ ಸಂವಿಧಾನದ ಮೂಲ ಆಶಯಗಳ ಮೇಲೆ ದಾಳಿ ಮಾಡುತ್ತಾ, ನಮ್ಮ ಯುವಪೀಳಿಗೆಯನ್ನು ದಿಕ್ಕುಗೆಡಿಸುವ ಪ್ರಯತ್ನ ಇಂದು ವ್ಯವಸ್ಥಿತವಾಗಿ ನಡೆಯುತ್ತಿದೆ. ನಮ್ಮನ್ನು ಮುನ್ನಡೆಸಬೇಕಾದ ಸಂವಿಧಾನವನ್ನು ನಾವು ಕಾಪಿಟ್ಟುಕೊಳ್ಳಬೇಕಾದ ಗಳಿಗೆಯಿದು. ಈ ಹಿನ್ನೆಲೆಯಲ್ಲಿ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನದಾಸ್‌ರವರು ವಿಶ್ವದ ವಿವಿಧ ರಾಷ್ಟ್ರಗಳ ಸಂವಿಧಾನವನ್ನೂ ಉಲ್ಲೇಖಿಸುತ್ತ ನಮ್ಮ ದೇಶದ ಸಂವಿಧಾನದ ಅರ್ಥ, ಅದು ರಚನೆಯಾದ ಬಗೆ, ಸಂವಿಧಾನದ ಅಗತ್ಯತೆ, ಅದರ ಸಾಮರ್ಥ್ಯ, ಸಾಧ್ಯತೆ, ನಮ್ಮ ಕರ್ತವ್ಯ ಹಾಗೂ ಪ್ರಸ್ತುತ ಸಂವಿಧಾನವು ಎದುರಿಸುತ್ತಿರುವ ಸವಾಲುಗಳ ಕುರಿತು ಸರಳ ಭಾಷೆಯಲ್ಲಿ ವಿವರಿಸುವ ಪುಸ್ತಕವೊಂದನ್ನು ರಚಿಸಿ ಕೊಟ್ಟಿದ್ದಾರೆ. ಖಂಡಿತವಾಗಿಯೂ ಸಂವಿಧಾನದ ಕುರಿತು ವಿದ್ಯಾರ್ಥಿಗಳಿಗೆ ಇದೊಂದು ಕೈಪಿಡಿಯಾಗಿದೆ. ಈ ಪುಸ್ತಕವನ್ನು ಆಕರವಾಗಿಟ್ಟುಕೊಂಡು ರಾಜ್ಯದಾದ್ಯಂತ "ಸಂವಿಧಾನ ಓದು"(ವಿದ್ಯಾರ್ಥಿಗಳೆಡೆ ಸಂವಿಧಾನದ ನಡೆ) ಅಭಿಯಾನವನ್ನು ನಡೆಸುವ ಆಶಯ ನಮ್ಮದು.

ಮುಂದೆ ರಾಜ್ಯಾದ್ಯಂತ ಈ ಪುಸ್ತಕದ ಮೂಲಕ ವಿವಿಧ ಹಂತಗಳಲ್ಲಿ ಚರ್ಚೆ, ಮಾತುಕತೆ, ವಿಚಾರಸಂಕಿರಣ, ಸಂವಾದಗಳನ್ನು ಏರ್ಪಡಿಸಿ, ಸಂವಿಧಾನವನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನಿಸುವುದು. ಆ ಮೂಲಕ ಭಾರತದ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಇನ್ನಷ್ಟು ಗಟ್ಟಿಗೊಳಿಸಲು ಈ ಪುಸ್ತಕ ಸಹಕಾರಿಯಾಗಲಿದೆ ಎನ್ನುವುದು ಸಹಯಾನ(ಡಾ. ಆರ್.ವಿ.ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ) ಮತ್ತು ಸಮುದಾಯ ಕರ್ನಾಟಕದ ಆಶಯವಾಗಿದೆ. ಹಾಗಾಗಿ ಈ ಅರಿವಿನ ಅಭಿಯಾನಕ್ಕೆ ತಮ್ಮೆಲ್ಲರ ಪಾಲ್ಗೊಳ್ಳುವಿಕೆಯನ್ನು ಬಯಸುತ್ತೇವೆ.

'ಸಹಯಾನ' ಪ್ರಾರಂಭವಾಗಿ ಹತ್ತು ವರ್ಷ. ಅದರ ನೆನಪಿಗೆ ಹಲವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಅದರಲ್ಲಿ ಈ ಪುಸ್ತಕ ಪ್ರಕಟಣೆಯೂ ಒಂದು. ಸಹಯಾನವನ್ನು ಉದ್ಘಾಟಿಸಿದ ಹಿರಿಯರಾದ, ಹಲವಾರು ಜನಶಿಕ್ಷಣದ ಐತಿಹಾಸಿಕ ತೀರ್ಪು ನೀಡಿದ ನ್ಯಾಯಮೂರ್ತಿ ಎಚ್. ಎನ್ ನಾಗಮೋಹನ ದಾಸ್ ಅವರ ಈ ಪುಸ್ತಕವನ್ನು ಪ್ರಕಟಿಸುತ್ತಿರುವ ಹೆಮ್ಮೆ ಕೂಡ ನಮ್ಮದು. ಅವರಿಗೆ ಅನಂತ ಕೃತಜ್ಞತೆಗಳು.

ಇದಕ್ಕೊಂದು ಮುನ್ನುಡಿಯ ಮಾತುಗಳನ್ನು ಬರೆದುಕೊಟ್ಟ ಚಿಂತಕ, ಬಂಡಾಯ ಚಳುವಳಿಯ ಪ್ರೊ. ಬರಗೂರು ರಾಮಚಂದ್ರಪ್ಪ ಅವರಿಗೆ ಅನಂತ ಕೃತಜ್ಞತೆಗಳು.

ಸಹಯಾನದ ಜೊತೆ ಸಾಂಸ್ಕೃತಿಕ ಹೋರಾಟದ ಮುಂಚೂಣಿಯ ಸಂಘಟನೆ ಸಮುದಾಯ ಕೈಜೋಡಿಸಿರುವುದು ಇನ್ನೊಂದು ಸಂತೋಷದ ಸಂಗತಿ. ಪ್ರಕಟಣೆಯ ವಿವಿಧ ಹಂತದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡ ಕೆ.ಎಸ್.ವಿಮಲಾ, ಸತ್ಯಾ ಎಸ್., ಎಚ್.ಎನ್. ಹರಿ, ಟಿ.ಸುರೇಂದ್ರರಾವ್, ಅಚ್ಯುತ, ದೇವೇಂದ್ರ ಗೌಡ, ಚಂದ್ರು ಅವರಿಗೆ, ವಿನ್ಯಾಸಗೊಳಿಸಿದ ಎಂ.ರಾಮು ಅವರಿಗೆ, ಮುದ್ರಿಸಿಕೊಟ್ಟ ಕ್ರಿಯಾ ಪ್ರಕಾಶನ ಅವರಿಗೂ ವಂದನೆಗಳು.

**ಡಾ. ವಿಠ್ಠಲ ಭಂಡಾರಿ**
ಕಾರ್ಯದರ್ಶಿ, ಸಹಯಾನ

# ಲೇಖಕರ ಮಾತು

ನಮ್ಮ ಸಂವಿಧಾನ ಜಗತ್ತಿನ ಅತಿ ದೊಡ್ಡ ಲಿಖಿತ ಸಂವಿಧಾನ. ಅನುಷ್ಠಾನಕ್ಕೆ ಬಂದು 68 ವರ್ಷಗಳು ಕಳೆದರೂ ನಮ್ಮ ಸಂವಿಧಾನ ಪ್ರಸ್ತುತವಾಗಿದೆ. ಆದರೂ, ನಮ್ಮ ದೇಶದ ಬಹುಪಾಲು ಜನ ಸಂವಿಧಾನವನ್ನು ಓದಲಿಲ್ಲ. ಸರ್ಕಾರಗಳು ಸಹ ದೇಶದ ಜನರಿಗೆ ಸಂವಿಧಾನವನ್ನು, ಸಂವಿಧಾನದ ಮೂಲ ಆಶಯಗಳನ್ನು ತಿಳಿಯಪಡಿಸುವ ಕ್ರಮವಹಿಸಲಿಲ್ಲ. ಇತ್ತೀಚೆಗೆ ನಮ್ಮ ಶಿಕ್ಷಣದಲ್ಲಿ ಸಂವಿಧಾನವನ್ನು ತಿಳಿಯಪಡಿಸುವ ಸಣ್ಣ ಪ್ರಯತ್ನ ಪ್ರಾರಂಭವಾಗಿರುವುದು ಸಂತೋಷದ ಸಂಗತಿ.

ದೇಶದ ಕೆಲವು ವಿದ್ಯಾವಂತರು ಸಂವಿಧಾನವನ್ನು ಓದಿದ್ದಾರೆ. ಆದರೆ, ಸರಿಯಾದ ರೀತಿಯಲ್ಲಿ ಅರ್ಥೈಸಲಿಲ್ಲ. ಕೆಲವರು ಅರ್ಥೈಸಿದರೂ, ಅದರ ಆಧಾರದಂತೆ ನಡೆದುಕೊಳ್ಳಲಿಲ್ಲ. ಇದರ ಪರಿಣಾಮವಾಗಿ ಹಲವು ಸಮಸ್ಯೆಗಳು ಇನ್ನೂ ಪೂರ್ಣವಾಗಿ ಪರಿಹಾರವಾಗದೇ ಮುಂದುವರಿದಿವೆ. ಕೆಲವು ಹೊಸ ಸಮಸ್ಯೆಗಳು ಸೇರ್ಪಡೆಯಾಗಿವೆ. ಜೊತೆಗೆ ಹಲವು ಸವಾಲುಗಳು ನಮ್ಮನ್ನು ಕಾಡುತ್ತಿವೆ. ಇಂತಹ ಪರಿಸ್ಥಿತಿಯಲ್ಲಿ ಸಂವಿಧಾನದ ಮೂಲತತ್ವಗಳನ್ನೇ ಮರುಪರಿಶೀಲನೆ ಮಾಡಬೇಕೆಂಬ ಕೂಗು ಕೇಳಿಸುತ್ತಿದೆ! ಮತ್ತೊಂದು ಕಡೆ ಸಂವಿಧಾನವನ್ನು ಬದಲಾಯಿಸಬೇಕೆಂಬ ಕೂಗು ಸಹ ಕೇಳಿಸುತ್ತಿದೆ.

*ನಾವೆಲ್ಲರೂ ನಮ್ಮ ಸಂವಿಧಾನವನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿ, ಅದರಂತೆ ನಡೆದುಕೊಂಡರೆ ಕೆಲವೇ ವರ್ಷಗಳಲ್ಲಿ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಮತ್ತು ಸವಾಲುಗಳನ್ನು ಹಿಮ್ಮೆಟ್ಟಿಸಬಹುದು.*

ಇಂತಹ ಪರಿಸ್ಥಿತಿಯಲ್ಲಿ ದೇಶದ ಯುವಜನತೆ ಯಾವ ದಾರಿಯಲ್ಲಿ ಮುಂದುವರೆಯಬೇಕೆಂದು ತಿಳಿಯದೆ ಗೊಂದಲದಲ್ಲಿದ್ದಾರೆ. ನಮ್ಮ ಸಂವಿಧಾನವನ್ನು ಯಾವುದೇ ಭಾಷೆಯಲ್ಲಿ ಹತ್ತು ಬಾರಿ ಓದಿದರೂ ಬೇಗನೆ ಅರ್ಥವಾಗುವುದಿಲ್ಲ. ಕಾರಣ, ಅದೊಂದು ಕಥೆಯಲ್ಲ, ಕಾದಂಬರಿಯಲ್ಲ ಅಥವಾ ಕವಿತೆಯಲ್ಲ. ಅದೊಂದು ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಕಾರ್ಯಕ್ರಮ. ಸಂವಿಧಾನ ಅರ್ಥವಾಗಲು ಅದರ ಹಿನ್ನೆಲೆ, ಪ್ರಸ್ತುತತೆ ತಿಳಿದಿರಬೇಕು. ಭಾರತ ದೇಶವನ್ನು ಅರ್ಥಮಾಡಿಕೊಳ್ಳದ ಹೊರತು, ಭಾರತದ ಸಂವಿಧಾನ ಅರ್ಥವಾಗುವುದಿಲ್ಲ. ಭಾರತದ ಸಂವಿಧಾನ ಅರ್ಥಮಾಡಿಕೊಳ್ಳದಿದ್ದರೆ, ಅದರ ಮೂಲತತ್ವಗಳು

ತಿಳಿಯುವುದಿಲ್ಲ. ಸಂವಿಧಾನದ ಮೂಲ ತತ್ವಗಳೇ ನಮ್ಮ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ದಿನನಿತ್ಯದ ಕೆಲಸಗಳನ್ನು ಮುನ್ನಡೆಸುವುದು.

ಹಾಗಾಗಿ ನಮ್ಮ ಸಂವಿಧಾನವನ್ನು ಓದಿ ಸುಲಭವಾಗಿ ಅರ್ಥಮಾಡಿಕೊಳ್ಳಲು ಒಂದು ಕ್ರಮವನ್ನು ತಿಳಿಯಪಡಿಸುವ ಪ್ರಯತ್ನವನ್ನು ಈ ಕಿರುಹೊತ್ತಿಗೆಯಲ್ಲಿ ಮಾಡಲಾಗಿದೆ. ನಾವೆಲ್ಲರೂ ನಮ್ಮ ಸಂವಿಧಾನವನ್ನು ಸರಿಯಾದ ರೀತಿಯಲ್ಲಿ ಅರ್ಥೈಸಿ, ಅದರಂತೆ ನಡೆದುಕೊಂಡರೆ ಕೆಲವೇ ವರ್ಷಗಳಲ್ಲಿ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಮತ್ತು ನಾವು ಎದುರಿಸುತ್ತಿರುವ ಸವಾಲುಗಳನ್ನು ಹಿಮ್ಮೆಟ್ಟಿಸಬಹುದು. ನಾವೆಲ್ಲರೂ ಒಟ್ಟಿಗೆ ಶಾಂತಿಯಿಂದ, ನೆಮ್ಮದಿಯಿಂದ, ಯಾವುದೇ ಭಯಭೀತಿ ಇಲ್ಲದೇ ಜೀವಿಸಿ, ದೇಶವನ್ನು ಪ್ರಗತಿಯತ್ತ ಮುನ್ನಡೆಸಿ, ಒಂದು ಸಮ ಸಮಾಜವನ್ನು ಕಟ್ಟಬಹುದೆಂಬ ನಂಬಿಕೆ ನನ್ನದು.

ಈ ನಾಡಿನ ಚಿಂತಕರಾದ ಶ್ರೀಯುತ ಬರಗೂರು ರಾಮಚಂದ್ರಪ್ಪನವರು ಅರ್ಥಪೂರ್ಣವಾದ ಮುನ್ನುಡಿಯನ್ನು ಬರೆದು ಈ ಕೃತಿಯ ಪ್ರಸ್ತುತತೆಯನ್ನು, ಮಹತ್ವವನ್ನು ತಿಳಿಸಿದ್ದಾರೆ. ಅವರಿಗೆ ನನ್ನ ಕೃತಜ್ಞತೆಗಳು.

ನನ್ನ ಈ ಸಣ್ಣ ಪ್ರಯತ್ನದಲ್ಲಿ ಸಲಹೆ ಮತ್ತು ಸಹಕಾರವನ್ನು ನೀಡಿದ ಡಾ. ವಿಠ್ಠಲ ಭಂಡಾರಿ, ಡಾ. ಮೀನಾಕ್ಷಿ ಬಾಳಿ, ಕೆ.ಎಸ್.ವಿಮಲಾ, ಸತ್ಯಾ ಎಸ್., ಟಿ.ಸುರೇಂದ್ರರಾವ್ ಅವರಿಗೆ ನನ್ನ ಕೃತಜ್ಞತೆಗಳು.

ಕಳೆದ ಹತ್ತು ವರ್ಷದ ಹಿಂದೆ ನಾನು ಉತ್ತರ ಕನ್ನಡ ಜಿಲ್ಲೆಯ ಆಡಳಿತಾತ್ಮಕ ನ್ಯಾಯಮೂರ್ತಿಯಾಗಿದ್ದಾಗ ಸಹಯಾನವನ್ನು ಉದ್ಘಾಟಿಸಿದ್ದೆ. ಡಾ. ಆರ್. ವಿ. ಭಂಡಾರಿಯವರ ನೆನಪಿನಲ್ಲಿ ಪ್ರಾರಂಭವಾದ ರಾಜ್ಯದ ಮುಖ್ಯ ಸಾಂಸ್ಕೃತಿಕ ಸಂಘಟನೆ ಸಹಯಾನದಿಂದ ಈ ಕೃತಿ ಹೊರಬರುತ್ತಿರುವುದು ಸಂತೋಷದ ಸಂಗತಿ.

ಸಹಯಾನ ಮತ್ತು ಸಮುದಾಯವು ಜಂಟಿಯಾಗಿ ಈ ಪುಸ್ತಕವನ್ನಿಟ್ಟುಕೊಂಡು "ಸಂವಿಧಾನ ಓದು" ಅಭಿಯಾನವನ್ನು ನಡೆಸಿ ರಾಜ್ಯದ ವಿದ್ಯಾರ್ಥಿಗಳಿಗೆ ನಮ್ಮ ಸಂವಿಧಾನದ ಪರಿಚಯ ಮಾಡಿಕೊಡಲು ಒಂದು ಅರ್ಥಪೂರ್ಣ ಅಭಿಯಾನವನ್ನು ನಡೆಸಲು ಮುಂದಾಗಿದೆ. ಸಮುದಾಯ ಸಂಘಟನೆಗೆ ವಂದನೆಗಳು. ಸುಂದರ ಮುಖಪುಟ ವಿನ್ಯಾಸ ಮಾಡಿದ ರಾಮು ಅವರಿಗೆ, ಮುದ್ರಿಸಿದ ಕ್ರಿಯಾಕ್ಕೆ ವಂದನೆಗಳು

**ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನ ದಾಸ್**
ಆಗಸ್ಟ್ 2018

# ಮುನ್ನುಡಿ

*ಸಂವಿಧಾನವನ್ನು ಅಪಾರ್ಥ ಮಾಡಿಕೊಳ್ಳುವ ಅಥವಾ ಅರ್ಥ ಮಾಡಿಕೊಂಡೇ ಅಸಹನೆಯನ್ನು ಆಸ್ಫೋಟಿಸುವ ಸನ್ನಿವೇಶದಲ್ಲಿ ಜನರಿಗೆ ಸರಳ ಹಾಗೂ ಸ್ಪಷ್ಟ ಮಾಹಿತಿಯನ್ನು ಕೊಡುವ ಅಗತ್ಯವಿದೆ.*

ನಮ್ಮ ಸಂವಿಧಾನಕ್ಕೆ ಸಂಬಂಧಿಸಿದಂತೆ ಕೆಲವು ಕೆಟ್ಟ ಘಟನೆಗಳು ಸಂಭವಿಸುತ್ತಿವೆ. ಇತ್ತೀಚೆಗೆ 12.8.2018 ರಂದು ನಿವೃತ್ತ ನ್ಯಾಯಮೂರ್ತಿಯೊಬ್ಬರು ಹಿಂದೂ ವಕೀಲರ ಸಂಘಟನೆಯ ಅಗತ್ಯವನ್ನು ಪ್ರತಿಪಾದಿಸಿ ಭಾಷಣ ಮಾಡುತ್ತಾ ಹಿಂದುತ್ವವೇ ಭಾರತೀಯತೆ ಎಂದು ಹೇಳಿದ ವರದಿಯೊಂದು ಪತ್ರಿಕೆಗಳಲ್ಲಿ ಪ್ರಕಟವಾಗಿದ್ದನ್ನು ಓದಿದೆ. ಅಚ್ಚರಿಗಿಂತ ಹೆಚ್ಚಾಗಿ ಆತಂಕವಾಯಿತು. ನ್ಯಾಯಾಧೀಶರಾಗಿದ್ದವರೊಬ್ಬರು ಧರ್ಮಾಧಾರಿತ ವಕೀಲರ ಸಂಘಟನೆಯನ್ನು ಸಮರ್ಥಿಸುವುದಾದರೆ ಮತ್ತು ಹಿಂದುತ್ವವೊಂದೇ ಅಥವಾ ಹಿಂದುವಾಗಿರುವುದೊಂದೇ ಭಾರತೀಯತೆ ಎನ್ನುವುದಾದರೆ ಅವರು ಸಂವಿಧಾನವನ್ನು ಹೇಗೆ ಅರ್ಥ ಮಾಡಿಕೊಂಡಿದ್ದಾರೆ ಎಂಬ ಪ್ರಶ್ನೆ ಮೂಡಿತು. ಹಿಂದೂಗಳಾಗಲಿ, ಮುಸ್ಲಿಮರಾಗಲಿ, ಕ್ರೈಸ್ತರಾಗಲಿ, ಯಾವುದೇ ಧರ್ಮದ ವಕೀಲರಾಗಲಿ ತಂತಮ್ಮ ಧರ್ಮಕ್ಕೆ ಸೇರಿದ ಆರೋಪಿಗಳ ರಕ್ಷಣೆಗಾಗಿ ಸಂಘಟಿತರಾಗುತ್ತಾ ಹೋದರೆ ಜಾತ್ಯತೀತ ಹಾಗೂ ಧಾರ್ಮಿಕ ಸೌಹಾರ್ದದ ತತ್ವಕ್ಕೆ ತಿಲಾಂಜಲಿಯಾಗುವುದಿಲ್ಲವೇ? ಕಕ್ಷಿದಾರರು ಯಾವುದೇ ಜಾತಿ, ಧರ್ಮಗಳಿಗೆ ಸೇರಿರಲಿ ಅವರ ರಕ್ಷಣೆಗೆ ಬದ್ಧರಾಗುವುದು ವಕೀಲರ ವೃತ್ತಿ ಧರ್ಮ. ಆದರೆ ಜಾತಿ ಮತ್ತು ಧರ್ಮಾಧಾರಿತವಾಗಿ ವಕೀಲರು ಸಂಘಟಿತರಾಗುವ ಹಿಂದಿನ ಉದ್ದೇಶವೇ ಸಂವಿಧಾನಾತ್ಮಕವಾಗಿ ಸರಿಯೇ ಎಂಬ ಪ್ರಶ್ನೆ ಇಲ್ಲಿ ಮುಖ್ಯವಾಗುತ್ತದೆ. ಹೀಗೆ ಸಂಘಟಿತರಾಗಲು ಸಂವಿಧಾನವು ಸ್ವಾತಂತ್ರ್ಯವನ್ನು ಕೊಟ್ಟಿರಬಹುದು. ಆದರೆ ಸಂವಿಧಾನದ ಆಶಯಕ್ಕೆ ಇದು ಹೊಂದುತ್ತದೆಯೇ ಎಂದು ಕೇಳಿಕೊಳ್ಳಬೇಕಾಗಿದೆ. ಇದಕ್ಕಿಂತಲೂ ಮುಖ್ಯವಾಗುವ ಪ್ರಶ್ನೆಯೆಂದರೆ ಹಿಂದುತ್ವವೇ ಭಾರತೀಯತೆಯೋ ಅಥವಾ ಭಾರತೀಯತೆಯ ಭಾಗವಾಗಿ ಹಿಂದುತ್ವ ಇದೆಯೆ? ಹಿಂದೂಗಳೆಲ್ಲರೂ ಭಾರತೀಯರು. ಆದರೆ ಹಿಂದೂಗಳಷ್ಟೇ ಭಾರತೀಯರೆ? ಈ ದೇಶದಲ್ಲಿರುವ ಖಾಯಂವಾಸಿಗಳೆಲ್ಲರೂ ಭಾರತೀಯರು; ಭಾರತೀಯರಾಗಿ ಬದುಕಬೇಕಾದವರು. ಅವರು ಹಿಂದೂ, ಮುಸ್ಲಿಂ, ಕ್ರೈಸ್ತ, ಸಿಖ್ ಯಾರೇ ಆಗಿರಲಿ ಅವರೆಲ್ಲ ಭಾರತೀಯರು. ಇವರು ತಮ್ಮನ್ನು ಭಾರತೀಯರಲ್ಲ ಎಂದು

ಭಾವಿಸಿದರೆ ಅಂಥವರ ದೇಶಭಕ್ತಿ ಬದ್ಧತೆಯೇ ಪ್ರಶ್ನಾರ್ಹವಾಗುತ್ತದೆ. ಅಷ್ಟೇ ಅಲ್ಲ ಇವರೆಲ್ಲ ಭಾರತೀಯರಲ್ಲ ಎಂದು ಭಾವಿಸುವವರ ದೇಶಭಕ್ತಿ ಬದ್ಧತೆಯೂ ಪ್ರಶ್ನಾರ್ಹವಾಗುತ್ತದೆ. ಹಿಂದುತ್ವವೊಂದೇ ಭಾರತೀಯತೆಯೆಂಬುದು ಭಾರತೀಯತೆಯ ಸಂಕುಚಿತ ವ್ಯಾಖ್ಯಾನವಾಗುತ್ತದೆ. ಈ ಮಾದರಿಯ ವ್ಯಾಖ್ಯಾನಕ್ಕೆ ನ್ಯಾಯಾಧೀಶರಾಗಿದ್ದವರೇ ಕುಮ್ಮಕ್ಕು ಕೊಟ್ಟರೆ ಸಂವಿಧಾನವು ಪ್ರತಿಪಾದಿಸಿದ ಬಹುತ್ವ ಭಾರತೀಯತೆಯ ತತ್ವಕ್ಕೆ ಧಕ್ಕೆಯಾಗುತ್ತದೆ. ನ್ಯಾಯ ತೀರ್ಮಾನಗಳ ಬಗ್ಗೆಯೇ ಸಂಶಯ ಮೂಡುತ್ತದೆ. ನ್ಯಾಯಾಂಗದ ನೇತಾರರೇ ಸಂವಿಧಾನದ ಆಶಯಗಳನ್ನು ಅರ್ಥಮಾಡಿಕೊಳ್ಳದಿದ್ದರೆ ಅಥವಾ ಅಪವ್ಯಾಖ್ಯಾನ ಮಾಡಿಕೊಂಡರೆ ಅಥವಾ ಸಂವಿಧಾನವನ್ನು ನಿರ್ಲಕ್ಷಿಸಿದರೆ ಸಾಮಾನ್ಯರ ಗತಿಯೇನು? ಪ್ರಜಾಪ್ರಭುತ್ವ ಮತ್ತು ಜಾತ್ಯತೀತ ತತ್ವಗಳನ್ನು ಅಂತರ್ಗತ ಮಾಡಿಕೊಂಡ ಸಂವಿಧಾನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವ ಮತ್ತು ಅರ್ಥ ಮಾಡಿಕೊಡುವ ಜವಾಬ್ದಾರಿಯನ್ನು ನ್ಯಾಯಾಂಗ ನೇತಾರರು ನಿರ್ವಹಿಸುವ ಅಗತ್ಯ ಎಂದಿಗಿಂತ ಇಂದು ಹೆಚ್ಚಾಗಿದೆ. ಇಂಥ ಅಗತ್ಯಕ್ಕೆ ಈಗ ನೀಡಿದ ನಿವೃತ್ತ ನ್ಯಾಯಾಧೀಶರ ನಿದರ್ಶನ ಒಂದು ಚಿಕ್ಕ ಒತ್ತಾಸೆಯಾಗಿದೆ. ಇದು ಅವರೊಬ್ಬರ ಕಾರಣಕ್ಕಾಗಿ ನಿರ್ವಹಿಸಬೇಕಾದ ಜವಾಬ್ದಾರಿಯಲ್ಲ. ಅವರೊಬ್ಬರನ್ನೇ ಅನರ್ಥದ ಆವರಣದಲ್ಲಿ ನಿಲ್ಲಿಸಬೇಕಾಗಿಲ್ಲ. ಇಂಥ ಮಾದರಿಯ ಮನೋಧರ್ಮವೊಂದು ನಮ್ಮ ದೇಶದಲ್ಲಿ ಬೆಳೆಯುತ್ತಿದೆಯೆಂಬುದನ್ನು ಗಮನಿಸಬೇಕೆಂದು ಮಾತ್ರ ಈ ನಿದರ್ಶನವನ್ನು ನೀಡಿದ್ದೇನೆ. ಇನ್ನೊಂದು ಸಾಂಕೇತಿಕ ಸಾಕ್ಷಿಯನ್ನು ಇಲ್ಲಿ ಒದಗಿಸಬಹುದು. ಮಹಿಳಾ ದೌರ್ಜನ್ಯ ಕಾಯಿದೆ, ದಲಿತ ದೌರ್ಜನ್ಯ ಕಾಯಿದೆ, ಪರಿಶಿಷ್ಟ ಜಾತಿ ಮತ್ತು ವರ್ಗಗಳ ಬಡ್ತಿಗೆ ಸಂಬಂಧಿಸಿದ ಕಾನೂನು – ಇವೆಲ್ಲವನ್ನು ಸಡಿಲಗೊಳಿಸಿದ ಸುಪ್ರೀಂಕೋರ್ಟ್ ತೀರ್ಪು ಬಂದದ್ದು ಒಂದೇ ತ್ರಿಸದಸ್ಯ ಪೀಠದಿಂದ. ಈ ಪೀಠದ ಮೂವರು ನ್ಯಾಯಾಧೀಶರಿಂದ ಇಂತಹ ತೀರ್ಪುಗಳೇ ಹೆಚ್ಚು ಬರುತ್ತವೆಯೆಂಬುದು ದೆಹಲಿ 'ವಕೀಲ ವಲಯವೊಂದರ' ಅನಿಸಿಕೆ. ಇಂಥ ಕೆಲಸಗಳು ಸಂವಿಧಾನ ನೀಡಿದ ಸ್ವಾತಂತ್ರ್ಯದ ಚೌಕಟ್ಟಿನಲ್ಲೇ ನಡೆಯುತ್ತದೆ. ಈ ಚೌಕಟ್ಟು ತಾಂತ್ರಿಕವಾದುದು; ತಾತ್ವಿಕವಾದುದಲ್ಲ. ಸಂವಿಧಾನವನ್ನು ತಾಂತ್ರಿಕವಾಗಿಯಷ್ಟೇ ಅಲ್ಲ, ತಾತ್ವಿಕವಾಗಿ ಅರ್ಥ ಮಾಡಿಕೊಳ್ಳುವುದು ಆದ್ಯತೆಯಾಗಬೇಕಾಗಿದೆ. ಯಾಕೆಂದರೆ ತಾಂತ್ರಿಕತೆಯು ಕೆಲವು ನಿರ್ದಿಷ್ಟ ನಿಯಮಗಳನ್ನು ನಿರೂಪಿಸುತ್ತದೆ; ತಾತ್ವಿಕತೆ ನಿಯಮಗಳ ಆಂತರ್ಯದಲ್ಲಿರುವ ನೀತಿ ನಿಲುವುಗಳನ್ನು ಪ್ರತಿಪಾದಿಸುತ್ತದೆ. ಈ ಹಿನ್ನೆಲೆಯಲ್ಲಿ ಸಂವಿಧಾನವನ್ನು ನಿಯಮ ಮತ್ತು ನೀತಿ ಎರಡು ನೆಲೆಗಳಲ್ಲಿ ಗ್ರಹಿಸಬೇಕು. ಆಗ ಮಾತ್ರ ಸಾರ್ಥಕ ಅರ್ಥ ಹೊಮ್ಮುತ್ತದೆ.

ಆದರೆ ಈ ದಿಕ್ಕಿನಲ್ಲಿ ನಾವು ಸರಿಯಾಗಿ ಸಾಗುತ್ತಿದ್ದೇವೆಯೆ? ಇಲ್ಲ ಎನ್ನಿಸುತ್ತದೆ. ಹೀಗಾಗಿಯೇ ಸಂವಿಧಾನದ ಆಶಯಗಳನ್ನು ಪ್ರಜ್ಞಾಪೂರ್ವಕವಾಗಿ ಪ್ರಶ್ನಿಸುವವರ ಧೈರ್ಯವೂ ಮುನ್ನಲೆಗೆ ಬರುತ್ತಿದೆ. ಹಿಂದೊಮ್ಮೆ ಕೇಂದ್ರ ಸರ್ಕಾರದ ಸಚಿವರೊಬ್ಬರು 'ಸಂವಿಧಾನವನ್ನು ಬದಲಾಯಿಸಬೇಕು. ಅದಕ್ಕಾಗಿ ನಾವು ಅಧಿಕಾರಕ್ಕೆ ಬಂದಿದ್ದೇವೆ' ಎಂದು ಭಾಷಣ ಮಾಡಿ ವಿವಾದವೆಬ್ಬಿಸಿದರು. ಸಂವಿಧಾನವನ್ನು ಬದಲಾಯಿಸುವುದು ಬೇರೆ, ತಿದ್ದುಪಡಿ ಮಾಡುವುದು ಬೇರೆ. 369ನೇ ವಿಧಿಯಲ್ಲಿ ತಿದ್ದುಪಡಿ ಮಾಡುವ ಅವಕಾಶವನ್ನು ಸಂವಿಧಾನ ನೀಡಿದೆ. ಆದರೆ 'ಸಂವಿಧಾನ ಬದಲಾವಣೆಗಾಗಿ ಬಂದಿದ್ದೇವೆ' ಎಂಬ ಮಾತಿನಲ್ಲಿ ತಿದ್ದುಪಡಿಯ ಅಪೇಕ್ಷೆಯಿಲ್ಲ. ಈ ಮಾದರಿಯ ಮಾತುಗಳು ಅಸಹನೆಯ ಅಸ್ಫೋಟಗೊಳ್ಳುವ ಕ್ರಿಯೆಯೂ ಆಗಬಲ್ಲದೆಂಬುದಕ್ಕೆ 12.8.2018ರಂದು ದೆಹಲಿಯ ಜಂತರ್ ಮಂತರ್ ಬಳಿ ಸಂವಿಧಾನದ ಪ್ರತಿಯನ್ನು ಸುಟ್ಟ ಘಟನೆ ಸಾಕ್ಷಿಯಾಗಿದೆ. ಸಂವಿಧಾನದ ಪ್ರತಿಯನ್ನು ಸುಡುವ ದುಷ್ಟ ಧೈರ್ಯ ಇಲ್ಲಿಯವರೆಗೆ ಯಾರಿಗೂ ಬಂದಿರಲಿಲ್ಲ. ಈಗ ಬರಲು ಒದಗಿದ ಒತ್ತಾಸೆಯೇನು? ದೇಶದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ

ಜಾತಿವಾದ, ಕೋಮುವಾದ ಮತ್ತು ಸಾಮಾಜಿಕ ಅಸಹನೆಗಳಲ್ಲಿ ಸಂವಿಧಾನ ಸುಡುವವರ ದುಷ್ಟ ಧೈರ್ಯದ ಕಾರಣಗಳನ್ನು ಹುಡುಕಬಹುದು. ಸಂವಿಧಾನವು ದೊರಕಿಸಿದ ಮೀಸಲಾತಿ ಸೌಲಭ್ಯದಿಂದ ಮೇಲ್ ಜಾತಿ ಮತ್ತು ವರ್ಗಗಳ ಪ್ರತಿಭಾವಂತರಿಗೆ ಅನ್ಯಾಯವಾಗುತ್ತಿದೆಯೆಂಬ ಹುಸಿಪ್ರಚಾರವೂ ಕಾರಣವಾಗಿರಬಹುದು. ಮೀಸಲಾತಿಯೆಂಬುದು ಜಾತಿಯ ಕಾರಣಕ್ಕಾಗಿಯೇ ದಮನಕ್ಕೆ ಒಳಗಾಗಿ ಸಾಮಾಜಿಕ ಅನಾಥ ಪ್ರಜ್ಞೆಗೆ ತುತ್ತಾದವರಿಗೆ ತುತ್ತು ಕೊಡುವ ಪರಿಕಲ್ಪನೆಯೇ ಹೊರತು ಮೇಲ್ ಜಾತಿ ಮತ್ತು ವರ್ಗಗಳ ವಿರೋಧಿಯಲ್ಲ. ವಿರೋಧಿಯೆಂದು ಭಾವಿಸಬೇಕಿಲ್ಲ; ವಿರೋಧಕ್ಕಾಗಿ ಬಳಸಬೇಕಿಲ್ಲ. ಆದರೆ ಶಿಕ್ಷಣ ಮತ್ತು ಉದ್ಯೋಗಕ್ಕಾಗಿ ಜಾತಿ ಮೀಸಲಾತಿ ಯಾಕೆ ಬೇಕು ಎಂದು ಪ್ರಶ್ನಿಸುವವರಿಗೆ ಮಲ ಎತ್ತುವ, ಬೀದಿ ಕಸಗುಡಿಸುವ ಕೆಲಸಕ್ಕೂ ಜಾತಿಗೂ ಸಂಬಂಧವಿಲ್ಲವೆ ಎಂದು ಕೇಳಬೇಕಾಗುತ್ತದೆ. ಯಾಕೆಂದರೆ ಈ ಕೆಲಸಗಳಿಗೂ ಕೆಳ ಜಾತಿಗಳಿಗೂ ಸಂಬಂಧವಿದೆ. ಮೇಲು ಜಾತಿಯ ಯಾರೂ ಈ ಕೆಲಸ ಮಾಡುವುದಿಲ್ಲ. ಆಯ್ದ ಜಾತಿಗಳಲ್ಲಿ ಉತ್ತಮ ಮಟ್ಟಕ್ಕೇರಿ ತಂತಮ್ಮ ಜಾತಿಯ ಬಡವರನ್ನೇ ಶೋಷಣೆ ಮಾಡುವವರು ಇದ್ದಾರೆಂಬುದನ್ನು ಒಪ್ಪಿದರೂ ಜಾತಿ ಆಧಾರಿತ ಶೋಷಣೆ ನಿಂತಿಲ್ಲ ಎಂಬ ವಾಸ್ತವವನ್ನು ನಿರಾಕರಿಸುವಂತಿಲ್ಲ. ಇಷ್ಟಕ್ಕೂ ಆಯಾ ಜಾತಿಯ ಪ್ರತಿಭಾವಂತರಿಗೆ ಅವಕಾಶ ದೊರಕಿ ತಮಗಿಂತ ಮುಂಚೆ ಜಾತಿ ಕಾರಣದಿಂದಲೇ ಸೌಲಭ್ಯ ಪಡೆದವರ ಸಮಕ್ಕೆ ಬರಲು ಮೀಸಲಾತಿ ಒಂದು ಸಾಧನ. ಆದರೆ ಅದೇ ಅಂತಿಮವಲ್ಲ. ಜಾತಿ ಕಾರಣಕ್ಕೆ ದ್ವೇಷ ಮಾಡುವುದೂ ಸರಿಯಲ್ಲ. ಜಾತಿಯಾಧಾರಿತ ಶ್ರೇಷ್ಠತೆಯ ಕಲ್ಪನೆ ಮತ್ತು ದ್ವೇಷ ಸಾಧನೆಯು ಜಾತಿವಾದವಾಗುತ್ತದೆ. ಇದು ಎಲ್ಲಾ ಜಾತಿಯವರಿಗೂ ಅನ್ವಯಿಸುತ್ತದೆ. ಜಾತಿಯನ್ನು ಒಂದು ಸಾಮಾಜಿಕ ವಾಸ್ತವ ಎಂದು ಗ್ರಹಿಸಿ, ಅನ್ಯಜಾತಿ ದ್ವೇಷವಿಲ್ಲದೆ ದಮನಿತರ ಪರವಾಗಿರುವುದು ಬೇರೆ, ದ್ವೇಷ ಸಾಧನೆ ಮತ್ತು ಶೋಷಣೆಯ ಜಾತಿವಾದ ಬೇರೆ. ಜಾತಿವಾದವನ್ನು ಎಲ್ಲರೂ ವಿರೋಧಿಸಬೇಕು, ಸಂವಿಧಾನವು ಸಾಮಾಜಿಕ ದಮನಿತರ ಕಾರಣಕ್ಕೆ ವಿಶೇಷಾವಕಾಶ ಒದಗಿಸಿರುವುದು ಈ ನೆಲೆಯಲ್ಲಿ ಮಾತ್ರ ಎಂದು ಎಲ್ಲಾ ಜಾತಿಯವರೂ ಅರ್ಥ ಮಾಡಿಕೊಳ್ಳಬೇಕು.

ಧರ್ಮ ದ್ವೇಷ ಸಾಧಿಸುವ ಕೋಮುವಾದದ ಬಗ್ಗೆಯೂ ಸಂವಿಧಾನ ಸ್ಪಷ್ಟ ನೀತಿಯನ್ನು ನಿರೂಪಿಸಿದೆ. ಭಾರತವು ಎಲ್ಲಾ ಧರ್ಮಗಳ ದೇಶ ಎಂದು ಸಾರಿದೆ. ಅಲ್ಪಸಂಖ್ಯಾತರು ಎಂಬ ಕಾರಣಕ್ಕೆ ಬಹುಸಂಖ್ಯಾತರು ಸವಾರಿ ಮಾಡದಿರಲಿ ಎಂಬ ಸಮ ಸಾಮರಸ್ಯದ ಕಾರಣಕ್ಕೆ ಧಾರ್ಮಿಕ ಅಲ್ಪಸಂಖ್ಯಾತರಿಗೆ ಕೆಲವು ವಿಶೇಷ ಅವಕಾಶಗಳನ್ನು ಕಲ್ಪಿಸಿದೆ. ಇದನ್ನು ಬಹುಸಂಖ್ಯಾತರ ವಿರೋಧಿ ನೀತಿಯೆಂದು ತಪ್ಪಾಗಿ ಅರ್ಥೈಸುವ ಶಕ್ತಿಗಳು ಅಸಹನೆಯನ್ನು ಬಿತ್ತುತ್ತಿವೆ. ಇಂತಹ ಕೆಲವು ಕಾರಣಗಳನ್ನು ಮೈದುಂಬಿಕೊಂಡ ಗೂಳಿಗುಣ ಗುಂಪು ಸಂವಿಧಾನವನ್ನು ಸುಡುವ ಮಟ್ಟಕ್ಕೂ ಹೋಗಿ ಮೆರೆಯುವಂತಾಗಿದೆ. ಆದರೆ ಸಂವಿಧಾನವು ಪ್ರತಿಪಾದಿಸಿದ ಬಹುಧರ್ಮೀಯ ಭಾರತದ ಕಲ್ಪನೆಯನ್ನು ಹಿಂದೂ ನಿಷ್ಠ ನೇತಾರರೂ ಒಪ್ಪಿದ್ದಾರೆಂಬುದನ್ನು ಇಂಥವರು ಅರಿಯಬೇಕು. ಅಷ್ಟೇ ಅಲ್ಲ, ಸಂವಿಧಾವನ್ನು ಸುಡುವುದೆಂದರೆ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಸೋದರತೆ ಮತ್ತು ಸಮಾನತೆಯ ಸಿದ್ಧಾಂತಗಳನ್ನು ಸುಟ್ಟಂತೆ ಎಂಬುದನ್ನು ತಿಳಿಯಬೇಕು. ಸಂವಿಧಾನ ರಚನಾ ಸಭೆಯ ಚರ್ಚೆಯಲ್ಲಿ ಭಾಗವಹಿಸಿದ ಹಿಂದೂ ಧರ್ಮ ನಿಷ್ಠರಾದ ಡಾ. ರಾಧಾಕೃಷ್ಣನ್ ಅವರು 'ನಮ್ಮ ದೇಶವು ಯಾವುದೇ ಒಂದು ಧರ್ಮಕ್ಕೆ ಸೇರಿದ್ದಲ್ಲ. ಒಂದೇ ಧರ್ಮದ ಪ್ರಾಬಲ್ಯ ಸಲ್ಲ. ನಮ್ಮದು ಸರ್ವಧರ್ಮಗಳ ದೇಶವಾಗಿರಬೇಕು' ಎಂಬರ್ಥದ ಮಾತುಗಳನ್ನು ಸ್ಪಷ್ಟವಾಗಿ ಹೇಳಿದ್ದರು. ಹಿಂದೂ ಧರ್ಮ ನಿಷ್ಠರಲ್ಲದ ಡಾ. ಅಂಬೇಡ್ಕರ್ ಅವರೂ ಇದೇ ವಿಚಾರವನ್ನು ಪ್ರತಿಪಾದಿಸಿದರು ಮತ್ತು ಸಂವಿಧಾನದಲ್ಲಿ ಅಳವಡಿಸಿದರು. ಗಾಂಧೀಜಿಯವರು ಸ್ವಾತಂತ್ರ್ಯ

ಪೂರ್ವದಲ್ಲೇ ಹಿಂದೂ ರಾಷ್ಟ್ರದ ಕಲ್ಪನೆಯನ್ನು ವಿರೋಧಿಸಿದ್ದರು. ಬಹುಧರ್ಮೀಯ ಸಾಮರಸ್ಯವನ್ನು ಪ್ರತಿಪಾದಿಸಿದ ಹಿಂದೂ ಧರ್ಮನಿಷ್ಠರಾಗಿ ಬದುಕಿದವರು. ವಾಜಪೇಯಿಯವರು ಜಾತ್ಯತೀತತೆಯನ್ನು ಸರ್ವಧರ್ಮ ಸಮಭಾವ ಎಂದು ವ್ಯಾಖ್ಯಾನಿಸಿದರು. ಆದ್ದರಿಂದ ಸರ್ವಧರ್ಮ ಸಹಿಷ್ಣುತೆ ಮತ್ತು ಸಮತೆಯು ಸಂವಿಧಾನದ ಆಶಯ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಈ ಆಶಯವನ್ನೇ ಒಪ್ಪದಿರುವವರು ನೈಜ ಭಾರತೀಯರಾಗಲು ಅರ್ಹರಲ್ಲ.

ಸಂವಿಧಾನವನ್ನು ಅಪಾರ್ಥ ಮಾಡಿಕೊಳ್ಳುವ ಅಥವಾ ಅರ್ಥ ಮಾಡಿಕೊಂಡೇ ಅಸಹನೆಯನ್ನು ಆಸ್ಫೋಟಿಸುವ ಸನ್ನಿವೇಶದಲ್ಲಿ ಜನರಿಗೆ ಸರಳ ಹಾಗೂ ಸ್ಪಷ್ಟ ಮಾಹಿತಿಯನ್ನು ಕೊಡುವ ಅಗತ್ಯವಿದೆ. ತಿಳುವಳಿಕೆ ನೀಡುವ ಈ ಚಾರಿತ್ರಿಕ ಅಗತ್ಯವೊಂದನ್ನು ಜಸ್ಟೀಸ್ ನಾಗಮೋಹನ ದಾಸ್ ಅವರು ಸಂವಿಧಾನದ ಬಗ್ಗೆ ಬರೆದಿರುವ ಪುಟ್ಟ ಪುಸ್ತಕವು ಪೂರೈಸುತ್ತದೆ. ಈ ಕಾರಣಕ್ಕಾಗಿ ನಾಗಮೋಹನ ದಾಸ್ ಪುಸ್ತಕವು ಗಾತ್ರದಲ್ಲಿ ಚಿಕ್ಕದಾದರೂ, ಸಮಕಾಲೀನವಾಗಿ ದೊಡ್ಡ ಪಾತ್ರವನ್ನು ನಿರ್ವಹಿಸುತ್ತದೆ. ವಿದ್ಯಾರ್ಥಿಗಳು, ಯುವಜನರು ಮತ್ತು ಸಾಮಾನ್ಯ ಓದುಗರಿಗೆ ಅರ್ಥವಾಗಬೇಕೆಂಬ ನಿರ್ದಿಷ್ಟ ಉದ್ದೇಶಕ್ಕಾಗಿ ಬರೆದಿರುವುದೇ ಈ ಪುಸ್ತಕದ ವೈಶಿಷ್ಟ್ಯವಾಗಿದೆ.

ಜಸ್ಟೀಸ್ ನಾಗಮೋಹನ ದಾಸ್ ಅವರು ವಿಶಿಷ್ಟ ಒಳನೋಟಗಳ ನ್ಯಾಯಮೂರ್ತಿಯಾಗಿದ್ದವರು. ಸಾಮಾಜಿಕ ನ್ಯಾಯದ ನಿಜ ವ್ಯಾಖ್ಯಾನಕಾರರು. ಸಂವಿಧಾನದ ಆಶಯಗಳ ಅಂತರಂಗವನ್ನು ಪ್ರವೇಶಿಸಿ ನಿಯಮಗಳ ಒಳಗಿನ ನೀತಿಯನ್ನು ಶೋಧಿಸಿ ತೀರ್ಪಿನ ರೂಪ ಕೊಟ್ಟವರು. ಅವರು **'ಸಂವಿಧಾನ ಓದು'** ಈ ಪುಸ್ತಕದ ಮೂಲಕ ಸಂವಿಧಾನಾತ್ಮಕ ಸಾಮಾಜಿಕ ಜವಾಬ್ದಾರಿಯನ್ನು ಜಾರಿಗೊಳಿಸಿದ್ದಾರೆ. ಸೈದ್ಧಾಂತಿಕ ಗ್ರಹಿಕೆಗಳನ್ನು ಸರಳ ವಿವರಣೆಗಳ ಮೂಲಕ ಜನಮನಕ್ಕೆ ತಲುಪಿಸುವ ಅಭಿವ್ಯಕ್ತಿ ಬದ್ಧತೆಯನ್ನು ತೋರಿದ್ದಾರೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ.

ನಾಗಮೋಹನ ದಾಸ್ ಅವರು ಸಂವಿಧಾನದ ವಿವರಗಳನ್ನಷ್ಟೇ ಕೊಡುವುದಿಲ್ಲ. ಮನುಷ್ಯನ ಹುಟ್ಟಿನಿಂದ ಆರಂಭಿಸಿ, ಸಂಕ್ಷಿಪ್ತ ವಿವರಗಳನ್ನು ನೀಡುತ್ತ ಸಂವಿಧಾನವನ್ನು ಪ್ರವೇಶಿಸುತ್ತಾರೆ. ಭಾರತೀಯ ಸಂವಿಧಾನದ ಮಹತ್ವವನ್ನು ಸರಳ, ಸಮರ್ಥ ರೀತಿಯಲ್ಲಿ ಮಂಡಿಸುತ್ತಾರೆ. ಅದಕ್ಕೆ ಮುಂಚೆ ಸಂವಿಧಾನದ ಕರಡು ರಚನಾ ಸಮಿತಿಯಿದ್ದರೂ ಡಾ. ಅಂಬೇಡ್ಕರ್ ಅವರೇ ಒಟ್ಟು ರಚನೆಯ ಹೊಣೆ ಹೊತ್ತುಕೊಂಡು ಪರಿಪೂರ್ಣವಾಗಿ ಕಾರ್ಯನಿರ್ವಹಿಸಿದ್ದನ್ನು ಟಿ.ಟಿ.ಕೃಷ್ಣಮಾಚಾರಿ ಅವರ ಮಾತುಗಳ ಮೂಲಕ ವಿವರಿಸುತ್ತಾರೆ. ಈ ಉಲ್ಲೇಖ ಮುಖ್ಯವಾಗುತ್ತದೆ. ಯಾಕೆಂದರೆ ಕೆಲವು ಸಿನಿಕವರೇಣ್ಯರು ಅಂಬೇಡ್ಕರ್ ಒಬ್ಬರೇ ಸಂವಿಧಾನ ರಚಿಸಲಿಲ್ಲವೆಂದೂ ಅದರ ಕೀರ್ತಿ ಇಡೀ ಸಮಿತಿಗೆ ಹೋಗಬೇಕೆಂದು ವಾದಿಸಿದ್ದು ವರದಿಯಾಗಿದೆ. ನಿಜ, ಸಮಿತಿಗೂ ಕೀರ್ತಿ ಸಲ್ಲಬೇಕಾದರೂ, ಅದರ ಅಧ್ಯಕ್ಷರ ಪಾತ್ರ ಬಹುಮುಖ್ಯ. ಸಾಮಾನ್ಯವಾಗಿ ಇಂತಹ ಸಮಿತಿಗಳಲ್ಲಿ ಚರ್ಚೆ, ಚಿಂತನೆಗಳ ನಂತರ ಅಧ್ಯಕ್ಷರೇ ಕರಡನ್ನು ಬರೆದು ಸಮಿತಿ ಮುಂದೆ ಮಂಡಿಸುತ್ತಾರೆ. ಸಂವಿಧಾನ ರಚನಾ ಸಮತಿಯಲ್ಲಂತೂ ವಿವಿಧ ಕಾರಣಗಳಿಗಾಗಿ ಸಮಿತಿಯ ಸದಸ್ಯರು ತಮ್ಮ ಜವಾಬ್ದಾರಿ ನಿರ್ವಹಿಸಲು ಆಗುವುದಿಲ್ಲವೆಂದು ಕೃಷ್ಣಮಾಚಾರಿಯವರು ಸ್ಪಷ್ಟಪಡಿಸಿದ್ದಾರೆ. ಒಬ್ಬರ ಅನಾರೋಗ್ಯ, ಒಬ್ಬರ ಮೃತ್ಯು– ಇವೇ ಮುಂತಾದ ಕಾರಣಗಳಿಂದ ಡಾ. ಅಂಬೇಡ್ಕರ್ ಅವರೇ ಸಂವಿಧಾನ ಕರಡನ್ನು ಪೂರ್ಣ ಪ್ರಮಾಣದಲ್ಲಿ ಸಿದ್ದಗೊಳಿಸಿದರೆಂದು ಸ್ಪಷ್ಟಪಡಿಸುತ್ತಾರೆ. ನಾಗಮೋಹನ ದಾಸ್ ಅವರು ಕೃಷ್ಣಮಾಚಾರಿಯವರ ಮಾತುಗಳನ್ನು ಹಾಗೇ ಉಲ್ಲೇಖಿಸಿ (ಉದ್ದೇಶಪೂರ್ವ) ಅನುಮಾನಗಳನ್ನು ದೂರ ಮಾಡಿದ್ದಾರೆ. ಕರಡು ರಚನೆಯ ನಂತರ ಪೂರ್ಣ

ಸಂವಿಧಾನ ಸಭೆಯಲ್ಲಿ ಸಾಕಷ್ಟು ಚರ್ಚೆಯಾಗಿ ಸಂವಿಧಾನದ ಈಗಿನ ರೂಪ ಅಂಗೀಕೃತವಾಗಿದೆ. ಡಾ. ಅಂಬೇಡ್ಕರ್ ಆಶಯಗಳು ಸಂವಿಧಾನದಲ್ಲಿ ಅಂತರ್ಗತವಾಗಿವೆ. ಆದ್ದರಿಂದ ಸಂವಿಧಾನ ರಚನೆಯ ಕೀರ್ತಿ ಡಾ. ಅಂಬೇಡ್ಕರ್ ಅವರಿಗೇ ಸಲ್ಲಬೇಕು. ನಿಜದ ವಿಷಾದವೆಂದರೆ ಹೀಗೆ ವಾದಿಸಬೇಕಾದ ಸನ್ನಿವೇಶ ನಮ್ಮ ದೇಶದಲ್ಲಿ ಸೃಷ್ಟಿಯಾಗಿದೆ ಎಂಬುದು. ಈ ಕಾರಣದಿಂದಲೇ ಸಂವಿಧಾನದ ಆಶಯಗಳನ್ನು ಜನರಿಗೆ ಸ್ಪಷ್ಟ ಮಾತುಗಳಲ್ಲಿ ತಲುಪಿಸಬೇಕಾಗಿದೆ. ಸಂವಿಧಾನದ ಆಶಯಗಳನ್ನು ಉಳಿಸಿಕೊಳ್ಳಬೇಕಾಗಿದೆ. ಇಂತಹ ರಚನಾತ್ಮಕ ಕೆಲಸಕ್ಕೆ ನಾಗಮೋಹನದಾಸ್ ಅವರ ಪುಸ್ತಕ ಪೂರ್ಣ ಸಹಕಾರಿಯಾಗಿದೆ.

ನಾಗಮೋಹನ ದಾಸ್ ಅವರು ಸಂವಿಧಾನದ ಆಶಯಗಳ ಅನಾವರಣ ಮತ್ತು ವಿಶ್ಲೇಷಣೆಯನ್ನು ಸಮರ್ಥ ಸರಳ ವಿಧಾನದಲ್ಲಿ ನಿರ್ವಹಿಸಿದ್ದಾರೆ. ಸರಳತೆ ಎನ್ನುವುದು ಗೊಂದಲ ದೂರವಾದ ಒಂದು ಪ್ರಜ್ಞಾಪೂರ್ವಕ ಪ್ರಯತ್ನವಾಗಿದೆ. ಈ ನಿಟ್ಟಿನಲ್ಲಿ ವಿವಿಧ ದೇಶಗಳ ಸಂವಿಧಾನಗಳ ಸಂಕ್ಷಿಪ್ತ ಸಾರವನ್ನೂ ತಿಳಿಸುತ್ತ ಭಾರತೀಯ ಸಂವಿಧಾನದ ಚಾರಿತ್ರಿಕ ಮಹತ್ವವನ್ನು ಮನದಟ್ಟು ಮಾಡುತ್ತಾರೆ. ಚಾರಿತ್ರಿಕತೆ ಮತ್ತು ಸಮಕಾಲೀನತೆಗಳು ಆಶಯಗಳ ಅಂತರ್ ಸಂಬಂಧ ಸಾಧಿಸಿದ ಕೃತಿಯನ್ನು ಕೊಟ್ಟಿದ್ದಾರೆ.

ಬಹುಮುಖ್ಯವಾಗಿ, ಈ ಪುಸ್ತಕದಲ್ಲಿ ಸಾಮಾಜಿಕ ನ್ಯಾಯ ಮತ್ತು ಜಾತ್ಯತೀತೆಗಳ ಬಗ್ಗೆ ಯಾವುದೇ ಗೊಂದಲವಿಲ್ಲದ ಸ್ಪಷ್ಟ ವ್ಯಾಖ್ಯಾನವಿದೆ. ಅಪವ್ಯಾಖ್ಯಾನಗಳಿಂದ ಹಾದಿ ತಪ್ಪಿಸುವ ತಜ್ಞತಂಡಕ್ಕೆ ತಕ್ಕ ಉತ್ತರವೆಂಬಂತೆ ಈ ವ್ಯಾಖ್ಯಾನ ಮೂಡಿಬಂದಿದೆ. ಈಗ ನಾಗಮೋಹನ ದಾಸ್ ಅವರ ವ್ಯಾಖ್ಯಾನ ಓದಿ :

'ಜಾತ್ಯತೀತತೆಯೆಂದರೆ ಧರ್ಮವನ್ನು ರಾಜಕಾರಣದಿಂದ ಬೇರ್ಪಡಿಸುವುದು. ಸರ್ಕಾರಕ್ಕೆ ತನ್ನದೇ ಆದ ಧರ್ಮವಿರಕೂಡದು. ಸರ್ಕಾರ ಬೇರೆ ಬೇರೆ ಧರ್ಮಗಳ ಮಧ್ಯೆ ತಾರತಮ್ಯ ತೋರಬಾರದು. ಧರ್ಮದ ಪೋಷಣೆಗೆ ಸರ್ಕಾರ ಜನರ ಮೇಲೆ ತೆರಿಗೆ ವಿಧಿಸಬಾರದು. ಸರ್ಕಾರದ ನೀತಿಗಳು ಯಾವದೇ ಧರ್ಮದ ಫರಮಾನ್‌ಗಳಿಂದ ಪ್ರೇರಿತವಾಗಿರಕೂಡದು. ಇಂತಹ ಒಂದು ರಾಜಕೀಯ ವ್ಯವಸ್ಥೆಯು 'ಜಾತ್ಯತೀತ ವ್ಯವಸ್ಥೆ' ಎಂದು ಕರೆಯಲ್ಪಡುತ್ತದೆ. ಜಾತ್ಯತೀತತೆ ಎಂದರೆ ಧರ್ಮ ವಿರೋಧಿಯಲ್ಲ. ಆದರೆ ಯಾವ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು ಅಮಾನವೀಯವೋ, ಅನಾರೋಗ್ಯಕರವೋ, ಹಿಂಸಾತ್ಮಕವೋ, ದಮನಕಾರಿಯೋ ಮತ್ತು ಮಾನವ ಘನತೆಗೆ ಧಕ್ಕೆ ತರುತ್ತವೋ ಅಂಥವುಗಳನ್ನು ನಿಷೇಧಿಸುವ ಹಕ್ಕನ್ನು ಸರ್ಕಾರ ಹೊಂದಿರುತ್ತದೆ'

'ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಸಾಮಾಜಿಕ ನ್ಯಾಯವು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ.... ಸಾಮಾಜಿಕ ನ್ಯಾಯವೆಂದರೆ ಹಿಂದುಳಿದವರು, ಬಡವರು, ತುಳಿತಕ್ಕೆ ಮತ್ತು ಶೋಷಣೆಗೆ ಒಳಪಟ್ಟ ಅಸಹಾಯಕರನ್ನು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮೇಲಕ್ಕೆತ್ತಲು ಶಾಸನಗಳನ್ನು, ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ರೂಪಿಸಿ, ಅವುಗಳನ್ನು ಜಾರಿಗೊಳಿಸುವುದು. ಆಮೂಲಕ ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದು'

ಹೀಗೆ ವ್ಯಾಖ್ಯಾನಿಸುತ್ತಲೇ ಈ ಪರಿಕಲ್ಪನೆಗಳ ಜಾರಿಯಲ್ಲಿ ಆಗಿರುವ ಸಾಫಲ್ಯ ವೈಫಲ್ಯಗಳನ್ನು ನಾಗಮೋಹನ ದಾಸ್ ಅವರು ವಿವರಿಸುತ್ತಾರೆ. ಮುಂದುವರೆದು ಮಾನವ ಹಕ್ಕುಗಳು, ಮಹಿಳಾ ಹಕ್ಕುಗಳು, ನ್ಯಾಯಾಂಗದ ಸ್ಥಿತಿಗತಿ, ಪ್ರಜಾಪ್ರಭುತ್ವಕ್ಕೆ ಒದಗಿರುವ ಅಪಾಯ – ಮುಂತಾದ

ವಿಷಯಗಳನ್ನು ಪಕ್ಷಪಾತಕ್ಕೆ ಅವಕಾಶವಾಗದಂತೆ ಕಟುವಾಸ್ತವಗಳ ನೆಲೆ ನಿಲುವುಗಳಲ್ಲಿ ನಿರೂಪಿಸಿದ್ದಾರೆ.

ಪ್ರಜಾಪ್ರಭುತ್ವ ಪದ್ಧತಿ ಕುರಿತು ನಾಗಮೋಹನ್ ದಾಸ್ ನೀಡಿರುವ ವಿವರಣೆ ಸಂವಿಧಾನದ ಒಂದು ಮಹತ್ವಪೂರ್ಣ ಆಶಯವನ್ನು ಮನದಟ್ಟು ಮಾಡಿಕೊಡುತ್ತದೆ. 'ಅಭಿವ್ಯಕ್ತಿ ಸ್ವಾತಂತ್ರ್ಯವು ಪ್ರಜಾತಾಂತ್ರಿಕ ವ್ಯವಸ್ಥೆಯ ತಳಹದಿ ಎಂಬ ಸ್ಪಷ್ಟ ಕಲ್ಪನೆ ನಮ್ಮ ಸಂವಿಧಾನ ರಚನಕಾರರಿಗೆ ಇತ್ತು' ಎಂದು ಹೇಳುತ್ತಲೇ ಫ್ರಾನ್ಸ್‌ನ ಚಿಂತಕ ವಾಲ್ಟೇರ್ ಹೇಳಿರುವ ಮಾತುಗಳನ್ನು ಉಲ್ಲೇಖಿಸಿರುವುದು ಅರ್ಥಪೂರ್ಣವಾಗಿದೆ. ವಾಲ್ಟೇರ್ ಮಾತು ಹೀಗಿದೆ 'ನಿನ್ನ ಯಾವ ಮಾತನ್ನೂ ನಾನು ಒಪ್ಪುವುದಿಲ್ಲ. ಆದರೆ ನಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕನ್ನು ನನ್ನ ಉಸಿರಿರುವವರೆಗೂ ಸಮರ್ಥಿಸುತ್ತೇನೆ'. ಭಿನ್ನಾಭಿಪ್ರಾಯಗಳಿಗಾಗಿ ಬಲಿಕೇಳುವ ಕಲಿ ವಿಕಾರಿಗಳು ವಾಲ್ಟೇರ್ ಮಾತನ್ನು ಮನನ ಮಾಡಿಕೊಂಡರೆ ಮನುಷ್ಯರಾಗುತ್ತಾರೆ. ಈ ಪುಸ್ತಕದಲ್ಲಿ ಸೋವಿಯತ್ ರಷ್ಯಾ ಸಂವಿಧಾನವು 'ದೇಶವೆಂದರೆ ಮನುಷ್ಯರು' ಎಂದು ಭಾವಿಸಿರುವುದನ್ನು ನಾಗಮೋಹನ ದಾಸ್ ಉಲ್ಲೇಖಿಸುತ್ತಾರೆ. ನಮ್ಮ ದೇಶದ ಸಂವಿಧಾವೂ ಮನುಷ್ಯತ್ವದ ಒಂದು ಮಹತ್ವದ ದಾಖಲೆ ಎಂದು ನಾವು ತಿಳಿಯಬೇಕಾಗಿದೆ. ಆದ್ದರಿಂದ ನನಗನ್ನಿಸುತ್ತದೆ; ಸಂವಿಧಾನವನ್ನು ಶಾಸ್ತ್ರವೆಂದು ತಿಳಿಯುವ ಬದಲು ಸಂವೇದನೆಯೆಂದು ಭಾವಿಸಬೇಕು. ಸಂವೇದನೆಯ ಭಾವನೆ ಮತ್ತು ಚಿಂತನೆ ಒಂದಾಗಿ ಸಂವಿಧಾನ ಎದೆಯ ದನಿಯಾಗಬೇಕು. ಕುವೆಂಪು ಅವರು 'ಯಾವ ಕಾಲದ ಶಾಸ್ತ್ರ ಏನು ಹೇಳಿದರೇನು, ಎದೆಯ ದನಿಗೂ ಮಿಗಿಲು ಶಾಸ್ತ್ರವಿಹುದೇನು?' ಎಂಬ ಮಾತನ್ನು ನಮ್ಮ ಸಂವಿಧಾನಕ್ಕೂ ಅನ್ವಯಿಸಿಕೊಳ್ಳಬೇಕು.

ನಮ್ಮ ದೇಶದ ಎದೆಯ ದನಿಯೇ ನಮ್ಮ ಸಂವಿಧಾನ ಎಂದಾದರೆ, ಈ ಎದೆಯ ದನಿಯ ಒಳದನಿಗೆ ನಾಗಮೋಹನ್ ದಾಸ್ ಅವರ ಪುಸ್ತಕ. ಇದನ್ನು ಮತ್ತೆ ಮತ್ತೇ ಓದೋಣ. ಸಂವಿಧಾನಾತ್ಮಕ ಮನುಷ್ಯರಾಗೋಣ.

**– ಬರಗೂರು ರಾಮಚಂದ್ರಪ್ಪ**
ಬೆಂಗಳೂರು

# ವಿಷಯ ಸೂಚಿ


| ಭಾಗ | ವಿಷಯ | | ಪುಟ |
|---|---|---|---|
| **1** | **ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು** | | **1** |
| | 1. ಆದಿಕಾಲದ ಸಮುದಾಯ ಸಮಾಜ | 1 | |
| | 2. ಗುಲಾಮಗಿರಿ ಸಮಾಜ | 2 | |
| | 3. ಸಾಮಂತಶಾಹಿ ಸಮಾಜ | 2 | |
| | 4. ಬಂಡವಾಳಶಾಹಿ ಸಮಾಜ | 4 | |
| | 5. ಸಮಾಜವಾದಿ ಸಮಾಜ | 5 | |
| **2** | **ಸಂವಿಧಾನಗಳ ಉಗಮ** | | **7** |
| | 1. ಇಂಗ್ಲೆಂಡಿನ ಮ್ಯಾಗ್ನಕಾರ್ಟ | 8 | |
| | 2. ಅಮೇರಿಕದ ಸಂವಿಧಾನ | 8 | |
| | 3. ಫ್ರಾನ್ಸ್‌ನ ಸಂವಿಧಾನ | 9 | |
| | 4. ಸೋವಿಯತ್ ರಷ್ಯಾದ ಸಂವಿಧಾನ | 9 | |
| **3** | **ಭಾರತ ದೇಶ** | | **12** |
| | 1. ಜನತೆ | 13 | |
| | 2. ಇತಿಹಾಸ | 15 | |
| | 3. ಧರ್ಮಗಳು | 16 | |
| | 4. ಜಾತಿಗಳು | 17 | |
| | 5. ನ್ಯಾಯ ವಿತರಣೆ ಪದ್ಧತಿ | 18 | |
| | 6. ಆರ್ಥಿಕ ವ್ಯವಸ್ಥೆ | 21 | |
| | 7. ಧಾರ್ಮಿಕ ಕಟ್ಟುಪಾಡು, ಸಾಮಾಜಿಕ ಮೌಲ್ಯಗಳು ಮತ್ತು ಮೂಢನಂಬಿಕೆಗಳು | 22 | |

**4** **ಭಾರತದ ಸ್ವಾತಂತ್ರ್ಯ ಹೋರಾಟ** **25**

**5** **ಭಾರತದ ಸಂವಿಧಾನ ರಚನೆ** **28**

1. ಸಂವಿಧಾನ ಸಭೆ 28
2. ಪ್ರೇರಕ ಅಂಶಗಳು 30
3. ಕರಡು ಸಂವಿಧಾನದ ಅಳವಡಿಕೆ 33

**6** **ನಮ್ಮ ಸಂವಿಧಾನದಲ್ಲಿ ಏನಿದೆ?** **38**

**7** **ಸಂವಿಧಾನದ ಮೂಲತತ್ವಗಳು** **49**

**8** **ಸಂವಿಧಾನಕ್ಕೆ ತಿದ್ದುಪಡಿಗಳು** **52**

**9** **ಗಣರಾಜ್ಯ ಭಾರತದ ಸಾಧನೆಗಳು** **55**

**10** **ನಮ್ಮ ಮುಂದಿರುವ ಸವಾಲುಗಳು** **57**

1. ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವ 57
2. ಹಕ್ಕುಗಳ ದಮನ 59
3. ಗಂಡಾಂತರದಲ್ಲಿ ರೂಲ್ ಆಫ್ ಲಾ 61
4. ಪ್ರಜಾಪ್ರಭುತ್ವವಾದಿ ಸಂಸ್ಥೆಗಳ ಸ್ವಾಯತ್ತತೆಗೆ ಧಕ್ಕೆ 63
5. ಆಪತ್ತಿನಲ್ಲಿರುವ ಧರ್ಮನಿರಪೇಕ್ಷತೆ ಮತ್ತು ಜಾತ್ಯತೀತತೆ 64
6. ಮರೆಯಾಗುತ್ತಿರುವ ಕಲ್ಯಾಣರಾಜ್ಯದ ಪರಿಕಲ್ಪನೆ 66
7. ಅಪ್ರಸ್ತುತವಾಗುತ್ತಿರುವ ಸಾಮಾಜಿಕ ನ್ಯಾಯ 67
8. ಮಾನವ ಹಕ್ಕುಗಳ ಉಲ್ಲಂಘನೆ 68

**11** **ಮುಂದಿನ ದಾರಿ** **70**

# ಭಾಗ 1

## ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳು

*"ಸಮಾಜವಾದಿ ಸಮಾಜದಲ್ಲಿ 'ಸ್ವಾತಂತ್ರ್ಯ' ಎಂಬ ಪದ ಕೇವಲ ಘೋಷಣೆಯಾಗಿ ಉಳಿಯದೆ ವಾಸ್ತವಿಕ ಅರ್ಥ ಪಡೆಯುವುದು ಬಹಳ ಮುಖ್ಯ. ಸ್ವಾತಂತ್ರ್ಯವೆಂದರೆ ಪೂರ್ಣ ಹಾಗೂ ಸಮೃದ್ಧ ಜೀವನಾವಕಾಶ. ಪ್ರತಿಯೊಬ್ಬರ ಸಾಂಸ್ಕೃತಿಕ, ಬೌದ್ಧಿಕ ಹಾಗೂ ಭೌತಿಕ ಬೆಳವಣಿಗೆಯೇ ನಿಜವಾದ ಸ್ವಾತಂತ್ರ್ಯ."*

ನಮ್ಮ ಪೂರ್ವಜರು ವಾನರ ಅವಸ್ಥೆಯಿಂದ ಮಾನವ ಅವಸ್ಥೆಗೆ ಪರಿವರ್ತನೆ ಹೊಂದಲು ಸಾವಿರಾರು ವರ್ಷಗಳ ಕಾಲ ಹಿಡಿಯಿತು. ಭಾರತ ಉಪಖಂಡದ ಮೊದಲ ಮಾನವರು ಸುಮಾರು ಎರಡು ದಶಲಕ್ಷ ವರ್ಷಗಳ ಹಿಂದೆ ಕಾಣಿಸಿಕೊಂಡರು ಎಂದು ಅಂದಾಜು ಮಾಡಲಾಗಿದೆ. ಸರಿಸುಮಾರು 75 ಸಾವಿರ ವರ್ಷಗಳ ಹಿಂದೆ ಭಾರತದಲ್ಲಿ ಆಧುನಿಕ ಮಾನವರ ಆಗಮನವಾಯಿತೆಂದೂ ಅಂದಾಜಿಸಲಾಗಿದೆ. ಜಗತ್ತಿನ ಸುದೀರ್ಘ ಮಾನವ ಇತಿಹಾಸದಲ್ಲಿ ಐದು ರೀತಿಯ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗಳನ್ನು ಗುರುತಿಸಬಹುದು:

### 1. ಆದಿಕಾಲದ 'ಸಮುದಾಯ ಸಮಾಜ':

ಆದಿಕಾಲದಲ್ಲಿ ಶ್ರಮವು ಸಾಮೂಹಿಕ ಲಕ್ಷಣ ಹೊಂದಿತ್ತು. ಜನರು ಗುಂಪು ಗುಂಪುಗಳಾಗಿ, ಬುಡಕಟ್ಟುಗಳಾಗಿ ವಾಸಿಸುತ್ತಿದ್ದರು. ಅವರು ತಮ್ಮ ಆಹಾರಕ್ಕಾಗಿ ಜೊತೆಗೂಡಿ ಬೇಟೆಯಾಡುತ್ತಿದ್ದರು. ಮನೆಗಳನ್ನು ಕಟ್ಟಲು, ಉಡುಪುಗಳನ್ನು ತಯಾರಿಸಲು, ಉಪಕರಣಗಳನ್ನು ರೂಪಿಸಲು ಜೊತೆಗೂಡಿ ಕೆಲಸ ಮಾಡುತ್ತಿದ್ದರು. ನೈಸರ್ಗಿಕ ಅನಾಹುತಗಳಾದ ಪ್ರವಾಹ, ಕಾಡ್ಗಿಚ್ಚು, ಭೂಕಂಪ, ಬರಗಾಲ ಇತ್ಯಾದಿ ಸಂಕಷ್ಟಗಳನ್ನು ಎದುರಿಸಲು ಜನರು ಒಟ್ಟಿಗೆ ಜೀವಿಸುತ್ತಿದ್ದರು. ಕ್ರೂರ ಮೃಗಗಳಾದ ಹುಲಿ, ಚಿರತೆ, ಸಿಂಹ, ಆನೆ, ಇತ್ಯಾದಿಗಳನ್ನು ಎದುರಿಸಲು ಜನರು ಒಂದುಗೂಡುವ ಮೂಲಕವೇ ಸಾಧ್ಯ ಎಂಬುದನ್ನು ಅನುಭವದಿಂದ ತಿಳಿದಿದ್ದರು. ಆ ದಿನಗಳಲ್ಲಿ ಆಹಾರ, ಬಟ್ಟೆ, ವಸತಿ ಇತ್ಯಾದಿ ಜೀವನಾವಶ್ಯಕತೆಗಳನ್ನು ಪೂರೈಸಿಕೊಳ್ಳುವ

ಸಾಮರ್ಥ್ಯ ಬಹಳ ಸೀಮಿತವಾಗಿತ್ತು. ಜನರು ತಮ್ಮ ಶಕ್ತಿಗೆ ಅನುಸಾರವಾಗಿ ದುಡಿಯುತ್ತಿದ್ದರು. ತಮಗೆ ಅಗತ್ಯವಿರುವ ಸಾಮಗ್ರಿಗಳನ್ನು ಒಟ್ಟುಗೂಡಿಸಲು ಅಥವಾ ತಯಾರಿಸಲು ಬಹಳ ಕಷ್ಟಪಡುತ್ತಿದ್ದರು. ತಮ್ಮ ದುಡಿಮೆಯ ಉತ್ಪನ್ನವನ್ನು ಅವಶ್ಯಕತೆಗೆ ಅನುಗುಣವಾಗಿ ಎಲ್ಲರೊಂದಿಗೆ ಹಂಚಿಕೊಳ್ಳುತ್ತಿದ್ದರು. ಮಾನವ ಮತ್ತೊಬ್ಬ ಮಾನವನನ್ನು ಶೋಷಣೆ ಮಾಡುವ ಕುರಿತು ಅಂದು ಯಾರೂ ಯೋಚಿಸಲು ಕೂಡಾ ಸಾಧ್ಯವಿರಲಿಲ್ಲ. ಸಂಪೂರ್ಣ ಸಮಾನತೆಯ ವಾತಾವರಣ ಅಂದಿನ ಸಮಾಜದಲ್ಲಿ ಇತ್ತು.

## 2. ಗುಲಾಮಗಿರಿ ಸಮಾಜ:

ಕಾಲಕ್ರಮೇಣ ಉತ್ಪಾದನಾ ಉಪಕರಣಗಳನ್ನು ಸುಧಾರಿಸಿದ್ದರ ಫಲವಾಗಿ ಹಾಗೂ ಕಾರ್ಯಾನುಭವ, ಜ್ಞಾನ ಹಾಗೂ ಕೌಶಲ್ಯಗಳ ಸಹಕಾರದಿಂದ ಸಮುದಾಯದಲ್ಲಿ ಶ್ರಮ ಶಕ್ತಿ ಹೆಚ್ಚಾಯಿತು. ನಿತ್ಯೋಪಯೋಗಿ ವಸ್ತುಗಳನ್ನು ಉತ್ಪಾದಿಸುವ ಸಾಮರ್ಥ್ಯವು ವೃದ್ಧಿಸಿತು. ಸ್ವಂತ ಜೀವನ ನಿರ್ವಹಣೆಗೆ ಅಗತ್ಯವಿರುವಷ್ಟು ಮಾತ್ರವಲ್ಲದೆ, ಅದಕ್ಕಿಂತಲೂ ಹೆಚ್ಚು ಸಂಪತ್ತನ್ನು ಉತ್ಪಾದಿಸುವ ಕ್ರಮ ಮೊದಲುಗೊಂಡಿತು. ಪ್ರತಿಯೊಬ್ಬರ ಉತ್ಪಾದನೆಯಲ್ಲಿ ತಮ್ಮ ಅವಶ್ಯಕತೆಗೆ ಬೇಕಾದ ಉತ್ಪಾದನೆ ಹಾಗೂ ಹೆಚ್ಚಿಗೆ ಉಳಿಯುವ ಉತ್ಪಾದನೆ ಎಂಬ ಎರಡು ವಿಭಾಗಗಳಾದವು. ಉದಾಹರಣೆಗೆ, ಒಬ್ಬರು ಒಂದು ದಿನಕ್ಕೆ 12 ಜೊತೆ ಚಪ್ಪಲಿಯನ್ನು ತಯಾರಿಸಬಲ್ಲರು; ಆದರೆ ಅವರ ಜೀವನಾವಶ್ಯಕತೆಗೆ 8 ಜೊತೆ ಚಪ್ಪಲಿಯಿಂದ ಬರುವ ಗಳಿಕೆಯೇ ಸಾಕು. ಆಗ 4 ಜೊತೆ ಚಪ್ಪಲಿಯ ಗಳಿಕೆಯು ಉಳಿತಾಯವಾಯಿತು. ಈ ಹೆಚ್ಚುವರಿ ದುಡಿಮೆ ಅಥವಾ ಉಳಿತಾಯವು ಕೆಲವೇ ವ್ಯಕ್ತಿಗಳಲ್ಲಿ ಶೇಖರಣೆಯಾಗತೊಡಗಿತು. ಹೀಗೆ ಒಬ್ಬರ ಹೆಚ್ಚುವರಿ ದುಡಿಮೆಯ ಫಲವು ದುಡಿಯುವವರಿಗೆ ದಕ್ಕದೆ, ಮತ್ತೊಬ್ಬರಿಗೆ ವರ್ಗಾಯಿಸುವುದರಿಂದ ಒಬ್ಬರು ಶೋಷಿತರು (ಬಡವರು) ಹಾಗೂ ಮತ್ತೊಬ್ಬರು ಶೋಷಕರೂ (ಶ್ರೀಮಂತರೂ) ಆಗಿರುವ ಪರಿಸ್ಥಿತಿ ಉಂಟಾಯಿತು. ಶೋಷಕರು ಶೋಷಿತರನ್ನು ಗುಲಾಮರಂತೆ ಕಾಣುತ್ತಿದ್ದರು. ಈ ಗುಲಾಮರನ್ನು ಸಂತೆಯಲ್ಲಿ ಕುರಿ, ಮೇಕೆ, ದನ ಕರುಗಳನ್ನು ಮಾರಾಟ ಮಾಡುವಂತೆ ಮಾರಾಟ ಮಾಡುತ್ತಿದ್ದರು. ಈ ಗುಲಾಮ ಪದ್ಧತಿಯ ದಿನಗಳಲ್ಲಿ ಕೈ ಕಸುಬುಗಳು, ವ್ಯಾಪಾರ ಹಾಗೂ ನೌಕಾಯಾನ ತ್ವರಿತಗತಿಯಲ್ಲಿ ವಿಕಾಸಗೊಂಡಿತು. ನಗರಗಳು ನಿರ್ಮಿತವಾದವು. ಗುಲಾಮಗಿರಿ ಪದ್ಧತಿಯು ಪುರಾತನ ರೋಮ್‌ನಲ್ಲಿ ಬೃಹದಾಕಾರವಾಗಿ ಬೆಳೆಯಿತು. ಈ ರೀತಿಯಾಗಿ, ಬಹುಸಂಖ್ಯೆಯಲ್ಲಿದ್ದ ಗುಲಾಮರು ಮತ್ತು ಅಲ್ಪಸಂಖ್ಯೆಯಲ್ಲಿದ್ದ ಒಡೆಯರು ಇರುವಂತಹ ಗುಲಾಮಗಿರಿ ಎಂಬ ಸಾಮಾಜಿಕ ವ್ಯವಸ್ಥೆ ಉದಯವಾಯಿತು.

## 3. ಸಾಮಂತಶಾಹಿ ಸಮಾಜ: (ಊಳಿಗಮಾನ್ಯ ಅಥವಾ ಪಾಳೇಗಾರಿ ಸಮಾಜ)

ಕ್ರಮೇಣ ಗುಲಾಮರು ಅವರ ಶ್ರಮದ ಪರಿಣಾಮಗಳಲ್ಲಿ ಆಸಕ್ತಿ ಕಳೆದುಕೊಂಡರು. ಅವರು ಆಗಾಗ್ಗೆ ಒಡೆಯರ ವಿರುದ್ಧ ಸಿಡಿದೇಳುತ್ತಿದ್ದರು. ಗುಲಾಮರ ಬಂಡಾಯಗಳನ್ನು ಹತ್ತಿಕ್ಕಲು ಹಾಗೂ ಅವರನ್ನು ನಿಯಂತ್ರಿಸಲು ಶೋಷಕರು ಕಾನೂನುಗಳನ್ನು ರಚಿಸಿದರು ಮತ್ತು ಸೈನ್ಯವನ್ನು ಬಳಕೆ ಮಾಡಿದರು. ಹೀಗೆ ವರ್ಗಗಳು ಹಾಗೂ ವರ್ಗ ಸಂಘರ್ಷಗಳು ರೂಪ ತಾಳಿದವು. ಬಲಪ್ರಯೋಗಕ್ಕಿಂತಲೂ ಬುದ್ಧಿ ಶಕ್ತಿ, ಪ್ರತಿಭೆ ಹಾಗೂ ವೈಯಕ್ತಿಕ

ಸಾಮರ್ಥ್ಯವನ್ನು ಉಪಯೋಗಿಸಿದರೆ ಹೆಚ್ಚಿನ ಉತ್ಪಾದನೆಯನ್ನು ಪಡೆಯಬಹುದೆಂದು ತಿಳಿದುಬಂದಿತು. ಕ್ರಮೇಣ ಗುಲಾಮಗಿರಿಯ ಬಲಪ್ರಯೋಗದ ಶೋಷಣಾ ವ್ಯವಸ್ಥೆಯು ನಶಿಸುತ್ತಾ ಬಂದು ಅದರ ಸ್ಥಳದಲ್ಲಿ ಸಾಮಂತಶಾಹಿ ವ್ಯವಸ್ಥೆ ರೂಢಿಗೆ ಬಂದಿತು.

ಇಲ್ಲಿ ಸಾಮಂತ ರಾಜರು ಆಳುವ ವರ್ಗವಾದರು. ಆ ರಾಜರು ಭಾರಿ ಭೂಮಿ, ಜಹಗೀರ್‌ಗಳು ಮತ್ತು ಅರಮನೆಗಳ ಮಾಲೀಕರಾಗಿದ್ದರು. ಸಮಾಜದಲ್ಲಿ ಉತ್ಪಾದಕ ಶಕ್ತಿಗಳು ಬೆಳೆಯುತ್ತಲೇ ಹೋದವು. ಹೊಸ ಹೊಸ ಸಾಧನ ಸಲಕರಣೆಗಳನ್ನು ಕಂಡುಹಿಡಿಯಲಾಯಿತು. ಕಸುಬುದಾರಿಕೆಯನ್ನು ಸಂಪೂರ್ಣ ಬೆಳೆಸಲಾಯಿತು. ವ್ಯಾಪಾರ ಬೆಳೆಯಿತು. ಅಂತಾರಾಷ್ಟ್ರೀಯ ಮಾರುಕಟ್ಟೆ ಅಸ್ತಿತ್ವಕ್ಕೆ ಬಂತು. ಕೈಕಸುಬು ಉತ್ಪಾದನೆಗಳಿಗೆ ಬೇಡಿಕೆ ಹೆಚ್ಚಾಯಿತು. ದೊಡ್ಡ ಪ್ರಮಾಣದ ಕೈಕೆಲಸದ ಕರ್ಮಶಾಲೆಗಳು ಕಾಣಿಸಿಕೊಂಡವು. ಕ್ರಮೇಣ ಕೈಕಸುಬುದಾರರು ಕಾರ್ಮಿಕರಾದರು; ಕರ್ಮಶಾಲೆಗಳು ಕಾರ್ಖಾನೆಗಳಾದವು.

ಸಾಮಂತರಾಜರು ಜಗತ್ತಿನ ಹೊಸ ಭೂ ಭಾಗಗಳನ್ನು ಪತ್ತೆ ಮಾಡಿ, ಅದರ ಮೇಲೆ ತಮ್ಮ ಹಿಡಿತವನ್ನು ಸಾಧಿಸಿದರು. ನೆರೆ ರಾಜ್ಯಗಳ ಮೇಲೆ ದಾಳಿ ಮಾಡಿ ಆಕ್ರಮಿಸಿಕೊಂಡು ವಸಾಹತುಗಳನ್ನು ಸ್ಥಾಪಿಸಿದರು. ರಾಜಕೀಯ ಅಧಿಕಾರದ ಜೊತೆಗೆ ಮಾರುಕಟ್ಟೆಯ ವಿಸ್ತರಣೆಯು ಸಾಧ್ಯವಾಯಿತು.

ಈ ವ್ಯವಸ್ಥೆಯಲ್ಲಿ ರೈತರು ಸಂಪೂರ್ಣವಾಗಿ ಅವರ ಒಡೆಯರಿಗೆ ಸೇರಿದ್ದರು. ಹೆಚ್ಚಿನ ಕಾಲ ಅವರು ಸಾಮಂತ ರಾಜರಿಗಾಗಿ ದುಡಿದರು, ತಮ್ಮ ಸ್ವಂತಕ್ಕಾಗಿ ದುಡಿದದ್ದು ಸ್ವಲ್ಪ ಕಾಲ. ರೈತರು ಗುಲಾಮರಿಗಿಂತ ಹೆಚ್ಚು ಸ್ವತಂತ್ರರಾಗಿದ್ದರು. ರೈತರ ವಾಸದ ಮನೆ, ದನಕರುಗಳು, ಬೇಸಾಯದ ಉಪಕರಣಗಳು ಇತ್ಯಾದಿ ಅವರ ಸ್ವಂತ ಆಸ್ತಿಯಾಗಿತ್ತು. ರೈತರು ತಮ್ಮ ಕೃಷಿ ಉಪಕರಣಗಳನ್ನು ಹೆಚ್ಚು ಸುಧಾರಿಸಿದರು. ಶ್ರಮದಿಂದ ಉತ್ಪಾದನೆಯನ್ನು ಹೆಚ್ಚಿಸುವ ವಿಧಾನವನ್ನು ಕಂಡುಕೊಂಡರು. ಆದರೆ ಅವರ ಆದಾಯದ ಬಹುಭಾಗ ಭೂ ಮಾಲೀಕರಿಗೂ, ರಾಜರಿಗೂ, ಧರ್ಮ ಕ್ಷೇತ್ರಗಳಿಗೂ ಹಾಗೂ ಮಠಗಳಿಗೂ ಹೋಗುತ್ತಿತ್ತು.

ಕೈಗಾರಿಕೆಗಳ ಬೆಳವಣಿಗೆಯಿಂದಾಗಿ ಉತ್ಪಾದನೆ ಹೆಚ್ಚಾಯಿತು. ರೈತರು ಹೊಸ ಸಲಕರಣೆಗಳನ್ನು ಉಪಯೋಗಿಸಿದ್ದರ ಫಲವಾಗಿ ಕೃಷಿಯಲ್ಲೂ ಉತ್ಪಾದನೆ ಹೆಚ್ಚಾಯಿತು. ಆದರೆ ಈ ಮೊದಲೆ ಹೇಳಿದಂತೆ ಬಹುಪಾಲು ಆದಾಯ ರಾಜರ, ಭೂಮಾಲೀಕರ ಹಾಗೂ ಮಠಗಳ ಕೈಸೇರುತ್ತಿತ್ತು. ಸಾಮಂತಶಾಹಿಯು ಜನರ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡಿತು. ಇದರ ಪರಿಣಾಮವಾಗಿ ಮಾರುಕಟ್ಟೆ ವಿಸ್ತಾರವಾಗಲಿಲ್ಲ. ಈ ಬಿಕ್ಕಟ್ಟು ಹೆಚ್ಚಿನ ಬೆಳವಣಿಗೆಗೆ ತಡೆಯಾಯಿತು.

ಈ ಪರಿಸ್ಥಿತಿಯಲ್ಲಿ ಬಂಡವಾಳಶಾಹಿಯು ಒಂದು ಕ್ರಾಂತಿಕಾರಿ ವರ್ಗವಾಗಿ ಚಾರಿತ್ರಿಕ ರಂಗವನ್ನು ಪ್ರವೇಶಿಸಿತು. ಬಂಡವಾಳಶಾಹಿ ವ್ಯವಸ್ಥೆಯು ಸಾಮಂತಶಾಹಿ, ಪಾಳೆಗಾರಿ ಹಾಗೂ ಊಳಿಗಮಾನ್ಯ ಪದ್ಧತಿಯನ್ನು ನಿಧಾನವಾಗಿ ಬದಿಗೆ ಸರಿಸಿ, ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿತು.

## 4. ಬಂಡವಾಳಶಾಹಿ ಸಮಾಜ:

ಜಗತ್ತಿನ ಎಲ್ಲ ವರ್ಗದ, ವರ್ಣದ, ಧರ್ಮದ, ಜಾತಿಯ ಹಾಗೂ ಪ್ರದೇಶದ ಜನರು ಬದುಕುವುದಕ್ಕೆ ಅಗತ್ಯವಾದ ಅನ್ನ, ಬಟ್ಟೆ, ಮನೆ, ವಾಹನ, ರೇಡಿಯೋ, ಔಷಧಿ, ಶಾಲೆ, ಸಾರಿಗೆ ಇತ್ಯಾದಿ ವಸ್ತುಗಳನ್ನು ಉತ್ಪಾದಿಸಿ ವಿತರಣೆ ಮಾಡುತ್ತಲೇ ಇರಬೇಕಾಗುತ್ತದೆ. ಈ ವಸ್ತುಗಳನ್ನು ಉತ್ಪಾದಿಸಿ ವಿತರಿಸುವುದಕ್ಕೆ ಎರಡು ಪರಿಕರಗಳು ಅತ್ಯಗತ್ಯ – ಒಂದು: 'ಉತ್ಪಾದನಾ ಸಾಧನಗಳು', ಎರಡು: 'ಕಾರ್ಮಿಕರು'. ಉತ್ಪಾದನಾ ಸಾಧನಗಳೆಂದರೆ ಭೂಮಿ, ಗಣಿಗಳು, ಕಚ್ಚಾ ಸಾಮಗ್ರಿ, ಯಂತ್ರಗಳು, ಕಾರ್ಖಾನೆ, ಇತ್ಯಾದಿ. ಈ ಉತ್ಪಾದನಾ ಸಾಧನಗಳ ಜೊತೆಗೆ ಕಾರ್ಮಿಕರು ತಮ್ಮ ದೇಹಶಕ್ತಿ ಮತ್ತು ಬುದ್ಧಿಯನ್ನು ದುಡಿಸಿ ಅಗತ್ಯವಿದ್ದ ಸಾಮಗ್ರಿಗಳನ್ನು ತಯಾರಿಸುವರು.

ಯಾವ ಸಮಾಜದಲ್ಲಿ ಉತ್ಪಾದನಾ ಸಾಧನಗಳು ಅಲ್ಪಸಂಖ್ಯೆಯಲ್ಲಿರುವ ಬಂಡವಾಳಶಾಹಿಗಳ ಹಿಡಿತದಲ್ಲಿ ಇರುತ್ತದೊ ಹಾಗೂ ದುಡಿಯುವ ಜನ ವರ್ಗವು ಬಹುಸಂಖ್ಯೆಯಲ್ಲಿ ಇರುತ್ತದೋ ಅಂತಹ ಸಮಾಜವನ್ನು ಬಂಡವಾಳಶಾಹಿ ಸಮಾಜ ಎಂದು ಕರೆಯಲಾಗುತ್ತದೆ. ಉದಾಹರಣೆಗೆ ಅಮೆರಿಕ, ಬ್ರಿಟನ್, ಫ್ರಾನ್ಸ್, ಜಪಾನ್, ಜರ್ಮನಿ ಹಾಗೂ ಇತರೆ ರಾಷ್ಟ್ರಗಳು.

ಬಂಡವಾಳಶಾಹಿ ಎಂಬುದು ಆರ್ಥಿಕ ವ್ಯವಸ್ಥೆ. ಈ ವ್ಯವಸ್ಥೆಯ ಸಮಕಾಲಿಕವಾಗಿ ಚಾಲ್ತಿಗೆ ಬಂದಿದ್ದು ಪ್ರಜಾಪ್ರಭುತ್ವ ಎಂಬ ರಾಜಕೀಯ ವ್ಯವಸ್ಥೆ. ಈ ರಾಜಕೀಯ ವ್ಯವಸ್ಥೆಯಲ್ಲಿ ಅನುವಂಶಿಕವಾಗಿ ಅಧಿಕಾರವನ್ನು ಪಡೆಯುವ ಸಾಮಂತಶಾಹಿ/ಪಾಳೆಗಾರಿ ಪದ್ಧತಿಯನ್ನು ರದ್ದುಗೊಳಿಸಲಾಯಿತು. ಪ್ರಜೆಗಳು ತಮಗೆ ಇಷ್ಟ ಬಂದ ವ್ಯಕ್ತಿಗಳನ್ನು ಚುನಾವಣೆಗಳ ಮೂಲಕ ತಮ್ಮ ಪ್ರತಿನಿಧಿಯಾಗಿ ಆಯ್ಕೆ ಮಾಡುತ್ತಾರೆ. ನಿಶ್ಚಿತ ಅವಧಿಗೆ ಆಯ್ಕೆಯಾದ ಈ ಜನಪ್ರತಿನಿಧಿಗಳು ಸರಕಾರ ರಚಿಸಿ, ಶಾಸನಗಳನ್ನು ರೂಪಿಸುತ್ತಾರೆ. ಈ ಪದ್ಧತಿಯಲ್ಲಿ ಜನರು ತಮ್ಮ ಪ್ರತಿನಿಧಿಗಳ ಮೂಲಕ ತಾವೇ ಆಡಳಿತ ನಡೆಸುವ ಅಧಿಕಾರವನ್ನು ಹೊಂದಿರುತ್ತಾರೆ.

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನತೆಗೆ ಕೆಲವು ಕನಿಷ್ಠ ಹಕ್ಕುಗಳನ್ನು ಮತ್ತು ಕರ್ತವ್ಯಗಳನ್ನು ನೀಡಲಾಗುತ್ತದೆ. ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಶಾಂತಿಯುತವಾಗಿ ಸಭೆ ಸೇರುವ, ಸಂಘ–ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವ, ಇಚ್ಛಿತ ಕೆಲಸವನ್ನು ಮಾಡುವ, ವಾಸ ಮತ್ತು ಸಂಚಾರ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ ಇತ್ಯಾದಿಗಳು ಪ್ರಜಾಪ್ರಭುತ್ವದ ಗುಣಲಕ್ಷಣಗಳು.

ಜನತೆಗೆ ಬೇಕಾದ ಕಾನೂನುಗಳನ್ನು ರಚಿಸುವುದಕ್ಕೆ ಶಾಸಕಾಂಗ, ರಚಿಸಿದ ಕಾನೂನುಗಳನ್ನು ಅನುಷ್ಠಾನಗೊಳಿಸಲಿಕ್ಕೆ ಕಾರ್ಯಾಂಗ ಮತ್ತು ಕಾನೂನುಗಳನ್ನು ವ್ಯಾಖ್ಯಾನ ಮಾಡುವುದಕ್ಕೆ, ಅಸಿಂಧುವೆಂದು ಕಂಡು ಬಂದಲ್ಲಿ ರದ್ದುಗೊಳಿಸಲಿಕ್ಕೆ ಹಾಗೂ ಕಾನೂನನ್ನು ಉಲ್ಲಂಘಿಸಿದವರನ್ನು ಶಿಕ್ಷಿಸಲಿಕ್ಕೆ ನ್ಯಾಯಾಂಗ ಎಂಬ ಸ್ವತಂತ್ರವಾದ ಸಂಸ್ಥೆಗಳಿರುತ್ತವೆ.

ಜೊತೆಗೆ, ಈ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ಅಲ್ಪಸಂಖ್ಯಾತ ಬಂಡವಾಳಗಾರರು ಮತ್ತು ಬಹುಸಂಖ್ಯಾತ ದುಡಿಮೆಗಾರ ವರ್ಗಗಳ ಮಧ್ಯೆ ನಿರಂತರವಾಗಿ ಸಂಘರ್ಷ ನಡೆಯುತ್ತಿರುತ್ತದೆ. ಈ ವರ್ಗ ಸಂಘರ್ಷದಲ್ಲಿ ಬಂಡವಾಳಗಾರರು ತಾವು

ಬಂಡವಾಳಗಾರರಾಗಿಯೇ ಉಳಿಯಲು ಹೆಚ್ಚೆಚ್ಚು ಲಾಭ ಗಳಿಸಲು ನಿರಂತರ ಯತ್ನಿಸುತ್ತಾರೆ. ಇತ್ತ ಕಾರ್ಮಿಕರು ಚೆನ್ನಾಗಿ ಬದುಕಲು ಉತ್ತಮ ಕೂಲಿ, ವೇತನ ಪಡೆಯಲೇಬೇಕು. ಒಬ್ಬರು ಮತ್ತೊಬ್ಬರ ಖರ್ಚಿನಿಂದ ಮಾತ್ರ ತಮ್ಮ ಹಿತ ಸಾಧಿಸಬಹುದು. 'ಒಂದು ಕೊಳೆತರೆ ಮತ್ತೊಂದಕ್ಕೆ ಗೊಬ್ಬರ' ಎಂಬ ಗಾದೆಯ ಹಾಗೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಒಂದು ವರ್ಗದ ಹಿತ ಇನ್ನೊಂದಕ್ಕೆ ಅಡ್ಡಿಯಾಗುತ್ತದೆ.

ಬಂಡವಾಳಗಾರರು ಶೋಷಕರು ಮತ್ತು ದುಡಿಯುವವರು ಶೋಷಿತರು. ಇವರ ನಡುವೆ ನಿರಂತರವಾಗಿ ನಡೆಯುವ ಸಂಘರ್ಷವೆ ವರ್ಗ ಹೋರಾಟ. ಈ ಹೋರಾಟವು ಜೀವನದ ಮೂರು ಮುಖ್ಯ ರಂಗಗಳಾದ ಆರ್ಥಿಕ, ರಾಜಕೀಯ ಮತ್ತು ಸೈದ್ಧಾಂತಿಕ ರಂಗಗಳಲ್ಲೂ ನಡೆಯುತ್ತದೆ. ಶೋಷಿತ ವರ್ಗವನ್ನು ದಮನಿಸಲು ಶೋಷಕ ವರ್ಗವೂ, ಶೋಷಕ ವರ್ಗದ ಸ್ಥಾನ ಪಲ್ಲಟಗೊಳಿಸಲು ಶೋಷಿತ ವರ್ಗವೂ ಸದಾ ಪ್ರಯತ್ನ ಮಾಡುತ್ತಿರುತ್ತವೆ.

## 5. ಸಮಾಜವಾದಿ ಸಮಾಜ:

19ನೇ ಶತಮಾನದ ಮಧ್ಯಕಾಲದಲ್ಲಿ, ದುಡಿಯುವ ವರ್ಗವು ತನ್ನ ಕಾಲ ಮೇಲೆ ತಾನು ದೃಢವಾಗಿ ನಿಂತು ಸಶಕ್ತವಾಗಿ ಪ್ರಯತ್ನಿಸಿದರೆ, ಹೊಸತೊಂದು ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಲು ಸಾಧ್ಯ ಎಂಬ ಭರವಸೆಯು ಬೆಳೆಯಿತು.

ಸಮಾಜವಾದಿ ವ್ಯವಸ್ಥೆಯಲ್ಲಿ ಉತ್ಪಾದನಾ ಸಾಧನಗಳು ಅಂದರೆ, ಭೂಮಿ, ಗಣಿಗಳು, ಕಚ್ಚಾವಸ್ತುಗಳು, ಯಂತ್ರಗಳು, ಕಾರ್ಖಾನೆಗಳು, ಬ್ಯಾಂಕುಗಳು ಮೊದಲಾದವುಗಳು ಪ್ರಭುತ್ವದ (ಆಡಳಿತ ವರ್ಗ) ಹಿಡಿತದಲ್ಲಿರುತ್ತವೆ. ಸ್ವಂತ ಬಳಕೆ ಅಥವಾ ಸ್ವಂತ ಲಾಭಕ್ಕಾಗಿ ಉತ್ಪಾದನೆಯಲ್ಲಿ ತೊಡಗುವುದಕ್ಕೆ ಬದಲಾಗಿ, ಸಮಷ್ಟಿಯ ಸುಖಕ್ಕಾಗಿ ಸರ್ವರೂ ಸಾಮೂಹಿಕ ಪ್ರಯತ್ನ ಮಾಡುವುದು ಸಮಾಜವಾದದ ಮುಖ್ಯ ಲಕ್ಷಣ. ಮನುಷ್ಯರ ಮೇಲೆ ಮನುಷ್ಯರು ಅಧಿಕಾರ ನಡೆಸುವುದು ಕಡಿಮೆಯಾಗಿ, ನಿಸರ್ಗದ ಮೇಲೆ ಮನುಷ್ಯರ ಅಧಿಕಾರ ಹೆಚ್ಚುತ್ತದೆ. ಅರ್ಹರಾದ ಎಲ್ಲರಿಗೂ ತಕ್ಕಮಟ್ಟಿನ ಉದ್ಯೋಗ, ಅನ್ನ, ಬಟ್ಟೆ, ವಸತಿ, ಆರೋಗ್ಯ, ಶಿಕ್ಷಣ ಇತ್ಯಾದಿಗಳ ಭರವಸೆ ದೊರೆತು ಅನಾಥತೆ ಮತ್ತು ಅಭದ್ರತೆಗಳು ನಿವಾರಣೆಯಾಗುತ್ತವೆ. ಸಾರ್ವಜನಿಕರ ಒಳಿತಿಗಾಗಿ ಸಾರ್ವಜನಿಕರೇ ನಿರ್ವಹಿಸುವ ನಿಜವಾದ ಅರ್ಥದ ಪ್ರಜಾರಾಜ್ಯವಾಗುತ್ತದೆ.

ಈ ವ್ಯವಸ್ಥೆಯಲ್ಲಿ ವ್ಯಕ್ತಿಗಳ ಮಧ್ಯೆ ಮೇಲು–ಕೀಳು ಎಂಬುದಿಲ್ಲದೆ ತಮ್ಮ ವೈಯಕ್ತಿಕ ಅವಶ್ಯಕತೆಗಳಿಗೆ ಅಗತ್ಯವಾದ ಎಲ್ಲ ಗ್ರಾಹಕ ವಸ್ತುಗಳನ್ನು ಅಂದರೆ ಮನೆ, ಕಾರು, ಪೀಠೋಪಕರಣಗಳು, ಟೆಲಿವಿಷನ್, ಬಟ್ಟೆ ಮೊದಲಾದವುಗಳನ್ನು ಎಲ್ಲರೂ ಹೊಂದಿರಬಹುದು. ಈ ಸಮಾಜವಾದಿ ವ್ಯವಸ್ಥೆಯಲ್ಲಿ ಬಂಡವಾಳಗಾರ ವರ್ಗ ಇರುವುದಿಲ್ಲ. ಇತರರ ದುಡಿಮೆಯಿಂದ ಪರಾವಲಂಬಿ ಜೀವನ ನಡೆಸಲು ಅವಕಾಶವಿಲ್ಲ.

ಸಮಾಜವಾದಿ ವ್ಯವಸ್ಥೆಯಲ್ಲಿ ಎಲ್ಲರಿಗೂ ಸಮಾನ ಅವಕಾಶಗಳಿರುತ್ತವೆ. ಎಲ್ಲರೂ ಅಗತ್ಯವಾದ ವಿದ್ಯೆಯನ್ನು ಕಲಿತು ಅಗತ್ಯವಾದ ತರಬೇತಿಯನ್ನು ಪಡೆದು ಉತ್ತಮ

ಜೀವನಮಟ್ಟ ತಲುಪಲು ಸೂಕ್ತ ಅವಕಾಶಗಳು ಹಾಗೂ ಸಾಧ್ಯತೆಗಳು ಮುಕ್ತವಾಗಿರುತ್ತವೆ. ಹಾಗೂ ಸಮಾಜವಾದಿ ವ್ಯವಸ್ಥೆಯಲ್ಲಿ ಒಂದೇ ಪ್ರಮಾಣದ ವರಮಾನ ಪಡೆಯುವುದಿಲ್ಲ. ಕೈ–ಕೆಲಸಗಾರರಿಗಿಂತ ಯಂತ್ರ ನಿರ್ವಾಹಕರು, ಸಾಮಾನ್ಯ ಸಂಗೀತಗಾರರಿಗಿಂತ ಶ್ರೇಷ್ಠ ಸಂಗೀತಗಾರರು, ಸ್ವಲ್ಪ ಕಲ್ಲಿದ್ದಲು ಅಗೆಯುವವರಿಗಿಂತ ಹೆಚ್ಚು ಕಲ್ಲಿದ್ದಲು ಅಗೆಯುವವರು, ಎಕರೆಗೆ 20 ಕ್ವಿಂಟಾಲ್ ಭತ್ತ ಬೆಳೆಯುವ ರೈತರಿಗಿಂತ 30 ಕ್ವಿಂಟಾಲ್ ಭತ್ತ ಬೆಳೆಯುವ ರೈತರು ಹೆಚ್ಚು ವರಮಾನ ಪಡೆಯುತ್ತಾರೆ. ಆಡಳಿತಗಾರರು, ಇಂಜಿನಿಯರುಗಳು, ಲೇಖಕರು, ಕಲಾವಿದರು, ಶಿಕ್ಷಕರು, ವೈದ್ಯರು ಹೆಚ್ಚು ಆದಾಯ ಪಡೆಯುವವರು. ಈ ವ್ಯವಸ್ಥೆಯಲ್ಲಿ ಆದಾಯದ ವ್ಯತ್ಯಾಸ ಇದ್ದರೂ, ಅವಕಾಶಗಳಲ್ಲಿ ಸಮಾನತೆಯನ್ನು ಕಾಣಬಹುದು.

ಸಮಾಜವಾದಿ ಸಮಾಜದಲ್ಲಿ 'ಸ್ವಾತಂತ್ರ್ಯ' ಎಂಬ ಪದ ಕೇವಲ ಘೋಷಣೆಯಾಗಿ ಉಳಿಯದೆ ವಾಸ್ತವಿಕ ಅರ್ಥ ಪಡೆಯುವುದು ಬಹಳ ಮುಖ್ಯ. ಸ್ವಾತಂತ್ರ್ಯವೆಂದರೆ ಪೂರ್ಣ ಹಾಗೂ ಸಮೃದ್ಧ ಜೀವನಾವಕಾಶ. ಅಂದರೆ, ನಿತ್ಯಜೀವನಕ್ಕೆ ಬೇಕಾದ ಆಹಾರ, ಬಟ್ಟೆ, ವಸತಿ, ಆರೋಗ್ಯ, ಶಿಕ್ಷಣ, ಉದ್ಯೋಗ ಇತ್ಯಾದಿಗಳನ್ನು ಪಡೆಯಲು ಬೇಕಾದ ಆರ್ಥಿಕ ಶಕ್ತಿ ಹಾಗೂ ಅವಕಾಶಗಳು. ಪ್ರತಿಯೊಬ್ಬರ ಸಾಂಸ್ಕೃತಿಕ, ಬೌದ್ಧಿಕ ಹಾಗೂ ಭೌತಿಕ ಬೆಳವಣಿಗೆಯೇ ನಿಜವಾದ ಸ್ವಾತಂತ್ರ್ಯ.

# ಭಾಗ 2

## ಸಂವಿಧಾನಗಳ ಉಗಮ

*"ಯಾವ ದೇಶವು ಸ್ವತಂತ್ರವಾಗಿದ್ದು, ಲಿಖಿತ ಸಂವಿಧಾನವನ್ನು ಹೊಂದಿದ್ದು ಅದರಂತೆ ರಾಜ್ಯದ ಆಡಳಿತವನ್ನು ನಡೆಸುತ್ತದೋ ಅಂತಹ ದೇಶವನ್ನು ಗಣರಾಜ್ಯವೆಂದು ಕರೆಯಲಾಗುತ್ತದೆ."*

ಸಮಾಜದ ಈವರೆಗಿನ ಲಿಖಿತ ಚರಿತ್ರೆಯು ಪರಸ್ಪರ ವಿರೋಧಿ ವರ್ಗಗಳ ನಡುವಿನ ಸಂಘರ್ಷದ ಕಥೆಯಾಗಿದೆ. ಈ ಸಂಘರ್ಷವು ಒಂದು ಸಾಮಾಜಿಕ ವ್ಯವಸ್ಥೆಯು ನಶಿಸಿ ಬೇರೊಂದು ವ್ಯವಸ್ಥೆಯು ಅಸ್ತಿತ್ವಕ್ಕೆ ಬರಲು ಕಾರಣವಾಗುತ್ತದೆ. ಹೀಗೆಯೇ ಗುಲಾಮಗಿರಿ ಸಮಾಜವು ಸಾಮಂತಶಾಹಿ ಸಮಾಜಕ್ಕೆ, ಸಾಮಂತಶಾಹಿ ಸಮಾಜವು ಬಂಡವಾಳಶಾಹಿ ಸಮಾಜಕ್ಕೆ ದಾರಿ ಮಾಡಿಕೊಟ್ಟವು. ಜಗತ್ತಿನ ಒಂದು ಭಾಗದಲ್ಲಿ ಬಂಡವಾಳಶಾಹಿ ಪದ್ಧತಿ ಜಾರಿಯಲ್ಲಿರುವಾಗಲೇ ಮತ್ತೊಂದು ಭಾಗದಲ್ಲಿ ಸಮಾಜವಾದಿ ವ್ಯವಸ್ಥೆ ಜಾರಿಗೆ ಬಂದಿತು. ಇಂದು ಜಗತ್ತಿನ ಬಹುಪಾಲು ದೇಶಗಳಲ್ಲಿ ಬಂಡವಾಳಶಾಹಿ ಪದ್ಧತಿ ಜಾರಿಯಲ್ಲಿದ್ದರೆ, ಕೆಲವೇ ದೇಶಗಳಲ್ಲಿ ಸಮಾಜವಾದಿ ವ್ಯವಸ್ಥೆ ಜಾರಿಯಲ್ಲಿದೆ. ಉದಾಹರಣೆಗೆ ಚೀನಾ, ಕ್ಯೂಬಾ, ಲಾವೋಸ್, ವಿಯೆಟ್ನಾಂ.

'ಪ್ರಜಾಪ್ರಭುತ್ವ' ಮತ್ತು 'ಸಮಾಜವಾದ' ಎಂಬ ರಾಜಕೀಯ ವ್ಯವಸ್ಥೆಗಳಲ್ಲಿ ಜನರ ನಡುವಿನ ಆರ್ಥಿಕ, ಸಾಮಾಜಿಕ ಹಾಗೂ ರಾಜಕೀಯ ಸಂಬಂಧಗಳನ್ನು ನಿಯಂತ್ರಿಸುವ ಕೆಲಸವನ್ನು ಪ್ರಭುತ್ವ ನಿರ್ವಹಿಸುತ್ತದೆ. ಪ್ರಭುತ್ವಕ್ಕೆ ತನ್ನ ಅಧಿಕಾರ ಚಲಾಯಿಸಲು ಕೆಲವು ನಿಯಮಗಳ ಮತ್ತು ಕಾನೂನುಗಳ ಅಗತ್ಯವಿದೆ ಎಂದು ಕಂಡುಬಂತು. ಯಾವುದೇ ಪ್ರಭುತ್ವ ನಿರಂಕುಶವಾಗಿ ಅಧಿಕಾರ ಚಲಾಯಿಸದಂತೆ ನಿಯಂತ್ರಿಸಲು ಕಾನೂನುಗಳ ಅಗತ್ಯವಿದೆ. ಈ ಕಾನೂನುಗಳ ತಾಯಿಯೇ ಸಂವಿಧಾನ. ಯಾವ ದೇಶವು ಸ್ವತಂತ್ರವಾಗಿದ್ದು,

ಲಿಖಿತ ಸಂವಿಧಾನವನ್ನು ಹೊಂದಿದ್ದು ಅದರಂತೆ ರಾಜ್ಯದ ಆಡಳಿತವನ್ನು ನಡೆಸುತ್ತದೋ ಅಂತಹ ದೇಶವನ್ನು ಗಣರಾಜ್ಯವೆಂದು ಕರೆಯಲಾಗುತ್ತದೆ. **ಎಲ್ಲಾ ಸ್ವತಂತ್ರ ದೇಶಗಳು ಗಣರಾಜ್ಯಗಳಲ್ಲ. ಆದರೆ, ಎಲ್ಲಾ ಗಣರಾಜ್ಯಗಳು ಸ್ವತಂತ್ರವಾದ ದೇಶಗಳು.**

## 1. ಇಂಗ್ಲೆಂಡಿನ ಮ್ಯಾಗ್ನಕಾರ್ಟ

13ನೇ ಶತಮಾನದ ಪ್ರಾರಂಭದಲ್ಲಿ ಇಂಗ್ಲೆಂಡಿನ ದೊರೆ ಕಿಂಗ್‌ಜಾನ್ ಮತ್ತು ಅಲ್ಲಿನ ಜಹಗೀರುದಾರರಿಗೆ ನಡೆದ ಸಂಘರ್ಷದ ಫಲವಾಗಿ ಜಗತ್ತಿನ ಮೊದಲನೇ ಸಂವಿಧಾನವೆಂದು ಕರೆಯಲ್ಪಡುವ 'ಮ್ಯಾಗ್ನಕಾರ್ಟ' ಕ್ರಿ.ಶ. 1215ರಲ್ಲಿ ರಚನೆಯಾಯಿತು. ನ್ಯಾಯಾಂಗದ ದಂತಕತೆಯೆಂದು ಕರೆಯಲ್ಪಡುವ ಇಂಗ್ಲೆಂಡಿನ ನ್ಯಾಯಮೂರ್ತಿ ಲಾರ್ಡ್ ಡೆನ್ನಿಂಗ್ ಮ್ಯಾಗ್ನಕಾರ್ಟವನ್ನು 'ಎಲ್ಲ ಕಾಲದ ಶ್ರೇಷ್ಠ ಸಾಂವಿಧಾನಿಕ ದಾಖಲೆ... ನಿರಂಕುಶ ಪ್ರಭುವಿನ ಸ್ವೇಚ್ಛಾಚಾರದ ಎದುರು ವ್ಯಕ್ತಿ ಸ್ವಾತಂತ್ರ್ಯದ ಅಡಿಪಾಯ' ಎಂದು ಬಣ್ಣಿಸುತ್ತಾರೆ. "The greatest constitutional document of all times... the foundation of the freedom of the individual against the arbitrary of despot".

ಈ ಮ್ಯಾಗ್ನಕಾರ್ಟದ ಪ್ರಮುಖ ಅಂಶಗಳು:

1) ಕಿಂಗ್‌ಜಾನ್ ದೊರೆಯ ಅಧಿಕಾರಕ್ಕೆ ಕಡಿವಾಣ ಹಾಕಲಾಯಿತು.
2) ನ್ಯಾಯಾಂಗವನ್ನು ಬಲಪಡಿಸಲಾಯಿತು.
3) ಗುಲಾಮರನ್ನು ಹೊರತುಪಡಿಸಿ ಉಳಿದವರನ್ನು ಶಿಕ್ಷಿಸಬೇಕಾದರೆ ಅಥವಾ ದಂಡ ವಿಧಿಸಬೇಕಾದರೆ ನ್ಯಾಯಾಂಗದ ಪ್ರಕ್ರಿಯೆಗೆ ಒಳಪಡಿಸುವುದನ್ನು ಕಡ್ಡಾಯ ಮಾಡಲಾಯಿತು.
4) ಜಹಗೀರುದಾರರಿಗೆ ಕೆಲವು ರಾಜಕೀಯ ಹಕ್ಕುಗಳನ್ನು ನೀಡಲಾಯಿತು.
5) 'ಜನರ ನ್ಯಾಯದ ಹಕ್ಕನ್ನು ಯಾರಿಗೂ ಮಾರಾಟ ಮಾಡುವುದಿಲ್ಲ, ವಿಳಂಬ ಮಾಡುವುದಿಲ್ಲ ಹಾಗೂ ನಿರಾಕರಿಸುವುದಿಲ್ಲ' ಎಂದು ಘೋಷಿಸಲಾಯಿತು. (To no one will we sell, to no one deny or delay right to justice)

## 2. ಅಮೇರಿಕದ ಸಂವಿಧಾನ:

1776ರಲ್ಲಿ ನಡೆದ ಅಮೇರಿಕ ದೇಶದ ಮಹಾನ್ ಕ್ರಾಂತಿಯ ಮಹಾನ್ ಘೋಷಣೆಯೆಂದರೆ **'ಎಲ್ಲಾ ಮನುಷ್ಯರನ್ನು ಸಮಾನವಾಗಿ ಸೃಷ್ಟಿಸಲಾಗಿದೆ'** (All men are created equal). ಈ ಕ್ರಾಂತಿಯ ನಂತರ ಅಮೇರಿಕದ ಎಲ್ಲ ರಾಜ್ಯಗಳು ತಮ್ಮ ತಮ್ಮ ಸಂವಿಧಾನಗಳನ್ನು ರಚಿಸಿಕೊಂಡವು. ನಂತರದ ದಿನಗಳಲ್ಲಿ ಅಮೇರಿಕ ಸಂಯುಕ್ತ ಸಂಸ್ಥಾನದ ಸಂವಿಧಾನವು ರಚನೆಯಾಯಿತು. ಈ ಸಂವಿಧಾನದ ಮುಖ್ಯಾಂಶಗಳೆಂದರೆ:

1) ಅಮೆರಿಕ ದೇಶದಲ್ಲಿ ವಸಾಹತುಶಾಹಿ ಪದ್ಧತಿಯ ರದ್ದುಪಡಿಸುವಿಕೆ

2) ಪ್ರಜಾಪ್ರಭುತ್ವವೆಂಬ ರಾಜಕೀಯ ವ್ಯವಸ್ಥೆಯ ಸ್ಥಾಪನೆ
3) ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವೆಂಬ ಪ್ರತ್ಯೇಕ ಮತ್ತು ಸ್ವತಂತ್ರ ಆಡಳಿತಾಂಗಗಳ ರಚನೆ
4) ರಾಜಕೀಯ ಹಕ್ಕುಗಳಾದ ವಾಕ್‌ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ವೃತ್ತಿ ಸ್ವಾತಂತ್ರ್ಯ, ವಾಸಸ್ಥಳದ ಸ್ವಾತಂತ್ರ್ಯ, ಸಂಚರಿಸುವ ಸ್ವಾತಂತ್ರ್ಯ ಇತ್ಯಾದಿಗಳ ಘೋಷಣೆ

ಆದರೆ, ಇಲ್ಲಿ ಗಮನಿಸಬೇಕಾದ ವಿಚಾರವೆಂದರೆ, ಸಂವಿಧಾನದ ಹೊರತಾಗಿಯೂ ಅಮೇರಿಕದಲ್ಲಿ ಗುಲಾಮ ಪದ್ಧತಿ, ವರ್ಣಬೇಧ, ವರ್ಗಬೇಧ, ಲಿಂಗಬೇಧ, ಇತ್ಯಾದಿ ಅಸಮಾನತೆಗಳು ಮುಂದುವರೆದವು.

## 3. ಫ್ರಾನ್ಸ್ ಸಂವಿಧಾನ:

ಫ್ರೆಂಚ್ ಮಹಾಕ್ರಾಂತಿಯು 1789ರಲ್ಲಿ ಪ್ರಾರಂಭವಾಗಿ 1799ರಲ್ಲಿ ಕೊನೆಗೊಂಡಿತು. ಈ ಮಹಾಕ್ರಾಂತಿಯ ಮಹಾನ್ ಘೋಷಣೆಯೆಂದರೆ **'ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ'** (Liberty, Fraternity and Equality). ಈ ಕ್ರಾಂತಿಯ ಪರಿಣಾಮವಾಗಿ ರೂಪುಗೊಂಡ ಕಾನೂನುಗಳೆಂದರೆ:

1. ರಾಜರ ಮತ್ತು ಪಾಳೆಗಾರರ ಆಳ್ವಿಕೆ ರದ್ದು
2. ಚುನಾಯಿತ ಸರ್ಕಾರಗಳು ಅಸ್ತಿತ್ವಕ್ಕೆ
3. ಪಾಳೆಗಾರರಿಗೆ ಮತ್ತು ಕ್ರೈಸ್ತ ದೇವಾಲಯಗಳಿಗೆ ಕೊಡಬೇಕಾದ ಸಾಲ ಮನ್ನಾ
4. ರಾಜವಂಶಸ್ಥರು ಮತ್ತು ಕ್ರೈಸ್ತ ದೇವಾಲಯಗಳಿಗೆ ಸೇರಿದ ಭೂಮಿಯ ರಾಷ್ಟ್ರೀಕರಣ
5. ಖಾಸಗಿ ಕಂದಾಯ ವಸೂಲಾತಿ ಪದ್ಧತಿ ರದ್ದು
6. ಜನಸಾಮಾನ್ಯರಿಗೆ ರಾಜಕೀಯ ಹಕ್ಕುಗಳ ವಿಸ್ತರಣೆ

## 4. ಸೋವಿಯತ್ ರಷ್ಯಾದ ಸಂವಿಧಾನ:

1917ರಲ್ಲಿ ನಡೆದ ರಷ್ಯಾ ಕ್ರಾಂತಿಯು ಜಗತ್ತಿಗೆ ನೀಡಿದ ಮಹಾನ್ ಘೋಷಣೆ– 'ಸಾಮರ್ಥ್ಯಕ್ಕೆ ಅನುಸಾರವಾಗಿ ದುಡಿಯಬೇಕು, ಅಗತ್ಯಕ್ಕೆ ಅನುಸಾರವಾಗಿ ಗಳಿಸಬೇಕು'. (Each according to one's ability, each according to one's need). ರಷ್ಯಾ ದೇಶದ ಈ ಕ್ರಾಂತಿ ಜಗತ್ತಿನ ಚಿಂತನೆಯನ್ನೇ ಬದಲಾಯಿಸಿತು. ಈ ಕ್ರಾಂತಿಯ ಪರಿಣಾಮವಾಗಿ–

1. ಝಾರ್ ದೊರೆಗಳ ಆಡಳಿತ ಕೊನೆಗೊಂಡು, ಜಗತ್ತಿನಲ್ಲಿ ಮೊದಲ ಬಾರಿಗೆ ಕಾರ್ಮಿಕರ ಮುಖಂಡತ್ವದ ಸಮಾಜವಾದಿ ಸರ್ಕಾರ ಅಧಿಕಾರಕ್ಕೆ ಬಂತು. ಸಮಾಜವಾದಿ ಸಂವಿಧಾನ ರಚನೆಯಾಯಿತು.
2. ರಾಜ್ಯವೆಂದರೆ ದೇಶದ ಗಡಿಯ ರಕ್ಷಣೆ, ವಿಸ್ತರಣೆ ಮತ್ತು ಒಳದಂಗೆಗಳ ನಿಯಂತ್ರಣ ಎಂಬ ವ್ಯಾಖ್ಯಾನ ಮರುಪರಿಶೀಲನೆಗೆ ಗುರಿಯಾಗಿ, ಜನರ ಕನಿಷ್ಠ ಅಗತ್ಯಗಳಾದ

ಭಾರತದ ಸಂವಿಧಾನಕ್ಕೆ ಪ್ರೇರಣೆ ನೀಡಿರುವುದು ಬ್ರಿಟನ್, ಅಮೇರಿಕಾ, ಫ್ರಾನ್ಸ್, ಐರ್ಲೆಂಡ್, ಕೆನಡಾ, ಸೋವಿಯತ್ ರಷ್ಯಾದ ಸಂವಿಧಾನಗಳು. ಪಂಚವಾರ್ಷಿಕ ಯೋಜನೆಯ ಪರಿಕಲ್ಪನೆಯನ್ನು ಸೋವಿಯತ್ ರಷ್ಯಾದ ಸಂವಿಧಾನದಿಂದಲೂ, ಸಾಮಾಜಿಕ ಮತ್ತು ಆರ್ಥಿಕ ಹಕ್ಕುಗಳ ಪರಿಕಲ್ಪನೆಯನ್ನು ಐರ್ಲೆಂಡ್‌ನ ಸಂವಿಧಾನದಿಂದಲೂ, 'ವಿ, ದಿ ಪೀಪಲ್' ಎಂಬ ನುಡಿಗಟ್ಟನ್ನು ಅಮೇರಿಕಾದ ಸಂವಿಧಾನದಿಂದಲೂ, ಲಿಬರ್ಟಿ–ಈಕ್ವಾಲಿಟಿ ಮತ್ತು ಫ್ರೆಟರ್ನಿಟಿ ಎಂಬ ಪರಿಕಲ್ಪನೆಯನ್ನು ಫ್ರಾನ್ಸ್‌ನ ಸಂವಿಧಾನದಿಂದಲೂ ಪಡೆಯಲಾಗಿದೆ.




ಬ್ರಿಟನ್ ಸಂವಿಧಾನ ಮ್ಯಾಗ್ನಕಾರ್ಟದ ಪ್ರತಿಕೃತಿಗಳು




ಅಮೇರಿಕ ಸಂವಿಧಾನದ ಪ್ರಸ್ತಾವನೆ ಮತ್ತು ಮುಖಪುಟ




ಪ್ರಜೆಗಳ ಹಕ್ಕುಗಳು ಮತ್ತು ಸ್ವಾತಂತ್ರ್ಯವನ್ನು ವಿವರಿಸುವ ಕೆನಡಾ ಸಂವಿಧಾನದ ಭಾಗ




ಫ್ರಾನ್ಸ್ ಸಂವಿಧಾನದ ಒಂದು ಪುಟ




ಸೋವಿಯತ್ ರಷ್ಯಾ ಸಂವಿಧಾನದ ಮುಖಪುಟ

ಆಹಾರ, ಆರೋಗ್ಯ, ಶಿಕ್ಷಣ, ವಸತಿ, ಉದ್ಯೋಗ, ಇತ್ಯಾದಿಗಳನ್ನು ಪೂರೈಸುವುದು ರಾಜ್ಯದ (ಸರ್ಕಾರದ) ಕರ್ತವ್ಯ ಎಂಬ ಕಲ್ಯಾಣ ರಾಜ್ಯದ ಪರಿಕಲ್ಪನೆ ಜಾರಿಗೆ ಬಂದಿತು.

3. ಪರಿಪೂರ್ಣ ಪ್ರಜಾಪ್ರಭುತ್ವಕ್ಕೆ ರಾಜಕೀಯ ಹಕ್ಕುಗಳ ಜೊತೆಗೆ ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಹಕ್ಕುಗಳನ್ನು ನೀಡಬೇಕು ಎನ್ನುವ ತಾತ್ಪರ್ಯ ನೀಡಲಾಯಿತು.
4. ಭೂಮಿ, ನೀರು, ಖನಿಜ ಹಾಗೂ ಇತರೆ ನೈಸರ್ಗಿಕ ಸಂಪತ್ತು ಇಡೀ ಸಮುದಾಯಕ್ಕೆ ಸೇರಿದ್ದು, ಪ್ರತಿಯೊಬ್ಬ ಪ್ರಜೆಗೂ ಇದರಲ್ಲಿ ಹಕ್ಕು ಇದೆ ಎಂದು ಘೋಷಿಸಲಾಯಿತು.
5. ವರ್ಗ ಬೇಧ, ವರ್ಣ ಬೇಧ ಮತ್ತು ಲಿಂಗ ಬೇಧವನ್ನು ರದ್ದು ಮಾಡಿ ಸಮಾನತೆಯನ್ನು ಸಾರಲಾಯಿತು.
6. **'ಧರ್ಮವು ವ್ಯಕ್ತಿಯ ಖಾಸಗಿ ಹಕ್ಕು'** ಎಂದು ಘೋಷಿಸಿ, ಧರ್ಮವನ್ನು ರಾಜಕಾರಣದಿಂದ ಬೇರ್ಪಡಿಸಲಾಯಿತು. ನಿಜವಾದ ಅರ್ಥದಲ್ಲಿ ಧರ್ಮನಿರಪೇಕ್ಷತೆ/ಜಾತ್ಯತೀತತೆ ಜಾರಿಗೆ ಬಂದಿತು.
7. ಆಹಾರ, ಬಟ್ಟೆ, ಶಿಕ್ಷಣ, ಆರೋಗ್ಯ, ವಸತಿ, ಉದ್ಯೋಗ ಇತ್ಯಾದಿಗಳು ಮೂಲಭೂತ ಹಕ್ಕುಗಳಾದವು.
8. ದುಡಿದು ತಿನ್ನುವುದು ಕರ್ತವ್ಯ ಎಂದು ಘೋಷಿಸಲಾಯಿತು.
9. ಜನರ ಅಭಿವೃದ್ಧಿಗೆ ಪಂಚವಾರ್ಷಿಕ ಯೋಜನೆಗಳನ್ನು ಜಾರಿಗೆ ತರಲಾಯಿತು.
10. ಜಗತ್ತಿನ ಯಾವುದೇ ದೇಶದಲ್ಲಿ ನಡೆಯುವ ಸ್ವಾತಂತ್ರ್ಯ ಹೋರಾಟಗಳಿಗೆ ಮತ್ತು ವಿಮೋಚನಾ ಹೋರಾಟಗಳಿಗೆ ಬೆಂಬಲ ಸೂಚಿಸಲಾಯಿತು.

ಅಮೇರಿಕ, ಫ್ರಾನ್ಸ್ ಮತ್ತು ರಷ್ಯಾ ದೇಶದ ಕ್ರಾಂತಿಗಳು ಜಗತ್ತಿನ ಇತರೆ ದೇಶಗಳ ಮೇಲೆ ಪರಿಣಾಮ ಬೀರಿದವು. 20ನೇ ಶತಮಾನದ ಪ್ರಾರಂಭದಲ್ಲಿ ಕೇವಲ ಬೆರಳೆಣಿಕೆಯಷ್ಟು ಸ್ವತಂತ್ರ ರಾಷ್ಟ್ರಗಳಿದ್ದವು. ಕ್ರಮೇಣ ಇತರ ದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಗಳು ಮತ್ತು ವಿಮೋಚನಾ ಹೋರಾಟಗಳು ಬೆಳೆದುಬಂದವು, ಇದರ ಪರಿಣಾಮವಾಗಿ ಇಂದು ವಿಶ್ವದಲ್ಲಿ 195 ಸ್ವತಂತ್ರ ದೇಶಗಳಿವೆ. ಇವುಗಳ ಪೈಕಿ ಸುಮಾರು 176 ದೇಶಗಳು ಪ್ರತ್ಯೇಕವಾದ ಸಂವಿಧಾನಗಳನ್ನು ರಚಿಸಿಕೊಂಡಿವೆ. ಕೆಲವು ದೇಶಗಳು ಬೇರೆ ದೇಶದ ಸಂವಿಧಾನಗಳನ್ನು ಅಳವಡಿಸಿಕೊಂಡಿವೆ. ಹೀಗೆ ವಿಶ್ವದ ಬಹುಪಾಲು ದೇಶಗಳು ಸಂವಿಧಾನದ ಚೌಕಟ್ಟಿಗೆ ಒಳಪಟ್ಟಿವೆ.

# ಭಾಗ 3

## ಭಾರತ ದೇಶ

ಭಾರತ ದೇಶವನ್ನು ಅರ್ಥ ಮಾಡಿಕೊಳ್ಳದೆ ಭಾರತದ ಸಂವಿಧಾನವನ್ನು ಅರ್ಥ ಮಾಡಿಕೊಳ್ಳಲು ಸಾಧ್ಯವಿಲ್ಲ. ನಾವೆಲ್ಲರು ನಮ್ಮ ಶಾಲೆಗಳಲ್ಲಿ ಭಾರತ ದೇಶದ ಭೌಗೋಳಿಕ ಚಿತ್ರವನ್ನು ಓದಿದ್ದೇವೆ. ಉತ್ತರಕ್ಕೆ ಹಿಮಾಲಯ ಪರ್ವತ, ದಕ್ಷಿಣಕ್ಕೆ ಹಿಂದೂ ಮಹಾಸಾಗರ, ಪೂರ್ವಕ್ಕೆ ಬಂಗಾಲ ಕೊಲ್ಲಿ, ಪಶ್ಚಿಮಕ್ಕೆ ಅರಬ್ಬಿ ಸಮುದ್ರ, ಇದರ ಮಧ್ಯದಲ್ಲಿ ವಿಂಧ್ಯ ಪರ್ವತಗಳು, ಜೀವನದಿಗಳು ಎಂಬುದಾಗಿ. ಆದರೆ, ಭಾರತ ದೇಶವೆಂದರೆ ಕೇವಲ ಅಲ್ಲಿನ ಪರ್ವತಗಳು, ಕಣಿವೆಗಳು, ಸಾಗರ–ಸರೋವರಗಳು, ನದಿ, ಕಾಡು, ಬೆಟ್ಟ, ಗುಡ್ಡ ಮಾತ್ರವಲ್ಲ. ತೆಲುಗಿನ ಮಹಾಕವಿ ಮತ್ತು ಸಮಾಜ ಸುಧಾರಕ ವೆಂಕಟ ಅಪ್ಪಾರಾವ್ ಗುರ್ಜಡ (1862–1915) ಒಂದು ಶತಮಾನದ ಹಿಂದೆ ಹೇಳಿದಂತೆ **'ದೇಶಮಂಟೆ ಮಟ್ಟಿ ಕಾದು, ದೇಶಮಂಟೆ ಮನುಷಲು'**. **'ದೇಶವೆಂದರೆ ಕೇವಲ ಮಣ್ಣಲ್ಲ, ದೇಶವೆಂದರೆ ಅಲ್ಲಿನ ಮನುಷ್ಯರು'**. ಭಾರತ ದೇಶವನ್ನು ತಿಳಿದುಕೊಳ್ಳುವುದೆಂದರೆ ಅಲ್ಲಿನ ಜನರು, ಅಲ್ಲಿನ ಇತಿಹಾಸ, ಆರ್ಥಿಕ–ಸಾಮಾಜಿಕ–ರಾಜಕೀಯ ಸಂಬಂಧಗಳು, ಧರ್ಮಾಚರಣೆಗಳು, ಸಂಸ್ಕೃತಿ, ಭಾಷೆ, ಕೃಷಿ, ಆಹಾರ ಪದ್ಧತಿ, ಇತ್ಯಾದಿಗಳನ್ನು ತಿಳಿದುಕೊಳ್ಳುವುದು. ಇವುಗಳ ಬಗ್ಗೆ ಆಳವಾದ ಅಧ್ಯಯನ ಮಾಡದಿದ್ದರೂ, ಕನಿಷ್ಠ ತಿಳುವಳಿಕೆ ಬೇಕು.



ವೆಂಕಟ ಅಪ್ಪಾರಾವ್ ಗುರ್ಜಡ

## 1. ಜನತೆ:

ಸರಿ ಸುಮಾರು 75 ಸಾವಿರ ವರ್ಷಗಳ ಹಿಂದೆ ಅಲೆಮಾರಿ ಮಾನವರು ಆಹಾರವನ್ನು ಹುಡುಕಿಕೊಂಡು ಭಾರತವನ್ನು ಪ್ರವೇಶಿಸಿದರು. ನಂತರದ ದಿನಗಳಲ್ಲಿ ಭಾರತದ ಫಲವತ್ತಾದ ಭೂಮಿಯನ್ನು ಮತ್ತು ಜೀವನದಿಗಳನ್ನು ಹುಡುಕಿಕೊಂಡು ಹೊರಗಿನಿಂದ ಕೃಷಿಕರು ಬಂದರು. ನಾಗರಿಕತೆ ಬೆಳೆದಂತೆ ಬೇರೆ ಬೇರೆ ದೇಶಗಳಿಂದ ವ್ಯಾಪಾರಸ್ಥರು ಭಾರತವನ್ನು ಪ್ರವೇಶಿಸಿದರು. ಸಿಂಧು ನಾಗರಿಕತೆಯ ಕಾಲದಿಂದ ಪ್ರಾರಂಭಗೊಂಡು 18ನೇ ಶತಮಾನದ ಪ್ರಾರಂಭದವರೆಗೆ ಜಗತ್ತಿನ ಬಹುಪಾಲು ರಾಷ್ಟ್ರಗಳು ಭಾರತದ ಜೊತೆಗೆ ವ್ಯಾಪಾರ ಸಂಬಂಧಗಳನ್ನು ಇಟ್ಟುಕೊಂಡಿದ್ದವು. ಮುಖ್ಯವಾಗಿ ವಿವಿಧ ರೀತಿಯ ಜವಳಿ, ರೇಷ್ಮೆ ಬಟ್ಟೆ, ಸಂಬಾರ ಪದಾರ್ಥಗಳು, ಸಕ್ಕರೆ, ಇಂಡಿಗೋ, ಗಿಡಮೂಲಿಕೆಗಳು, ಆಭರಣಗಳು ಮತ್ತು ರತ್ನಗಳನ್ನು ಭಾರತ ರಫ್ತು ಮಾಡುತ್ತಿತ್ತು.

ಇಲ್ಲಿನ ಪ್ರಾಕೃತಿಕ ಸೌಂದರ್ಯ, ಕಲೆ, ವಾಸ್ತುಶಿಲ್ಪ, ವಿಜ್ಞಾನ ಇತ್ಯಾದಿಗಳನ್ನು ನೋಡಲೆಂದು ವಿವಿಧ ದೇಶಗಳಿಂದ ಪ್ರವಾಸಿಗರು ಭಾರತಕ್ಕೆ ಬಂದರು. ಹಾಗೆ ಬಂದವರಲ್ಲಿ ಪ್ರಮುಖರು ಚೀನಾ ದೇಶದ ಹ್ಯುಯನ್‌ತ್ಸಾಂಗ್ (Hiuen Tsang) ಪಹಿಯನ್ (Fa-Hien), ಇತ್ಸಿಂಗ್ (I-tsing), ಗ್ರೀಕ್ ದೇಶದ ಮೆಗಸ್ತನೀಸ್ (Megasthenes), ಪರ್ಷಿಯಾದ ಅಲ್–ಬರೂನಿ (Al-beruni), ಮೊರೊಕ್ಕಾದ ಇಬ್ನ–ಬಟೂಟ (Ibna-batuta), ಇಟಲಿಯ ಮಾರ್ಕೋ ಪೋಲೋ (Marco polo), ರಷ್ಯಾದ ಅಫನಾಸಿ ನಿಕಿತಿನ್ (Afanasy Nikitin) ಪೋರ್ಚುಗಲ್‌ನ ಡೊಮಿಂಗೋ ಪೇಸ್ (Domingo Paes).

ಜಗತ್ಪ್ರಸಿದ್ಧ ವಿಶ್ವವಿದ್ಯಾಲಯಗಳಾದ ನಳಂದ, ತಕ್ಷಶಿಲೆ, ವಿಕ್ರಮಶೀಲ, ಪುಷ್ಪಗಿರಿ ಇತ್ಯಾದಿಗಳಲ್ಲಿ ಕಲೆ, ವೈದ್ಯಕೀಯ, ಖಗೋಳವಿಜ್ಞಾನ, ಗಣಿತ, ರಾಜ್ಯಶಾಸ್ತ್ರ, ಯುದ್ಧ ಪರಿಣತಿ, ಆಧ್ಯಾತ್ಮ ಇತ್ಯಾದಿ ವಿಷಯಗಳನ್ನು ಬೋಧಿಸುತ್ತಿದ್ದರು. ಭಾರತದ ಈ ವಿಶ್ವವಿದ್ಯಾಲಯಗಳಲ್ಲಿ ಜ್ಞಾನಾರ್ಜನೆ ಪಡೆಯಲು ಶ್ರೀಲಂಕ, ಕೊರಿಯಾ, ಜಪಾನ್, ಚೀನಾ, ಟಿಬೆಟ್, ಇಂಡೊನೇಷಿಯ, ಪರ್ಷಿಯ, ಟರ್ಕಿ, ಇತ್ಯಾದಿ ದೇಶಗಳಿಂದ ಸಾವಿರಾರು ವಿದ್ಯಾರ್ಥಿಗಳು ಬರುತ್ತಿದ್ದರು.

ಭಾರತದಲ್ಲಿದ್ದ ಸಂಪತ್ತಿನಿಂದ ಆಕರ್ಷಿತರಾಗಿ ಅನೇಕ ವಿದೇಶಿ ರಾಜರುಗಳು ತಮ್ಮ ರಾಜ್ಯ ವಿಸ್ತರಣೆಗಾಗಿ ಭಾರತ ಪ್ರವೇಶಿಸಿದರು. ಅವರಲ್ಲಿ ಪ್ರಮುಖರೆಂದರೆ ಗ್ರೀಕರು, ಅರಬ್ಬರು, ಟರ್ಕಿಯನ್ನರು, ಮೊಘಲರು, ಖಿಲ್ಜಿಗಳು, ತುಘಲಕ್‌ರು, ಬಹಮನಿಗಳು, ಪೋರ್ಚುಗೀಸರು, ಫ್ರೆಂಚ್‌ರು, ಡಚ್ಚರು ಮತ್ತು ಬ್ರಿಟಿಷರು.

ಈ ರೀತಿ ಬೇರೆ ಬೇರೆ ಕಾರಣಕ್ಕಾಗಿ ಮತ್ತು ಬೇರೆ ಬೇರೆ ಕಾಲಮಾನದಲ್ಲಿ ಹೊರಗಿನಿಂದ ಭಾರತಕ್ಕೆ ಬಂದ ಬಹುಪಾಲು ವಿದೇಶಿ ಜನರು ತಮ್ಮ ಮೂಲ ದೇಶಗಳಿಗೆ ಹಿಂದಿರುಗದೆ ಭಾರತದಲ್ಲೇ ನೆಲೆಸಿದರು. ಇಲ್ಲೇ ತಮ್ಮ ಕುಟುಂಬ ವಿಸ್ತರಿಸಿದರು. ಭಾರತದ ಮೂಲ ನಿವಾಸಿಗಳಿಗೂ, ಹೊರಗಿನವರಿಗೂ ಹೊಡೆದಾಟಗಳು ಪ್ರಾರಂಭವಾದವು. ಗೆದ್ದವರು ಸೋತವರ ಮೇಲೆ ಹಿಡಿತ ಸಾಧಿಸಿದರು. ಗೆದ್ದ ಜನಾಂಗದವರು ಸೋತವರ ಸ್ತ್ರೀಯರೊಂದಿಗೆ ಸಂಪರ್ಕ ಬೆಳೆಸುವುದರ ಮೂಲಕ ಮಿಶ್ರ ಸಂತತಿಗಳುಂಟಾದವು.

ಕ್ರಮೇಣ ಮಿಶ್ರ ಸಂತತಿಗಳು ಪ್ರತ್ಯೇಕ ಬುಡಕಟ್ಟುಗಳಾಗಿ ಬೆಳೆದವು. ಭಾರತದಲ್ಲಿನ ಜನಾಂಗಗಳನ್ನು ಅಧ್ಯಯನ ಮಾಡಿದ ಭಾರತದ ಮಾನವಶಾಸ್ತ್ರ ಸರ್ವೇಕ್ಷಣಾ ಇಲಾಖೆಯು 'ಭಾರತದ ಜನತೆ' ಎಂಬ ಪುಸ್ತಕ ಮಾಲಿಕೆಯಲ್ಲಿ ಭಾರತೀಯ ಸಮಾಜ, ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ವಿವರಿಸಿದೆ. ಈ ವಿವರಣೆಯ ಕೆಲವು ಮುಖ್ಯ ಅಂಶಗಳೆಂದರೆ:

ಅ. ಭಾರತವು ಇಡೀ ವಿಶ್ವದಲ್ಲೇ ಅತ್ಯಂತ ವೈವಿಧ್ಯಮಯ ರಾಷ್ಟ್ರವಾಗಿದೆ. ಇಲ್ಲಿ ಸುಮಾರು 4,635 ಬಗೆಯ ಜನಾಂಗೀಯ ಪಂಗಡಗಳು ಇವೆ. ಇವುಗಳು ತಮ್ಮದೇ ಆದ ಅನುವಂಶೀಯ ವೈಲಕ್ಷಣಗಳು, ಭಾಷೆ, ಉಡುಪು, ಧಾರ್ಮಿಕ ಸಂಪ್ರದಾಯಗಳು, ಆಹಾರ, ಅಭಿರುಚಿಗಳು, ಕೌಟುಂಬಿಕ ಸಂಬಂಧಗಳು ಮತ್ತು ವೈವಾಹಿಕ ಆಚರಣೆಗಳನ್ನು ಹೊಂದಿವೆ.

ಆ. ಭಾರತದ ಜನತೆ ಹಲವಾರು ಜನಾಂಗೀಯ ವರ್ಣ ಸಂಕರಣಗಳ ಮಧ್ಯೆ ಬೆಳೆದು ಬಂದಿದೆ. ಅವುಗಳೆಂದರೆ ಪ್ರೋಟೋ–ಅಸ್ಟ್ರಲಾಯ್ಡ್, ಪ್ಯಾಲಿಯೋ–ಮೆಡಿಟರೇನಿಯನ್, ಕಾಕಸಾಯಿಡ್, ನೀಗ್ರೋ ಮತ್ತು ಮಂಗೋಲಿಯನ್ನರು. ಹಾಗೆಯೇ, ಹಲವಾರು ಭಿನ್ನ ರಾಷ್ಟ್ರೀಯರು–ಆರ್ಯರು, ಪರ್ಷಿಯಾದವರು, ಗ್ರೀಕರು, ಹೂಣರು, ಅರಬ್ಬರು, ಟರ್ಕಿಯವರು, ಆಫ್ರಿಕಾದವರು, ಮಂಗೋಲಿಯನ್ನರು ಮತ್ತು ಯುರೋಪಿಯನ್ನರು–ಇಲ್ಲಿಗೆ ಬಂದು ನೆಲೆಸಿದ್ದಾರೆ. ಆದರೆ, ಇಂದು ಎಲ್ಲಿಯೂ ಯಾವುದೇ ಜನಾಂಗೀಯ ಅಥವಾ ರಾಷ್ಟ್ರೀಯತೆಯ ಮೂಲ ಲಕ್ಷಣಗಳು ಗೋಚರಿಸುವುದಿಲ್ಲ; ಬದಲಾಗಿ ಜನಾಂಗೀಯ ಸಮ್ಮಿಶ್ರಣಗಳನ್ನು ಇಡೀ ದೇಶದಲ್ಲಿ ಕಾಣಬಹುದು.

ಇ. ಒಂದೇ ಧರ್ಮದ ಅಥವಾ ಜಾತಿಯ ಜನರಿಗಿಂತ, ಒಂದೇ ಪ್ರದೇಶದಲ್ಲಿ ವಾಸಿಸುವ ಜನರಲ್ಲಿ ಹೆಚ್ಚಿನ ಸಾಮ್ಯತೆಗಳು ಇರುತ್ತವೆ. 'ಮೇಲ್ವರ್ಗ'ದ ಮತ್ತು 'ಕೆಳವರ್ಗ'ದ ಜಾತಿಗಳ ನಡುವೆ ಯಾವುದೇ ಅನುವಂಶೀಯ ಭಿನ್ನತೆಗಳಿರುವುದಿಲ್ಲ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದೆ.

ಈ. ಪ್ರತಿಯೊಂದು ಜನಾಂಗೀಯ ಜನರು ತಮ್ಮ ವಿಮೋಚನೆ, ಬಿಡುಗಡೆ ಅಥವಾ ಹಿಜ್ರತ್ ದಿನಗಳನ್ನು ಜಾನಪದ ಗೀತೆಗಳಲ್ಲಿ, ಇತಿಹಾಸದಲ್ಲಿ ಮತ್ತು ಸಮುದಾಯದ ಹಾಡುಗಳಲ್ಲಿ ಸಂರಕ್ಷಿಸಿಕೊಂಡು ಬಂದಿದ್ದಾರೆ. ಅವರು ವಾಸವಾಗಿದ್ದ ಕಡೆಗಳಲೆಲ್ಲಾ ನಿರ್ಧಿಷ್ಟ ಪ್ರದೇಶದ ಸಂಪ್ರದಾಯಗಳನ್ನು ಕಾಪಾಡಿಕೊಂಡು ಬಂದಿದ್ದಾರೆ ಮತ್ತು ಸ್ಥಳೀಯ ರೂಢಿ–ಸಂಪ್ರದಾಯಗಳನ್ನು ಒಪ್ಪಿಕೊಂಡಿದ್ದಾರೆ. ಅಷ್ಟರ ಮಟ್ಟಿಗೆ ಈ ವಿಷಯದಲ್ಲಿ ಆಕ್ರಮಣಕಾರರಾಗಿ ಬಂದವರು, ಸ್ವಯಂ ಸ್ಥಳೀಯರಾಗಿದ್ದಾರೆ.

ಉ. ನಮ್ಮ ವೈವಿಧ್ಯತೆ ಮತ್ತು ಏಕತೆಯ ಲಕ್ಷಣಗಳಲ್ಲಿ 'ಭಾಷೆ' ಅತ್ಯಂತ ಮುಖ್ಯವಾದುದು. ಭಾರತದಲ್ಲಿ ಸುಮಾರು 325 ಭಾಷೆಗಳು ಮತ್ತು 25 ಲಿಪಿಗಳು ಇವೆ. ಇವುಗಳು ಇಂಡೋ–ಆರ್ಯನ್, ಟಿಬಿಟೋ–ಬರ್ಮೀಸ್, ಇಂಡೋ–ಯೂರೋಪಿಯನ್, ದ್ರಾವಿಡ ಭಾಷೆಗಳು, ಆಸ್ಟ್ರೋ–ಏಷಿಯಾಟಿಕ್, ಅಂಡಮಾನಿಸ್ ಮತ್ತು ಇಂಡೋ–ಇರಾನಿಯನ್ನಂತಹ ವಿವಿಧ ಭಾಷಾ ಕುಟುಂಬಗಳಿಂದ ಬಂದಿವೆ.

ನಮ್ಮ ದೇಶದ ಶೇಕಡ 65ಕ್ಕಿಂತಲೂ ಹೆಚ್ಚು ಜನರು ಕನಿಷ್ಠ ಎರಡು ಭಾಷೆಗಳನ್ನು ಮಾತನಾಡುತ್ತಾರೆ. ಬಹುತೇಕ ಎಲ್ಲಾ ಬುಡಕಟ್ಟು ಜನಾಂಗದವರು ಮೂರು ಭಾಷೆಗಳನ್ನು ಮಾತನಾಡುತ್ತಾರೆ.

ಊ. ಭಾರತದ ಜನರು ಸಾಮುದಾಯಿಕ ಬದುಕಿಗೆ ನಿಕಟವಾದವರು. ಅವರು ನಿಸರ್ಗ ಮತ್ತು ಸಾಮಾಜಿಕ ಪರಿಸರದೊಂದಿಗೆ ಸದಾ ಸಂಪರ್ಕವನ್ನು ಹೊಂದಿದವರು. ಶತಮಾನಗಳಿಂದಲೂ ಅವರು ಬದುಕು ಮತ್ತು ಹೋರಾಟಗಳಲ್ಲಿ ಒಟ್ಟಾಗಿಯೇ ಭಾಗವಹಿಸಿದ್ದಾರೆ. ಈ ಪರಸ್ಪರ ಅವಲಂಬನೆ ಮತ್ತು ಸಾಮೂಹಿಕ ಹೋರಾಟಗಳು ನಮ್ಮ ವೈವಿಧ್ಯತೆ ಹಾಗೂ ಏಕತೆಯನ್ನು ಸುಭದ್ರಗೊಳಿಸಿವೆ.

ಹೀಗೆ ವಿವಿಧ ರೀತಿಯ ನಂಬಿಕೆಗಳು, ಅಭಿಪ್ರಾಯಗಳು, ಸಂಪ್ರದಾಯ, ಆಹಾರ ಪದ್ಧತಿ, ಉಡುಪು, ಆಚಾರ–ವಿಚಾರಗಳನ್ನು ಹೊಂದಿರುವ ಜನರು ಶಾಂತಿಯಿಂದ, ನೆಮ್ಮದಿಯಿಂದ ಮತ್ತು ಭಯಭೀತಿ ಇಲ್ಲದೆ ಸಾವಿರಾರು ವರ್ಷಗಳಿಂದ ಒಟ್ಟಿಗೆ ಜೀವಿಸುತ್ತಾ ಬಂದಿದ್ದಾರೆ. ಹಾಗಾಗಿಯೇ ಭಾರತವನ್ನು ಬಹುತ್ವದ ಸಮಾಜ ಎಂದು ಕರೆಯಲಾಗಿದೆ.

## 2. ಇತಿಹಾಸ:

'ಇತಿಹಾಸವನ್ನು ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು' ಎಂಬ ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ ಮಾತುಗಳು ಸಾರ್ವಕಾಲಿಕ ಸತ್ಯವಾದುದು. ಮಾನವರ ಇತಿಹಾಸವನ್ನು ತಿಳಿದುಕೊಂಡರೆ ಮುಂದಿನ ಸರಿದಾರಿ ಯಾವುದೆಂದು ತಿಳಿಯುತ್ತದೆ. ನಮ್ಮ ಹಿರಿಯರ ಅನುಭವಗಳಿಂದ ನಾವು ಪಾಠವನ್ನು ಕಲಿತರೆ ಮುಂದೆ ನಮ್ಮ ದಾರಿ ಸುಗಮವಾಗುತ್ತೆ. ನಾವು ಹೊಸದೊಂದು ಸಮಾಜವನ್ನು ಕಟ್ಟಬೇಕಾದರೆ ಮಾನವ ಇತಿಹಾಸವನ್ನು ಮೆಲುಕು ಹಾಕಲೇಬೇಕು.

ಜಗತ್ತಿನ ಇತಿಹಾಸ ನಿಂತ ನೀರಲ್ಲ, ಅದೊಂದು ನಿರಂತರವಾಗಿ ಹರಿಯುವ ನದಿ. ಇತಿಹಾಸವನ್ನು ವಿಭಜಿಸಲಾಗದು. ನಮ್ಮಂತ ಸಾಮಾನ್ಯ ಜನರು ಸುಲಭವಾಗಿ ಅರ್ಥ ಮಾಡಿಕೊಳ್ಳಲೆಂದು ಇತಿಹಾಸಕಾರರು ಭಾರತದ ಇತಿಹಾಸವನ್ನು ಮೂರು ಭಾಗಗಳಾಗಿ ವಿಂಗಡಿಸಿದ್ದಾರೆ.

### (i) ಪ್ರಾಚೀನ ಇತಿಹಾಸ:

ಕ್ರಿ.ಪೂ. 3000ದಿಂದ ಕಿ.ಶ. 985ರವರೆಗಿನ ಕಾಲಮಾನದ ಭಾರತವನ್ನು ಪ್ರಾಚೀನ ಭಾರತ ಎಂದು ಕರೆಯಲಾಗಿದೆ. ಈ ಕಾಲಮಾನದಲ್ಲಿ ಪ್ರಮುಖವಾಗಿ ಸಿಂಧು ನಾಗರಿಕತೆ, ಮೌರ್ಯರು, ಗುಪ್ತರು, ಕುಷನರು, ಹರ್ಷವರ್ಧನರು, ರಾಷ್ಟ್ರಕೂಟರು, ಚೋಳರು, ಚಾಲುಕ್ಯರು, ಪಲ್ಲವರು, ಪಾಂಡ್ಯನ್ನರು ಭಾರತ ದೇಶವನ್ನು ಆಳಿದರು.

### (ii) ಮಧ್ಯಕಾಲೀನ ಇತಿಹಾಸ:

ಕ್ರಿ..ಶ.986ರಿಂದ ಕ್ರಿ.ಶ.1756ರವರೆಗಿನ ಕಾಲಮಾನದ ಭಾರತವನ್ನು ಮಧ್ಯಕಾಲೀನ

ಭಾರತ ಎಂದು ಕರೆಯಲಾಗಿದೆ. ಈ ಕಾಲಮಾನದಲ್ಲಿ ಪ್ರಮುಖವಾಗಿ ಸುಲ್ತಾನರು, ಟರ್ಕಿಯನ್ನರು, ಪರ್ಷಿಯನ್ನರು, ಹೂಣರು, ತುಘಲಕರು, ಖಿಲ್ಜಿಗಳು, ಮೊಘಲರು, ಬಹಮನಿಯರು ಭಾರತ ದೇಶವನ್ನು ಆಳಿದರು.

**(iii) ಆಧುನಿಕ ಇತಿಹಾಸ:**

ಕ್ರಿ.ಶ. 1757ರಿಂದ ಪ್ರಸ್ತುತ ದಿನದವರೆಗಿನ ಇತಿಹಾಸವನ್ನು ಆಧುನಿಕ ಭಾರತದ ಇತಿಹಾಸವೆಂದು ಕರೆಯಲಾಗಿದೆ. ಈ ಕಾಲಮಾನದಲ್ಲಿ ಪ್ರಮುಖವಾಗಿ ಫ್ರೆಂಚರು, ಪೋರ್ಚುಗೀಸರು, ಡಚ್ಚರು ಮತ್ತು ಬ್ರಿಟಿಷರು ಭಾರತ ದೇಶವನ್ನು ಆಳಿದರು. ಪರಕೀಯರ ಆಳ್ವಿಕೆಯ ವಿರುದ್ಧ ಹೋರಾಟ ನಡೆಸಿ 1947ರಲ್ಲಿ ಭಾರತ ಸ್ವತಂತ್ರವಾಯಿತು. 1950ರಲ್ಲಿ ಜಗತ್ತಿನ ಅತಿದೊಡ್ಡ ಲಿಖಿತ ಸಂವಿಧಾನವನ್ನು ಅಳವಡಿಸಿಕೊಂಡು ಗಣರಾಜ್ಯವಾಯಿತು. ಇಂದು 21ನೇ ಶತಮಾನದ ಪ್ರಾರಂಭಿಕ ದಶಕಗಳಲ್ಲಿ ನಾವಿದ್ದೇವೆ.

ಹೆಚ್ಚಿನ ವಿವರಗಳಿಗೆ ಆಯಾ ಕಾಲಮಾನದ ಆಡಳಿತಗಾರರ ಚರಿತ್ರೆಯನ್ನು ಓದಿಕೊಳ್ಳಬೇಕು. ಆದರೆ ಭಾರತದ ಸಂವಿಧಾನವನ್ನು ಅರ್ಥ ಮಾಡಿಕೊಳ್ಳಲು ಮೇಲೆ ಹೇಳಿರುವ ಕನಿಷ್ಠ ತಿಳುವಳಿಕೆ ಅವಶ್ಯಕವಾಗಿ ಬೇಕು.

## 3. ಧರ್ಮಗಳು:

'ಧರ್ಮ ಮನುಷ್ಯರನ್ನು ಸೃಷ್ಟಿಸಲಿಲ್ಲ. ಮನುಷ್ಯರು ಧರ್ಮವನ್ನು ಸೃಷ್ಟಿಸಿದರು'. ನಾಗರಿಕ ಸಮಾಜದ ಉಗಮದೊಂದಿಗೇ ಧರ್ಮಗಳು ಬೆಳೆದುಬಂದವು. ಧರ್ಮದ ಇತಿಹಾಸವು ಮನುಷ್ಯರ ಸಾಮಾಜಿಕ ಹಾಗೂ ಆರ್ಥಿಕ ಕಥನವೇ ಆಗಿದೆ. ಮನುಷ್ಯರು ಮತ್ತು ಧರ್ಮಗಳ ಬೆಳವಣಿಗೆ ಜೊತೆ ಜೊತೆಯಲ್ಲಿ ನಡೆಯಿತು. ಜಗತ್ತಿನ ಎಲ್ಲಾ ಧರ್ಮಗಳು ಪ್ರಾರಂಭವಾಗಿದ್ದು ಜನರ ಕಣ್ಣೀರನ್ನು ಒರೆಸುವುದಕ್ಕೆ. ರೋಮ್ ನಾಗರಿಕತೆಯಲ್ಲಿ ಗುಲಾಮರ ಸಂಕಷ್ಟಗಳನ್ನು ಪರಿಹರಿಸಲೆಂದು ಕ್ರೈಸ್ತ ಧರ್ಮ ಹುಟ್ಟಿತು. ಮಧ್ಯ ಏಷ್ಯಾದಲ್ಲಿ ಕೊಲೆ, ಲೂಟಿ, ದರೋಡೆ, ಹಿಂಸೆಗಳಿಂದ ನೊಂದ ಜನರ ದುಃಖವನ್ನು ಪರಿಹರಿಸಲೆಂದೇ ಇಸ್ಲಾಂ ಧರ್ಮ ಹುಟ್ಟಿಕೊಂಡಿತು. ಭಾರತದಲ್ಲಿ ಬಲಿ, ಯಾಗ, ಯಜ್ಞ, ಹಿಂಸೆಗಳಿಗೆ ತತ್ತರಿಸಿದ ಜನರ ಕಷ್ಟವನ್ನು ಪರಿಹರಿಸಲೆಂದೇ ಜೈನ, ಬೌದ್ಧ ಧರ್ಮಗಳು ಹುಟ್ಟಿಕೊಂಡವು. ಮುಂದುವರೆದು ಇದೇ ಉದ್ದೇಶದಿಂದ ಹುಟ್ಟಿದ್ದೇ ಲಿಂಗಾಯಿತ ಧರ್ಮ ಮತ್ತು ಸಿಖ್ ಧರ್ಮ. ಆದ್ದರಿಂದಲೇ 'ದಮನಕ್ಕೊಳಗಾದ ಜನರ ಧ್ವನಿಯೇ ಧರ್ಮ'ವೆಂದು ಹೇಳಲಾಗಿದೆ.

ಭಾರತ ದೇಶದಲ್ಲಿ ವಿವಿಧ ಧರ್ಮಗಳನ್ನು ಕಾಣಬಹುದು. ಹಿಂದು, ಜೈನ, ಬೌದ್ಧ, ಸಿಖ್ ಮತ್ತು ಲಿಂಗಾಯಿತ ಧರ್ಮಗಳು ಭಾರತ ದೇಶದಲ್ಲಿ ಜನ್ಮತಾಳಿದವು. ಕ್ರೈಸ್ತ, ಇಸ್ಲಾಂ, ಬಹಾಯಿ ಮತ್ತು ಫಾರಸಿ ಧರ್ಮಗಳು ಹೊರಗಿನಿಂದ ಬಂದು ಭಾರತ ದೇಶದಲ್ಲಿ ಸ್ಥಾನಮಾನ ಗಳಿಸಿಕೊಂಡವು. ಈ ಧರ್ಮಗಳಲ್ಲದೆ ಭಾರತ ದೇಶದಲ್ಲಿ ಚೈತನ್ಯ ಪಂಥ, ನಾಥ ಪಂಥ, ಆರೂಢ, ಅವಧೂತ, ಶಾಕ್ತ, ಸಿದ್ಧ, ಸೂಫಿ ಪಂಥಗಳು ಉದಯವಾದವು. ಹಾಗೆಯೇ ಹಲವು ತಾತ್ವಿಕ ಧಾರೆಗಳು ಅಸ್ತಿತ್ವಗೊಂಡವು. ದ್ವೈತ, ಅದ್ವೈತ, ವಿಶಿಷ್ಟಾದ್ವೈತ, ಶಕ್ತಿವಿಶಿಷ್ಟಾದ್ವೈತ, ಲೋಕಾಯತ, ಚಾರ್ವಾಕ, ಸಾಂಖ್ಯ, ಅಹಮದಿಯರು, ಜ್ಯೂಡೊಯಿಸಂ,

ಖಾಹಿಯ ಮೊದಲಾದ ಪಂಥಗಳು ಇವೆ. ಅಷ್ಟೇ ಪ್ರಮುಖವಾಗಿ ಗಿರಿಜನ ಬುಡಕಟ್ಟುಗಳ ಜನರು ಯಾವುದೇ ಧಾರ್ಮಿಕ ಪಂಗಡಕ್ಕೆ ಸೇರದೆ ನಿಸರ್ಗ ಸನಿಹವಾದ ಆಚರಣೆಗಳ ಮೂಲಕ ಬದುಕು ಕಟ್ಟಿಕೊಂಡಿದ್ದಾರೆ.

ಭಾರತದಲ್ಲಿ 2011ರ ಜನಗಣತಿಯ ಪ್ರಕಾರ ಶೇಕಡಾವಾರು ಧಾರ್ಮಿಕ ಜನಸಂಖ್ಯೆ ಹೀಗಿದೆ:

| | | |
|---|---|---|
| 1. | ಹಿಂದುಗಳು | ಶೇ. 79.80 |
| 2. | ಮುಸಲ್ಮಾನರು | ಶೇ. 14.23 |
| 3. | ಕ್ರೈಸ್ತರು | ಶೇ. 2.30 |
| 4. | ಸಿಖ್ಖರು | ಶೇ. 1.72 |
| 5. | ಬೌದ್ಧರು | ಶೇ. 0.70 |
| 6. | ಜೈನರು | ಶೇ. 0.37 |
| 7. | ಇತರೆ ಧರ್ಮ ಮತ್ತು ಧರ್ಮಾತೀತರು | ಶೇ. 0.9 |

ಧರ್ಮವು ಕ್ರಮೇಣ ಕೆಲವೇ ಜನರ ಹಿತಾಸಕ್ತಿಯನ್ನು ಕಾಪಾಡುವ ಅಸ್ತ್ರವಾಯಿತು ಎನ್ನುವುದನ್ನು ನಾವು ಇತಿಹಾಸದಲ್ಲಿ ಕಾಣಬಹುದು. ಧರ್ಮವು ಅಪ್ರಜಾಪ್ರಭುತ್ವಗೊಂಡು ಮೂಲಭೂತವಾದಿಯಾಯಿತು. ಧರ್ಮ ಮತ್ತು ರಾಜಕಾರಣ ಬೆರೆತು ಕೋಮುವಾದವಾಯಿತು. ಪ್ರಪಂಚದಲ್ಲಿ ನಡೆದ ಯುದ್ಧಗಳಲ್ಲಿ ಸತ್ತ ಜನರಿಗಿಂತಲೂ ಹೆಚ್ಚಿನ ಜನರು ಮೂಲಭೂತವಾದ ಮತ್ತು ಕೋಮು ಘರ್ಷಣೆಗಳಲ್ಲಿ ಸತ್ತಿದ್ದಾರೆ.

## 4. ಜಾತಿಗಳು

ಭಾರತದಲ್ಲಿ ಜಾತಿಗಳು ಯಾವ ರೀತಿ ಜನ್ಮತಾಳಿದವು ಎಂದು ಖಚಿತವಾಗಿ ಹೇಳುವುದು ಬಹಳ ಕಷ್ಟ. ಆದರೆ ಜಾತಿಗಳು ಏಕೆ ಹುಟ್ಟಿದವು ಮತ್ತು ಏಕೆ ಉಳಿದಿವೆ ಎಂಬುದನ್ನು ತಿಳಿಯುವುದು ಕಷ್ಟವೇನಲ್ಲ. ಅನಾದಿ ಕಾಲದಲ್ಲಿ ಹೊರಗಿನಿಂದ ಬಂದವರು ಸ್ಥಳೀಯ ಜನಾಂಗದ ಮೇಲೆ ಯುದ್ಧ ಮಾಡಿ ಗೆದ್ದು ಹಿಡಿತ ಸಾಧಿಸಿದರು. ಸೋತವರ ಬಗ್ಗೆ ತಿರಸ್ಕಾರ ಭಾವ ಹೊಂದಿ, ಅವರಲ್ಲಿ ಭಯ ಹುಟ್ಟಿಸಿ, ಕಷ್ಟದ ಹಾಗೂ ಕೊಳಕಿನ ಕೆಲಸಗಳಲ್ಲಿ ತೊಡಗಿಸಿದರು. ಈ ರೀತಿ ಒಂದು ವಿಧವಾದ ಕೆಲಸದ ವಿಭಜನೆಯನ್ನು ಮಾಡಿಕೊಂಡರು. ವಿದ್ಯೆ–ಬುದ್ಧಿಯ ಗುತ್ತಿಗೆದಾರರನ್ನಾಗಿ ಬ್ರಾಹ್ಮಣರನ್ನು, ಯುದ್ಧ ಮಾಡುವುದಕ್ಕೆ ಕ್ಷತ್ರಿಯರನ್ನು, ವಾಣಿಜ್ಯ ಮತ್ತು ಕೈಗಾರಿಕೆಗಳನ್ನು ನಡೆಸುವುದಕ್ಕೆ ವೈಶ್ಯರನ್ನು ನೇಮಿಸಿದರು. ಸಾಮಾಜಿಕ ವ್ಯವಸ್ಥೆಯ ಕೊನೆಯಲ್ಲಿರುವ ಶೂದ್ರರನ್ನು ಅತ್ಯಂತ ಕಷ್ಟ ಮತ್ತು ಕೊಳಕಿನ ಕೆಲಸ ಮಾಡುವ ಗುಲಾಮರನ್ನಾಗಿ ಮಾಡಿದರು. ಈ ರೀತಿಯಾದ ಶ್ರಮ ವಿಭಜನೆಯಿಂದ ಮೊದಲ ಮೂರು ವರ್ಣಗಳು ಆಳುವವರಾಗಿಯೂ, ನಾಲ್ಕನೆಯವರು (ಶೂದ್ರರು) ಆಳಲ್ಪಟ್ಟವರಾಗಿಯೂ ರೂಪುಗೊಂಡರು. ಚಾತುರ್ವರ್ಣ್ಯದ ಹೊರಗೆ ಸಾಮಾಜಿಕ ವರ್ಗಗಳನ್ನು ನಿರ್ಮಿಸಲಾಗಿದೆ.

ಅವುಗಳೆಂದರೆ: (1) ಅಪರಾಧಿ ಬುಡಕಟ್ಟುಗಳು, (2) ಆದಿವಾಸಿ ಬುಡಕಟ್ಟುಗಳು ಮತ್ತು (3) ಅಸ್ಪೃಶ್ಯರು. ಒಂದೊಂದು ಜಾತಿಗೆ ಒಂದೊಂದು ಕಸುಬು. ಈ ಕಸುಬನ್ನು ವಂಶಪಾರಂಪರ್ಯ ಪರ ಮಾಡಲಾಗಿದೆ. ಜಾತಿಯನ್ನು ಬದಲಾಯಿಸುವಂತಿಲ್ಲ, ಕಸುಬನ್ನು ಬದಲಾಯಿಸುವಂತಿಲ್ಲ. ಜಾತಿ ಜಾತಿಯ ಮಧ್ಯೆ ಸಂಬಂಧ ಬೆಳೆಸುವಂತಿಲ್ಲ ಮತ್ತು ಸಹಭೋಜನ ಮಾಡುವಂತಿಲ್ಲ. ಅಷ್ಟೇಕೆ ಸತ್ತ ಹೆಣಗಳನ್ನು ಒಂದೆ ಸ್ಮಶಾನದಲ್ಲಿ ಸುಡುವಂತಿಲ್ಲ ಅಥವಾ ಹೂಳುವಂತಿಲ್ಲ ಎನ್ನುತ್ತವೆ ಜಾತಿಯ ಕಟ್ಟುಪಾಡುಗಳು.

ಈ ಜಾತಿ ಆಧರಿತ ಅಸಮಾನತೆ ಎಲ್ಲಾ ಕ್ಷೇತ್ರಗಳಿಗೂ ಹಬ್ಬಿದೆ. ರಾಜಕೀಯ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಈ ಅಸಮಾನತೆಗಳನ್ನು ಕಾಣಬಹುದು. ಈ ಜಾತಿ ವ್ಯವಸ್ಥೆಯಲ್ಲಿ ಮೇಲ್ಜಾತಿಗಳನ್ನು ಮೇಲ್ವರ್ಗಗಳೆಂದು ಮತ್ತು ಕೆಳಜಾತಿಗಳನ್ನು ಕೆಳವರ್ಗಗಳೆಂದು ಪರಿಗಣಿಸಲಾಗುತ್ತದೆ. **ಇದು ಶ್ರಮ ವಿಭಜನೆಯಾಗಿರದೆ ಶ್ರಮಿಕರ ವಿಭಜನೆಯಾಗಿದೆ** ಎನ್ನುವುದನ್ನು ಗಮನಿಸಬೇಕು. ಅತಿ ಹೆಚ್ಚು ಅವಿದ್ಯಾವಂತರು, ನಿರುದ್ಯೋಗಿಗಳು, ಬಡವರು, ರೋಗಗ್ರಸ್ಥರು, ವಸತಿಹೀನರು, ಭೂಹೀನರು ಎಲ್ಲಿದ್ದಾರೆಂದು ಹುಡುಕಿಕೊಂಡು ಹೋದರೆ ಅವರು ಕಾಣುವುದು ಕೆಳಜಾತಿಗಳಲ್ಲಿ. ಹೀಗೆ ಜಾತಿ ಮತ್ತು ವರ್ಗ ಬೆರೆತುಹೋಗಿರುವ ಒಂದು ಅಸಮಾನ ಸಾಮಾಜಿಕ ವ್ಯವಸ್ಥೆಯನ್ನು ಭಾರತದಲ್ಲಿ ಕಾಣಬಹುದು.

ಜಾತಿ ಪದ್ಧತಿಯು ಆರ್ಥಿಕ ಸಂಘಟನೆಯಾಗಿ ಬಹು ಹಾನಿಕಾರಕ ವ್ಯವಸ್ಥೆಯಾಗಿದೆ. ಇದು ಮನುಷ್ಯರ ಸಹಜ ಶಕ್ತಿ ಮತ್ತು ಪ್ರತಿಭೆಗಳನ್ನು ಹತ್ತಿಕ್ಕಿ, ಕಾಲಕ್ರಮೇಣ ಅವರ ಸಾಮರ್ಥ್ಯಗಳು ನಿರುಪಯುಕ್ತವಾಗುವಂತೆ ಮಾಡಿದೆ. ಉದಾಹರಣೆಗೆ ಕ್ಷತ್ರಿಯರನ್ನು ಮಾತ್ರ ಯುದ್ಧಗಳಲ್ಲಿ ತೊಡಗಿಸಲಾಗುತ್ತಿತ್ತು. ಇತರೆ ಜಾತಿಯ ಜನರು ಶಕ್ತರಾಗಿದ್ದರೂ ಅವರನ್ನು ತೊಡಗಿಸಲಿಲ್ಲ. ಹಾಗಾಗಿ ಇತರೆ ಜಾತಿಯವರಿಗೆ ಹೊರಗಿನವರ ಆಕ್ರಮಣವನ್ನು ತಡೆಯುವ ಸಾಮರ್ಥ್ಯವಿದ್ದರೂ ತಡೆಯಲಾಗಲಿಲ್ಲ. ಕ್ಷತ್ರಿಯರು ಸೋತರೆ ಇಡೀ ಭಾರತವೇ ಸೋತಂತೆ ಮಾಡಲಾಯಿತು. ಈ ಕಾರಣದಿಂದ ಭಾರತೀಯರು ಸುಮಾರು ಒಂದು ಸಾವಿರ ವರ್ಷಗಳ ಕಾಲ ಪರಕೀಯರ ಗುಲಾಮರಾಗಿ ಬಾಳಬೇಕಾಯಿತು.

## 5. ನ್ಯಾಯ ವಿತರಣಾ ಪದ್ಧತಿ

ನಾಗರಿಕ ಸಮಾಜದ ಅತಿ ಮುಖ್ಯವಾದ ಲಕ್ಷಣಗಳಲ್ಲಿ ಒಂದು, ಅಲ್ಲಿನ ನಿವಾಸಿಗಳು ತಮ್ಮೊಳಗಿನ ವ್ಯಾಜ್ಯಗಳನ್ನು ಹೇಗೆ ಶಾಂತಿಯುತವಾಗಿ ಪರಿಹರಿಸಿಕೊಳ್ಳುತ್ತಾರೆ ಎಂಬುದು. ಭಾರತ ರಾಷ್ಟ್ರೀಯ ಕಾನೂನು ಆಯೋಗ ತನ್ನ ಹದಿನಾಲ್ಕನೇ ವರದಿಯಲ್ಲಿ ಪ್ರಾಚೀನ ಭಾರತದಲ್ಲಿನ ನ್ಯಾಯಾಲಯಗಳ ಬಗ್ಗೆ ನಿರ್ಧಿಷ್ಟವಾಗಿ ಏನನ್ನು ಹೇಳುವುದಕ್ಕೆ ಆಗುವುದಿಲ್ಲವೆಂದು ತಿಳಿಸಿದೆ. ಆದರೆ ಸ್ಮೃತಿಕಾರರಾದ ನಾರದ, ಬೃಹಸ್ಪತಿ, ಮನು, ಮಾಧವ ಹಾಗೂ ಇತರರ ಬರವಣಿಗೆಗಳಿಂದ ಕಟ್ಟುನಿಟ್ಟಿನ ನ್ಯಾಯ ವಿತರಣಾ ಪದ್ಧತಿ ಇತ್ತು ಎಂದು ತಿಳಿಯುತ್ತದೆ.

**ಪ್ರಾಚೀನ ಭಾರತದ ನ್ಯಾಯ ಪದ್ಧತಿಗಳು:**

**(i) ಸಶಿಷ್ಟ ನ್ಯಾಯಾಲಯಗಳು :**

ಈ ನ್ಯಾಯಾಲಯಗಳು ರಾಜರ ಅರಮನೆಯಲ್ಲಿ ಇರುತ್ತಿದ್ದವು. ಇಲ್ಲಿ ರಾಜರೆ ಸ್ವತಃ ವ್ಯಾಜ್ಯಗಳನ್ನು ತೀರ್ಮಾನ ಮಾಡುತ್ತಿದ್ದರು. ಪ್ರತಿ ದಿನ ರಾಜರು ತಮ್ಮ ಅನೇಕ ಪ್ರಮುಖ ಕೆಲಸಗಳ ಮಧ್ಯೆಯೂ ನ್ಯಾಯ ತೀರ್ಮಾನದ ಕೆಲಸಕ್ಕಾಗಿ ಸ್ವಲ್ಪ ಸಮಯವನ್ನು ವಿನಿಯೋಗಿಸುತ್ತಿದ್ದರು. ರಾಜರ ನ್ಯಾಯ ತೀರ್ಮಾನದ ಕೆಲಸವನ್ನು ಸಮರ್ಪಕವಾಗಿ ಮಾಡಲು ಕಾನೂನಿನ ರಚನೆ ಅನಿವಾರ್ಯವಾಯಿತು. ಈ ಕಾನೂನುಗಳನ್ನು ಸ್ಮೃತಿಕಾರರಾದ ಮನು, ಯಾಜ್ಞ್ಯವಲ್ಕ್ಯ, ಪರಾಶರ, ನಾರದ, ಬೃಹಸ್ಪತಿ, ಕಾತ್ಯಾಯನ, ಕೌಟಿಲ್ಯ ಮುಂತಾದವರು ಪ್ರಮುಖವಾಗಿ ರಚನೆ ಮಾಡಿದರು.

**(ii) ಮುದ್ರಿಕ ನ್ಯಾಯಾಲಯಗಳು:**

ಈ ನ್ಯಾಯಾಲಯಗಳು ರಾಜರ ಪರವಾಗಿ ರಾಜಮುದ್ರಿಕೆಯನ್ನು ಬಳಸಿ ನ್ಯಾಯ ವಿತರಣೆ ಮಾಡುವ ನ್ಯಾಯಾಲಯಗಳು.

**(iii) ಅಪ್ರಶಿಷ್ಟ ನ್ಯಾಯಾಲಯಗಳು**

ಈ ನ್ಯಾಯಾಲಯಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಂಚರಿಸಿ ಜನರಿಗೆ ನ್ಯಾಯ ವಿತರಣೆ ಮಾಡುತ್ತಿದ್ದವು. (ಸಂಚಾರಿ ನ್ಯಾಯಾಲಯ)

**(iv) ಪ್ರಶಿಷ್ಟ ನ್ಯಾಯಾಲಯಗಳು**

ಈ ನ್ಯಾಯಾಲಯಗಳು ಒಂದು ನಿರ್ದಿಷ್ಟ ಸ್ಥಳದಲ್ಲಿ ಕಾರ್ಯನಿರ್ವಹಿಸುತ್ತವೆ.

ಮೇಲಿನ ನ್ಯಾಯಾಲಯಗಳಲ್ಲಿ ನ್ಯಾಯಾಧೀಶರಾಗಿ ನೇಮಕಗೊಳ್ಳುವ ವ್ಯಕ್ತಿಗಳಿಗೆ ಇರಬೇಕಾದ ಕೆಲವು ವಿಶೇಷ ಲಕ್ಷಣಗಳನ್ನು ಸ್ಮೃತಿಕಾರನಾದ ಕಾತ್ಯಾಯನ ಈ ರೀತಿ ಹೇಳುತ್ತಾನೆ:

1) ನ್ಯಾಯಾಧೀಶರು ಕ್ರೂರಿಯಾಗಿರಬಾರದು. ಹಸನ್ಮುಖಿಯೂ, ದಯಾಳುವೂ, ಬುದ್ಧಿವಂತರೂ, ಲವಲವಿಕೆಯುಳ್ಳವರೂ ಆಗಿದ್ದು, ದುರಾಸೆ ಇಲ್ಲದವರಾಗಿರಬೇಕು.

2) ನ್ಯಾಯಾಧೀಶರು ಏಕಶಾಸ್ತ್ರ ಪಂಡಿತರಾಗಿರದೇ ಬಹುಶಾಸ್ತ್ರಗಳನ್ನು ತಿಳಿದವರಾಗಿರಬೇಕು.

ಮೇಲೆ ವಿವರಿಸಿದ ನ್ಯಾಯಾಲಯಗಳು ವಿವಿಧ ಜಾತಿಗಳ ಅರ್ಹತೆ ಮತ್ತು ಅನರ್ಹತೆಗಳ ಪ್ರಭಾವಕ್ಕೆ ಒಳಗಾಗಿದ್ದವು. ಅಪರಾಧಿ ಹಾಗೂ ಅಪರಾಧಕ್ಕೆ ಬಲಿಯಾದ ವ್ಯಕ್ತಿಯ ಜಾತಿಗೆ

ಅನುಗುಣವಾಗಿ ಶಿಕ್ಷೆಯನ್ನು ವಿಧಿಸಲಾಗುತ್ತಿತ್ತು. ಬ್ರಾಹ್ಮಣರು ಅಥವಾ ಕ್ಷತ್ರಿಯರು ಅಥವಾ ವೈಶ್ಯರು ಎಸಗಿದ ಅಪರಾಧಕ್ಕೆ ಕೇವಲ ದಂಡವನ್ನು ವಿಧಿಸಬಹುದಾಗಿತ್ತು. ಆದರೆ ಶೂದ್ರರು ಮಾಡಿದ ಅಂತಹುದೇ ಅಪರಾಧಕ್ಕೆ ದೈಹಿಕ ದಂಡನೆಯ ಶಿಕ್ಷೆಯನ್ನು ಅನುಭವಿಸಬೇಕಾಗಿತ್ತು. ಉದಾಹರಣೆಗೆ, ಬ್ರಾಹ್ಮಣರು ಕ್ಷತ್ರಿಯ, ವೈಶ್ಯ ಅಥವಾ ಶೂದ್ರರನ್ನು ಅಪಮಾನಿಸಿದರೆ ಅದಕ್ಕೆ ಶಿಕ್ಷೆಯಾಗಿ ಅನುಕ್ರಮವಾಗಿ ಐವತ್ತು, ಇಪ್ಪತ್ತೈದು ಅಥವಾ ಹನ್ನೆರಡು ಪಟ್ಟುಗಳಷ್ಟು ದಂಡ ತೆರಬೇಕಾಗಿತ್ತು. ಜಾತಿ ಶ್ರೇಣಿಗೆ ಅನುಗುಣವಾಗಿ ಆಯಾ ಜಾತಿಗಳವರು ಸಾಲಕ್ಕೆ ಬಡ್ಡಿಯನ್ನು ಕೊಡಬೇಕಾಗಿತ್ತು. ಬ್ರಾಹ್ಮಣರು ಶೇಕಡ ಎರಡು, ವೈಶ್ಯರು ಶೇಕಡ ಮೂರು, ಕ್ಷತ್ರಿಯರು ಶೇಕಡಾ ನಾಲ್ಕು, ಮತ್ತು ಶೂದ್ರರು ಶೇಕಡಾ ಹನ್ನೆರಡರಷ್ಟು ಬಡ್ಡಿ ನೀಡಬೇಕಿತ್ತು. ಕೆಳಜಾತಿಯವರ ಸಾಕ್ಷಿಗೆ ಕಡಿಮೆ ಪ್ರಾಧಾನ್ಯತೆಯನ್ನು ಮತ್ತು ಮೇಲ್ಜಾತಿಯವರ ಸಾಕ್ಷಿಗೆ ಹೆಚ್ಚಿನ ಪ್ರಾಧಾನ್ಯತೆಯನ್ನು ನೀಡಲಾಗಿತ್ತು. ಕೆಲವು ವ್ಯಾಜ್ಯಗಳಲ್ಲಿ ಕೆಳಜಾತಿಯವರು ಮೇಲ್ಜಾತಿಯವರ ವಿರುದ್ಧ ಸಾಕ್ಷಿಯನ್ನು ನೀಡುವಂತಿರಲಿಲ್ಲ. ಹೀಗೆ ಪ್ರಾಚೀನ ಭಾರತದಲ್ಲಿದ್ದ, ಮೇಲು ಹಂತದ ನ್ಯಾಯ ವಿತರಣಾ ಪದ್ಧತಿಯು ಜಾತಿ ಶ್ರೇಣಿಯನ್ನು ಆಧರಿಸಿದ, ಸಾಂಪ್ರದಾಯಿಕ ಮತ್ತು ಧಾರ್ಮಿಕ ಕಟ್ಟುಪಾಡುಗಳನ್ನು ಅನುಸರಿಸುತ್ತಿದ್ದ ನ್ಯಾಯ ವಿತರಣಾ ಪದ್ಧತಿಯಾಗಿತ್ತು.

ಆದರೆ ಕೆಳಹಂತದಲ್ಲಿ ಅಂದರೆ ಗ್ರಾಮಮಟ್ಟದಲ್ಲಿ ಭಿನ್ನವಾದ ನ್ಯಾಯ ವಿತರಣಾ ಪದ್ಧತಿ ಜಾರಿಯಲ್ಲಿತ್ತು. ಒಂದೇ ಕುಲಕ್ಕೆ ಅಥವಾ ಜಾತಿಗೆ ಸೇರಿದ ಜನರ ನಡುವೆ ಉಂಟಾಗುವ ವ್ಯಾಜ್ಯಗಳನ್ನು ಆ ಕುಲದ ಹಿರಿಯರು ನಿಷ್ಪಕ್ಷಪಾತವಾಗಿ ತೀರ್ಮಾನ ಮಾಡುತ್ತಿದ್ದರು. ಹಲವು ಜಾತಿಗಳ ಜನರ ನಡುವೆ ಉಂಟಾಗುವ ವ್ಯಾಜ್ಯಗಳನ್ನು ಹಳ್ಳಿಯ ಹಿರಿಯರು ತೀರ್ಮಾನ ಮಾಡುತ್ತಿದ್ದರು. ಕುಲದ ಮುಖಂಡರೇ ಆಗಲೀ ಅಥವಾ ಹಳ್ಳಿಯ ಹಿರಿಯರೇ ಆಗಲೀ, ಕಾನೂನು ವಿಚಾರಗಳಲ್ಲಿ ಪಾಂಡಿತ್ಯವನ್ನು ಪಡೆದವರಲ್ಲ. ಆದರೆ ಅವರು ಅನುಭವದ ಆಧಾರದಲ್ಲಿ, ವಾಸ್ತವಾಂಶದ ಆಧಾರದ ಮೇಲೆ ಮತ್ತು ಒಟ್ಟೂ ಸಮುದಾಯದ ಹಿತದ ಹಿನ್ನೆಲೆಯಲ್ಲಿ ವ್ಯಾಜ್ಯಗಳನ್ನು ಇತ್ಯರ್ಥ ಮಾಡುತ್ತಿದ್ದರು.

ಮಧ್ಯಕಾಲದಲ್ಲಿ ಭಾರತದಲ್ಲಿ ಆಳ್ವಿಕೆ ನಡೆಸಿದ ಮುಸಲ್ಮಾನರು ಭಾರತದ ನ್ಯಾಯ ವಿತರಣಾ ಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ತಂದರು. ಗ್ರಾಮ ಮಟ್ಟದ ನ್ಯಾಯ ವಿತರಣಾ ಪದ್ಧತಿಯಲ್ಲಿ ಮುಸ್ಲಿಂ ದೊರೆಗಳು ಹಸ್ತಕ್ಷೇಪ ಮಾಡಲಿಲ್ಲ. ಮೇಲ್ಮಟ್ಟದ ನ್ಯಾಯಾಲಯಗಳಲ್ಲಿ ಸಿವಿಲ್ ಪ್ರಕರಣಗಳಲ್ಲಿ ಎರಡೂ ಕಡೆ ಕಕ್ಷಿಗಾರರು ಹಿಂದುಗಳಾಗಿದ್ದರೆ ಹಿಂದು ಕಾನೂನುಗಳನ್ನು ಮತ್ತು ನಿಯಮಗಳನ್ನು ಅನುಸರಿಸಲಾಗುತ್ತಿತ್ತು ಮತ್ತು ಹಿಂದು ನ್ಯಾಯವೇತ್ತರ ಸಲಹೆ ಪಡೆಯಲಾಗುತ್ತಿತ್ತು. ಒಂದು ಕಡೆ ಹಿಂದು ಮತ್ತೊಂದು ಕಡೆ ಮುಸ್ಲಿಮರ ನಡುವೆ ಉಂಟಾದ ವ್ಯಾಜ್ಯದಲ್ಲಿ ಇಸ್ಲಾಂ ನ್ಯಾಯ ಮಂಡಳಿಗಳು ತಮ್ಮದೇ ಪ್ರತ್ಯೇಕ ಅಧಿಕಾರ ವ್ಯಾಪ್ತಿಯನ್ನು ಹೊಂದಿದ್ದವು. ಕ್ರಿಮಿನಲ್ ವಿವಾದಗಳಲ್ಲಿ ಇಸ್ಲಾಂ ಧರ್ಮದ ಪದ್ಧತಿಯನ್ನೇ ಅನುಸರಿಸುತ್ತಿದ್ದರು.

ಆಧುನಿಕ ಭಾರತದ ಇತಿಹಾಸದಲ್ಲಿ ಬ್ರಿಟಿಷರ ಆಳ್ವಿಕೆ ಪ್ರಮುಖವಾದದ್ದು. 1601ರಲ್ಲಿ ಈಸ್ಟ್ ಇಂಡಿಯಾ ಕಂಪನಿ ಸ್ಥಾಪನೆಯಾಯಿತು. ಕ್ರಮೇಣ ಈ ಕಂಪನಿಗೆ ಶಾಸನಗಳನ್ನು ರಚಿಸುವ, ಅವುಗಳನ್ನು ಜಾರಿ ಮಾಡುವ ಮತ್ತು ಅವುಗಳನ್ನು ಉಲ್ಲಂಘನೆ ಮಾಡಿದವರಿಗೆ ಶಿಕ್ಷೆಯನ್ನು ವಿಧಿಸುವ ಅಧಿಕಾರ ನೀಡಲಾಯಿತು. ಕ್ರಿ.ಶ.1683ರಲ್ಲಿ ಕಂಪನಿಗೆ ಸೂಕ್ತವೆಂದು

ತೋರಿದ ಕಡೆಯಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸಲು ಅವಕಾಶ ಮಾಡಿಕೊಟ್ಟಿತು. ಕ್ರಿ.ಶ. 1726ರಲ್ಲಿ ಇಂಗ್ಲೆಂಡ್ ಮಾದರಿಯಲ್ಲಿ ಅಂದಿನ ಮದರಾಸು, ಬೊಂಬಾಯಿ ಮತ್ತು ಕಲ್ಕತ್ತಾ ನಗರಗಳಲ್ಲಿ ನ್ಯಾಯಾಲಯಗಳನ್ನು ಸ್ಥಾಪಿಸಲಾಯಿತು.

ನಂತರದ ವರ್ಷಗಳಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ, ಕ್ರಿಮಿನಲ್ ಪ್ರಕ್ರಿಯಾ ಸಂಹಿತೆ, ವಾರಸು ಅಧಿನಿಯಮ, ಸಾಕ್ಷ್ಯ ಅಧಿನಿಯಮ, ಕರಾರುಗಳ ಅಧಿನಿಯಮ, ನೆಗೋಷಿಯಬಲ್ ಇನ್ಸ್ಟ್ರುಮೆಂಟ್ ಕಾಯಿದೆ, ಆಸ್ತಿ ವರ್ಗಾವಣೆ ಕಾಯಿದೆ, ಕಾಲಮಿತಿ ಕಾಯಿದೆ ಇತ್ಯಾದಿ ಹಲವು ಶಾಸನಗಳನ್ನು ಜಾರಿಗೆ ತರಲಾಯಿತು. ಕ್ರಮೇಣ ಸಿವಿಲ್ ನ್ಯಾಯಾಲಯಗಳು, ಕ್ರಿಮಿನಲ್ ನ್ಯಾಯಾಲಯಗಳು ಮತ್ತು ಉಚ್ಚ ನ್ಯಾಯಾಲಯಗಳನ್ನು ಪ್ರಾರಂಭಿಸಲಾಯಿತು.

ಬ್ರಿಟಿಷ್ ಮಾದರಿಯ ಶಾಸನಗಳು ಮತ್ತು ನ್ಯಾಯಾಲಯಗಳು ಪ್ರಾಚೀನ ಭಾರತದ ಅನೇಕ ಪದ್ಧತಿಗಳನ್ನು ಬದಲಾಯಿಸಿದವು ಮತ್ತು ಹಲವನ್ನು ಕೊನೆಗಾಣಿಸಿದವು. ಅದೇ ರೀತಿಯಾಗಿ ಮುಸಲ್ಮಾನರು ತಂದ ನ್ಯಾಯ ಪದ್ಧತಿಯೂ ಬದಲಾವಣೆಗೆ ಒಳಗಾದವು.

## 6. ಆರ್ಥಿಕ ವ್ಯವಸ್ಥೆ

ಭಾರತದ ಅರ್ಥ ವ್ಯವಸ್ಥೆಯ ಅಡಿಪಾಯ ಹಳ್ಳಿಗಳು. ಪ್ರತಿಯೊಂದು ಹಳ್ಳಿಗೂ ನಿರ್ದಿಷ್ಟ ಗಡಿ ಇದೆ. ಹಳ್ಳಿಗಳಲ್ಲಿ ಪಟೇಲ, ಶ್ಯಾನುಭೋಗ, ತೋಟಿ, ತಳವಾರ, ನೀರುಗಂಟಿಯೆಂಬ ಆಡಳಿತಗಾರರಿದ್ದರು. ಉತ್ತರ ಕರ್ನಾಟಕದಲ್ಲಿ ಗೌಡರು, ಪೊಲೀಸ್‌ಗೌಡ, ಮಾಲೀಗೌಡ, ಕುಲಕರ್ಣಿ, ತಳವಾರ, ಪಾಡೇವಾರ ಇತ್ಯಾದಿ. ಅಗಸ, ನಾಯಿಂದ, ಜ್ಯೋತಿಷಿ, ಜೋಯಿಸ, ಉಪಾಧ್ಯಾಯರೆಂಬ ವಿವಿಧ ಸೇವೆ ನೀಡುವ ಸೇವಾಗಾರರಿದ್ದರು. ನೇಗಿಲು, ಬಂಡಿ ಮುಂತಾದ ಮರಗೆಲಸಕ್ಕೆ ಬಡಗಿ, ಮಡಕೆ ಮಾಡುವ ಕುಂಬಾರ, ಚಿನ್ನ–ಬೆಳ್ಳಿ ಒಡವೆ ಮಾಡುವ ಅಕ್ಕಸಾಲಿಗ, ಚರ್ಮದ ಕೆಲಸಕ್ಕೆ ಚಮ್ಮಾರ ಎಂಬ ಕಸುಬುಗಾರರಿದ್ದರು. ಹಳ್ಳಿಯ ಬಹುತೇಕ ಜನ ಕೃಷಿಕರು. ಈ ಕೃಷಿಕರಿಗೆ ಕಸುಬುಗಾರರು, ಸೇವೆಗಾರರು ಮತ್ತು ಆಡಳಿತಗಾರರು ಸೇವೆ ನೀಡುತ್ತಿದ್ದರು. ಅದಕ್ಕೆ ಪ್ರತಿಫಲವಾಗಿ ರೈತರ ಬೆಳೆಯಲ್ಲಿ ನಿರ್ದಿಷ್ಟ ಪಾಲನ್ನು ಪಡೆಯುತ್ತಿದ್ದರು. ಈ ರೀತಿಯಲ್ಲಿ ಹಳ್ಳಿಯು ಹೆಚ್ಚು ಕಡಿಮೆ ಸ್ವಾವಲಂಬಿಯಾಗಿ ಹಾಗೂ ಸ್ವಯಂಪೂರ್ಣವಾಗಿತ್ತು. ಆದ್ದರಿಂದಲೇ ಪ್ರತಿಯೊಂದು ಹಳ್ಳಿಯನ್ನೂ ಸ್ವತಂತ್ರವಾದ ಗಣರಾಜ್ಯ ಎಂದು ಕರೆದರು.

ಹಳ್ಳಿಯ ಜೀವನಕ್ಕೆ ಪೂರಕವಾಗಿ ಬೇಕಾದ ಸಾಮಗ್ರಿಗಳನ್ನು ತಯಾರಿಸಿಕೊಡುವ ಗುಡಿ ಕೈಗಾರಿಕೆಗಳಿದ್ದವು. ಮತ್ತೊಂದು ಕಡೆ ದೊಡ್ಡ ಪ್ರಮಾಣದಲ್ಲಿ ಸೈನ್ಯಕ್ಕೆ, ವ್ಯಾಪಾರಕ್ಕೆ ಮತ್ತು ವಿದೇಶಗಳಿಗೆ ರಫ್ತು ಮಾಡುವುದಕ್ಕೆ ಬೇಕಾಗುವಷ್ಟು ಸರಕನ್ನು ತಯಾರಿಸುವ ಕುಶಲ ಕೈಗಾರಿಕೆಗಳಿದ್ದವು.

ಹೀಗೆ ಸ್ವಯಂಪೂರ್ಣ ಗ್ರಾಮ, ಗುಡಿ ಕೈಗಾರಿಕೆಗಳು, ಕುಶಲ ಕೈಗಾರಿಕೆಗಳು, ವ್ಯಾಪಾರ, ಲೇವಾದೇವಿ ಇತ್ಯಾದಿಗಳು ಭಾರತದ ಅರ್ಥವ್ಯವಸ್ಥೆಯ ಆಧಾರ ಸ್ಥಂಭಗಳಾಗಿದ್ದವು. ಜೊತೆ ಜೊತೆಗೇ ಶೋಷಣೆ, ಸುಲಿಗೆ, ಅತ್ಯಾಚಾರ, ಲಂಚಗುಳಿತನ ಎಲ್ಲವೂ ಇದ್ದವು. ಬಹಳ ಜನ ಬಡವರಾಗಿದ್ದರು; ಹಲವು ಬಗೆಯ ಪಕ್ಷಪಾತಗಳಿದ್ದವು. ಭಾರತದಲ್ಲಿ ತಯಾರಾದ

ಸರಕುಗಳು ಅಂತಾರಾಷ್ಟ್ರೀಯ ಮಾರುಕಟ್ಟೆಗೆ ಹೋಗಿ ದೇಶದೊಳಗೆ ಚಿನ್ನ ಬೆಳ್ಳಿ ಹರಿದು ಬರುತ್ತಿತ್ತು. ಈ ಸಂಪತ್ತು ನ್ಯಾಯವೆಂದು ಹೇಳಬಹುದಾದ ರೀತಿಯಲ್ಲಿ ಜನಸಾಮಾನ್ಯರಿಗೆ ವಿತರಣೆಯಾಗಲಿಲ್ಲ. ಆದರೆ ದೇಶದಿಂದ ಹೊರಕ್ಕೆ ಹೋಗಲಿಲ್ಲ.

ಬ್ರಿಟಿಷರ ಆಳ್ವಿಕೆಯಲ್ಲಿ ಭಾರತದ ಅರ್ಥವ್ಯವಸ್ಥೆಯ ನಶಿಸುವಿಕೆ ಅರಂಭವಾಯಿತು. ನಾನಾ ನೆಪಗಳಲ್ಲಿ ಇಲ್ಲಿನ ರಾಜರು, ನವಾಬರು ಕೂಡಿಸಿಟ್ಟಿದ್ದ ಸಂಪತ್ತನ್ನು ಬ್ರಿಟಿಷರು ಕೊಳ್ಳೆ ಹೊಡೆದರು. ಹೆಚ್ಚಿನ ಕಂದಾಯ ಮತ್ತು ವಿವಿಧ ರೀತಿಯ ತೆರಿಗೆಗಳನ್ನು ವಸೂಲಿ ಮಾಡಿ ಇಂಗ್ಲೆಂಡಿಗೆ ಕಳುಹಿಸಿದರು. ಇದರ ಪರಿಣಾಮವಾಗಿ ಕೃಷಿ ಮತ್ತು ಕುಶಲ ಕೈಗಾರಿಕೆಗಳು ನಾಶವಾದವು. ಕೋಟ್ಯಾಂತರ ಜನರನ್ನು ಕ್ಷಾಮದ ದವಡೆಗೆ ನೂಕಿದರು. ಕ್ರಮೇಣ ಭಾರತ ಬಹುದೊಡ್ಡ ಬಡವರನ್ನು ಹೊಂದಿದ ರಾಷ್ಟ್ರವಾಯಿತು.

## 7. ಧಾರ್ಮಿಕ ಕಟ್ಟುಪಾಡುಗಳು, ಸಾಮಾಜಿಕ ಮೌಲ್ಯಗಳು ಮತ್ತು ಮೂಢನಂಬಿಕೆಗಳು

ಭಾರತದ ಶ್ರೇಣೀಕೃತ ಜಾತಿ ಪದ್ಧತಿ ವ್ಯವಸ್ಥೆಯು ಕೆಳಹಂತದ ಜನ ಸಮುದಾಯಗಳನ್ನು ಶಿಕ್ಷಣದಿಂದ ದೂರವಿಟ್ಟಿತು. ಮಹಿಳೆಯರನ್ನು ಎರಡನೇ ದರ್ಜೆಯ ಜನರಂತೆ ಕಾಣಲಾಗುತ್ತಿತ್ತು ಹಾಗೂ ಅವರನ್ನು ಶಿಕ್ಷಣದಿಂದ ಬಹಿಷ್ಕರಿಸಲಾಗಿತ್ತು. 'ಅಸ್ಪೃಶ್ಯರು ಸಂಸ್ಕೃತವನ್ನು ಕೇಳಿಸಿಕೊಂಡರೆ ಕಿವಿಗೆ ಕಾದ ಸೀಸ ಹೊಯ್ಯಿರಿ, ಸಂಸ್ಕೃತದಲ್ಲಿ ಮಾತನಾಡಿದರೆ ನಾಲಿಗೆಯನ್ನು ಸೀಳಿರಿ' ಎಂದೆಲ್ಲಾ ಹೇಳಲಾಯಿತು. ಅಂದಿನ ಶಿಕ್ಷಣ ಸಂಸ್ಥೆಗಳಾದ ಗುರುಕುಲಗಳಲ್ಲಿ ಕೇವಲ ಕ್ಷತ್ರಿಯ ಮತ್ತು ಬ್ರಾಹ್ಮಣ ವರ್ಗಗಳಿಗೆ ಪ್ರವೇಶವಿತ್ತು. ಉಳಿದ ಜಾತಿಯ ಜನರಿಗೆ ಗುರುಕುಲಗಳಲ್ಲಿ ಪ್ರವೇಶ ನಿಷೇಧಿಸಲಾಗಿತ್ತು. ಏಕಲವ್ಯನಂತಹ ಅರಣ್ಯವಾಸಿಯು ತನ್ನ ಸ್ವಂತ ಪರಿಶ್ರಮದಿಂದ ವಿದ್ಯೆಯನ್ನು ಕಲಿತ ಸಂಗತಿ ನಮಗೆಲ್ಲಾ ತಿಳಿದಿದೆ. ಆದರೆ ಅದನ್ನೂ ಸಹಿಸಲಾಗದೆ ಗುರುಕಾಣಿಕೆಯ ಹೆಸರಿನಲ್ಲಿ ಅವನ ಹೆಬ್ಬೆರಳನ್ನು ಅವನ ಕೈಯಿಂದಲೆ ಕತ್ತರಿಸಿಕೊಳ್ಳುವಂತೆ ಮಾಡಲಾಯಿತು. ಹೀಗೆ ಭಾರತದ ಬಹುದೊಡ್ಡ ಜನ ವಿಭಾಗ ಸ್ವಾತಂತ್ರ್ಯ ಪೂರ್ವದಲ್ಲಿ ಶಿಕ್ಷಣದಿಂದ ವಂಚಿಸಲ್ಪಟ್ಟಿತ್ತು.

ಜಗತ್ತಿನ ಹೆಚ್ಚಿನ ಭಾಗಗಳಲ್ಲಿ ಹೀಗೆ ಒಂದಲ್ಲ ಒಂದು ಜನಸಮುದಾಯವನ್ನು ಕೆಳಸ್ತರದವರು ಎಂದು ಗುರುತಿಸಲಾಗುತ್ತಿತ್ತು. ರೋಮನ್ನರಲ್ಲಿ ಗುಲಾಮರು, ಸ್ಪಾರ್ಟನ್ನರಲ್ಲಿ ಜೀತದಾಳುಗಳು, ಬ್ರಿಟಿಷರಲ್ಲಿ ನೀಚ ವೃತ್ತಿಯವರು, ಅಮೇರಿಕದಲ್ಲಿ ನೀಗ್ರೋಗಳು ಮತ್ತು ಜರ್ಮನರಲ್ಲಿ ಯಹೂದಿಗಳು ಇದ್ದರು. ಹೀಗೆಯೇ ಭಾರತದಲ್ಲಿ ಅಸ್ಪೃಶ್ಯರು. ಕಾಲಕ್ರಮೇಣ ಗುಲಾಮಗಿರಿ, ಜೀತ ಪದ್ಧತಿ ಇವೆಲ್ಲ ಮರೆಯಾದವು. ಆದರೆ ಅಸ್ಪೃಶ್ಯತೆ ಮಾತ್ರ ಇನ್ನೂ ಉಳಿದೇ ಇದೆ. ಭಾರತದಲ್ಲಿರುವ ಅಸ್ಪೃಶ್ಯತೆ ಅಮಾನವೀಯವಾದದ್ದು. ಈ ವರ್ಗದ ಜನ ಹುಟ್ಟುವುದು ಅಸ್ಪೃಶ್ಯರಾಗಿ, ಬದುಕುವುದು ಅಸ್ಪೃಶ್ಯರಾಗಿ, ಸಾಯುವುದು ಅಸ್ಪೃಶ್ಯರಾಗಿ ಮತ್ತು ಪಡೆಯುವುದು ಅಸ್ಪೃಶ್ಯತೆಯ ಕಳಂಕ ಅಂಟಿದ ಮಕ್ಕಳನ್ನು.

ಧರ್ಮದ ಸೃಷ್ಟಿಯಲ್ಲಿ ಪುರುಷರು ಪ್ರಧಾನ ಪಾತ್ರ ವಹಿಸಿದ್ದಾರೆ. ನೂರಾರು ಕಟ್ಟುಪಾಡುಗಳನ್ನು ವಿಧಿಸಿ ಮನುಷ್ಯರು ಮನುಷ್ಯರಾಗಿ ಬದುಕಲು ಸಾಧ್ಯವಾಗದಂತಹ

ಪರಿಸ್ಥಿತಿಯನ್ನು ನಿರ್ಮಾಣ ಮಾಡಲಾಗಿದೆ. ಪುರಾಣಗಳು, ಪುಣ್ಯಕತೆಗಳು, ಮೂಢನಂಬಿಕೆಗಳು, ಸಂಪ್ರದಾಯ ಆಚರಣೆಗಳು, ಭಾವನಾತ್ಮಕ ನಂಬಿಕೆಗಳಾಗಿ ಪರಿಣಮಿಸಿದ್ದು ಶೋಷಕರನ್ನು ಮತ್ತು ಶೋಷಣಾ ವ್ಯವಸ್ಥೆಯನ್ನು ರಕ್ಷಿಸುವ ತಂತ್ರದ ಭಾಗವಾಗಿದೆ.

ಜಗತ್ತಿನ ಬಹುಪಾಲು ಧರ್ಮಗಳು ಮಹಿಳೆಯರನ್ನು ದುರ್ಬಲ ವರ್ಗದ ಒಂದು ಭಾಗವಾಗಿಯೇ ಕಾಣುತ್ತಾ ಬಂದಿವೆ. ಭಾರತದಲ್ಲಿ ಬಾಲ್ಯವಿವಾಹ, ಸತಿ ಪದ್ಧತಿ, ದೇವದಾಸಿ ಪದ್ಧತಿ, ವಿಧವೆಯರ ಮರುಮದುವೆ ನಿಷೇಧ, ವರದಕ್ಷಿಣೆ ಪದ್ಧತಿ, ಬಾಲೆಯರ ಬಲಿ ಇತ್ಯಾದಿ ಅನಿಷ್ಟ ಧಾರ್ಮಿಕ ಪದ್ಧತಿಗಳಿಂದ ಮಹಿಳೆಯರ ಶೋಷಣೆ ನಿರಂತರವಾಗಿ ಮುಂದುವರೆಯಿತು. 'ಹೆಣ್ಣು' ತಿಳುವಳಿಕೆ ಇಲ್ಲದವಳು, ಹೆಣ್ಣಿನ ಬುದ್ಧಿ ಮೊಣಕಾಲಿನ ಕೆಳಗೆ, ಕೆಡುಕಿಗೆ ಮೂಲ ಹೆಣ್ಣು, ಜಗತ್ತಿಗೆ ಪಾಪ ತಂದವಳು ಹೆಣ್ಣು, ಹೆಣ್ಣಿನ ಸಂಪರ್ಕ ನರಕಕ್ಕೆ ದಾರಿ, ನಗುವ ಹೆಂಗಸನ್ನು ನಂಬಬೇಡ ಎಂದೆಲ್ಲಾ ಹೇಳುತ್ತಾ ಅವಳನ್ನು ತಿರಸ್ಕಾರದಿಂದ ನೋಡುವ ಸಾಮಾಜಿಕ ಮೌಲ್ಯಗಳನ್ನು ಬಿತ್ತಲಾಗಿದೆ.

ಜಗತ್ತಿನಾದ್ಯಂತ ಎಲ್ಲ ಕಾಲಗಳಲ್ಲಿ ಎಲ್ಲ ದೇಶಗಳಲ್ಲಿ ಮತ್ತು ಸಮಾಜಗಳಲ್ಲಿ ತನ್ನದೇ ಆದ 'ನಂಬಿಕೆ'ಗಳು ಮತ್ತು 'ಮೂಢನಂಬಿಕೆಗಳು' ಆಚರಣೆಯಲ್ಲಿವೆ. ಸಮಾಜದ ಬಹುಪಾಲು ಜನರು ನಿತ್ಯ ಜೀವನದ ಹೆಜ್ಜೆ ಹೆಜ್ಜೆಗೂ ಇವುಗಳನ್ನು ಆಚರಿಸಿಕೊಂಡು ಬರುತ್ತಿದ್ದಾರೆ. 'ನಂಬಿಕೆ' ಮತ್ತು 'ಮೂಢನಂಬಿಕೆ'ಗಳ ನಡುವಿನ ಗೆರೆ ಅತ್ಯಂತ ಸೂಕ್ಷ್ಮ ಮತ್ತು ಅಸ್ಪಷ್ಟ. ಅರ್ಥ ಮಾಡಿಕೊಳ್ಳಬಹುದಾದ ನಂಬಿಕೆಗಳಂತೆಯೇ ಅರ್ಥ ಮಾಡಿಕೊಳ್ಳಲಾಗದ ನಂಬಿಕೆಗಳೂ ಇವೆ. ಅದೇ ರೀತಿ ಅಮಾನವೀಯ, ಅಪಾಯಕಾರಿ, ವಿನಾಶಕಾರಿ, ಹಿಂಸಾತ್ಮಕ ಹಾಗೂ ಅನಾರೋಗ್ಯಕರ ನಂಬಿಕೆಗಳೂ ಇವೆ. ತಲತಲಾಂತರಗಳಿಂದ ಪ್ರಶ್ನಿಸದೆ ಬಂದಿರುವ ನಂಬಿಕೆಗಳು ಮತ್ತು ಸತ್ಯಾಸತ್ಯತೆಯನ್ನು ಪರೀಕ್ಷಿಸಿ ನೋಡಲು ಅಸಮರ್ಥರಾದ ಜನರ ನಂಬಿಕೆಗಳೇ ಮೂಢನಂಬಿಕೆಗಳು. ಈ ಮೂಢನಂಬಿಕೆಗಳು ಜನರ ಗಮನವನ್ನು ಸಮಸ್ಯೆಗಳ ಮೂಲದಿಂದ ದೂರ ಸೆಳೆದು ಅವರಲ್ಲಿ ಹತಾಶೆಯನ್ನು ಮೂಡಿಸುತ್ತವೆ. ಅಜ್ಞಾನ ತುಂಬಿದ ಸಾಮಾನ್ಯರನ್ನು ಇನ್ನಷ್ಟು ನಿಸ್ಸತ್ವಗೊಳಿಸಿ ಜೀವನದ ಸಾರವನ್ನು ಹೀರಿ ಬಿಡುತ್ತವೆ. ಪರಿಣಾಮವಾಗಿ ಜನರು ಪರಿಸ್ಥಿತಿಯನ್ನು ಮೀರಲಾಗದೆ ಅದರ ದಾಸರಾಗುತ್ತಾರೆ. ವಸ್ತುನಿಷ್ಠ ಸಾಮಾಜಿಕ ಬದಲಾವಣೆಗೆ ಬದಲಾಗಿ ಜಡ್ಡುತನವೇ ಸಾಮಾಜಿಕ ವಾಸ್ತವವಾಗುತ್ತದೆ. ಇಂಥ ಮೌಢ್ಯಗಳಿಂದಲೇ ಶೋಷಣೆ, ಗುಲಾಮಗಿರಿ, ಅಸ್ಪೃಶ್ಯತೆ, ಮೇಲು-ಕೀಳೆಂಬ ಆಲೋಚನೆಗಳು ಮುಂದುವರಿಯುತ್ತವೆ. ಭಾರತದಲ್ಲಿ ಎಣಿಸಲಾರದಷ್ಟು ಮೂಢನಂಬಿಕೆಗಳಿವೆ. ದಿನದಿಂದ ದಿನಕ್ಕೆ ಹೊಸ ಹೊಸ ಮೂಢನಂಬಿಕೆಗಳು ಸೇರ್ಪಡೆಯಾಗುತ್ತಿವೆ.

ಗ್ರಾಮೀಣ ಜನರು ತಮ್ಮ ಕಷ್ಟಗಳ ನಿವಾರಣೆಗೆ ಮತ್ತು ತೊಂದರೆಗಳ ಪರಿಹಾರಕ್ಕೆ ಕಾಲಕಾಲಕ್ಕೆ ಗ್ರಾಮದೇವತೆಗಳನ್ನು ಸೃಷ್ಟಿಸಿಕೊಂಡಿದ್ದಾರೆ. ಎಲ್ಲಮ್ಮ, ಚೌಡಮ್ಮ, ನಾಗಮ್ಮ, ಪುಂಗೆಮ್ಮ, ಪ್ಲೇಗಮ್ಮ, ಸಿಡುಬಮ್ಮ, ಮಾರಮ್ಮ, ದಂಡುಮಾರಮ್ಮ, ಮೋರಿ ಮಾರಮ್ಮ ಇತ್ಯಾದಿ, ಇತ್ಯಾದಿ... ಕರ್ನಾಟಕದ ಒಂದು ಹಳ್ಳಿಯಲ್ಲಿ 'ಏಡ್ಸಮ್ಮ'ನನ್ನು ಪ್ರತಿಷ್ಠಾಪಿಸಿ ದಿನನಿತ್ಯ ಪೂಜಿಸುತ್ತಿದ್ದಾರಂತೆ. ತಮಗೆ ಬರುವ ಸಮಸ್ಯೆಯನ್ನೇ ದೇವತೆಯಾಗಿ ಮಾರ್ಪಡಿಸಿ, ಸಮಸ್ಯೆಯನ್ನು ಪರಿಹರಿಸುವಂತೆ ಕೋರುವ ಈ ಪ್ರಯತ್ನಗಳ ಜೊತೆಗೆ, ತಮಗೆ ಉಪಕಾರ ಮಾಡಿದ ಜನರನ್ನು ದೈವಗಳೆಂದು ಪೂಜಿಸುವ ಪರಿಪಾಠವೂ ಚಾಲ್ತಿಯಲ್ಲಿದೆ.

ಭಾರತೀಯರ ಸಾಂಸ್ಕೃತಿಕ ಮತ್ತು ಧಾರ್ಮಿಕ ಆಚರಣೆಗಳು ವೈವಿಧ್ಯಮಯ. ಮುಳ್ಳಿನ ಗದ್ದಿಗೆಯ ಮೇಲೆ ನಡೆಯುವುದು, ಉರುಳುಸೇವೆ, ಬೇವಿನ ಉಡುಗೆಯ ಸೇವೆ, ಬೆತ್ತಲೆ ಸೇವೆ, ಕೆಂಡದ ಮೇಲೆ ನಡೆಯುವುದು, ಚಾಕು ಚೂರಿಗಳನ್ನು ನಾಲಿಗೆಗೆ–ಕೆನ್ನೆಗೆ ಚುಚ್ಚಿಕೊಳ್ಳುವುದು, ಹೆಣ್ಣು ಮಗುವನ್ನು ಬಲಿ ಕೊಡುವುದು ಹೀಗೆ ಲೆಕ್ಕವಿಲ್ಲದಷ್ಟು ಹರಕೆಗಳು, ಮಾಟಗಾತಿಯರು, ಬಾನಾಮತಿ, ಭೂತ, ದೆವ್ವ ಇತ್ಯಾದಿಯಾಗಿ ಅನೇಕ ನಂಬಿಕೆಗಳು ಮತ್ತು ಆಚರಣೆಗಳು ಇನ್ನೂ ಜಾರಿಯಲ್ಲಿವೆ.

20ನೇ ಶತಮಾನದ ಮಧ್ಯಭಾಗದವರೆಗೆ ಭಾರತದ ಬಹುಪಾಲು ಜನರು ಅವಿದ್ಯಾವಂತರಾಗಿ, ಅಜ್ಞಾನಿಗಳಾಗಿ ಮತ್ತು ಮೂಢನಂಬಿಕೆಗಳಿಂದ ಆವೃತರಾಗಿ ಬದುಕಿದರು. ಸ್ವಾತಂತ್ರ್ಯ ಬಂದ ನಂತರ ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದ್ದರೂ, ಇವುಗಳನ್ನು ಸಂಪೂರ್ಣವಾಗಿ ಅಳಿಸಿ ಹಾಕಲು ಸಾಧ್ಯವಾಗಿಲ್ಲ.

# ಭಾಗ 4

## ಸ್ವಾತಂತ್ರ್ಯ ಹೋರಾಟ

*"ಭಾರತದ ಸ್ವಾತಂತ್ರ್ಯ ಹೋರಾಟ ಒಂದು ದೀರ್ಘಕಾಲದ ಹೋರಾಟ. ಶತಮಾನಕ್ಕಿಂತಲೂ ಹೆಚ್ಚು ಕಾಲಾವಧಿಯ ಹೋರಾಟ. ತಲೆಮಾರುಗಳ ಹೋರಾಟ ಒಬ್ಬ ವ್ಯಕ್ತಿಯಿಂದ ನಡೆದ ಹೋರಾಟವಲ್ಲ ಅಥವಾ ಒಂದು ಸಮಸ್ಯೆಗಾಗಿ ನಡೆದ ಹೋರಾಟವಲ್ಲ".*

19ನೇ ಶತಮಾನದ ಮಧ್ಯಭಾಗದಿಂದ 20ನೇ ಶತಮಾನದ ಮಧ್ಯಭಾಗದವರೆಗೆ ಭಾರತ ಪರಕೀಯರ ಆಳ್ವಿಕೆಗೆ ಒಳಪಟ್ಟಿತ್ತು. ಭಾರತದ ಸ್ವಾತಂತ್ರ್ಯ ಹೋರಾಟ ಯಾವಾಗ ಅರಂಭವಾಯಿತು, ಎಲ್ಲಿ ಆರಂಭವಾಯಿತು ಮತ್ತು ಹೇಗೆ ಆರಂಭವಾಯಿತು ಎಂದು ಖಚಿತವಾಗಿ ಹೇಳುವುದು ಸಾಧ್ಯವಾಗದು. **ಪರಕೀಯರ ಆಕ್ರಮಣವನ್ನು ವಿರೋಧಿಸುತ್ತಾ, ಹೋರಾಡಿದ ಎಲ್ಲಾ ಘಟನೆಗಳನ್ನು ಸ್ವಾತಂತ್ರ್ಯ ಹೋರಾಟದ ಭಾಗವೆಂದೆ ಪರಿಗಣಿಸಬೇಕಾಗುತ್ತದೆ.**

ಭಾರತದ ಸ್ವಾತಂತ್ರ್ಯ ಹೋರಾಟ ಒಂದು ದೀರ್ಘಕಾಲದ ಹೋರಾಟ. ಶತಮಾನಕ್ಕಿಂತಲೂ ಹೆಚ್ಚು ಕಾಲಾವಧಿಯ ಹೋರಾಟ. ತಲೆಮಾರುಗಳ ಹೋರಾಟ. ಎಲ್ಲಾ ಧರ್ಮ, ಜಾತಿ, ಭಾಷೆ ಹಾಗೂ ವರ್ಗದ ಜನರ ಹೋರಾಟ. ಅಲ್ಪಸಂಖ್ಯಾತರು, ಗಿರಿಜನರು, ದಲಿತರು ಮತ್ತು ದಮನಿತರ ಹೋರಾಟ. ವಿದ್ಯಾರ್ಥಿ–ಯುವಜನರು, ಮಹಿಳೆಯರು, ಕಾರ್ಮಿಕರು, ರೈತರು, ಎದೆಸೆಟೆಸಿ ನಡೆಸಿದ ಹೋರಾಟವದು. ಅನೇಕ ಕಷ್ಟ ಕಾರ್ಪಣ್ಯಗಳ, ನೋವು, ತ್ಯಾಗ, ಬಲಿದಾನಗಳಿಂದ ಕೂಡಿದ ಹೋರಾಟ. ಇಡೀ ಸಾಮ್ರಾಜ್ಯಶಾಹಿ ಜಗತ್ತನ್ನೇ ನಡುಗಿಸಿದಂತಹ ಹೋರಾಟ.

ನಮ್ಮ ಸ್ವಾತಂತ್ರ್ಯ ಚಳುವಳಿ ಒಬ್ಬ ವ್ಯಕ್ತಿಯಿಂದ ನಡೆದ ಹೋರಾಟವಲ್ಲ ಅಥವಾ ಒಂದು ಸಮಸ್ಯೆಗಾಗಿ ನಡೆದ ಹೋರಾಟವಲ್ಲ. ನಮ್ಮ ಸ್ವಾತಂತ್ರ್ಯ ಹೋರಾಟ ಕೇವಲ ರಾಜಕೀಯ ಹೋರಾಟವಾಗಿರದೆ ಅದೊಂದು ಆರ್ಥಿಕ ಮತ್ತು

ಸಾಮಾಜಿಕ ಹೋರಾಟವೂ ಆಗಿತ್ತು. ಬ್ರಿಟಿಷ್ ವಸಾಹತುಶಾಹಿಯ ವಿರುದ್ಧದ ಹೋರಾಟವು ಒಂದು ಕಡೆ ರಾಜಕೀಯ ಅಧಿಕಾರ ನಮಗೆ ಬರಬೇಕೆಂದು ನಡೆದರೆ, ಮತ್ತೊಂದು ಕಡೆ ಪಾಳೆಗಾರಿ ಪದ್ಧತಿ ಹೋಗಬೇಕು, ಉಳುವವನಿಗೆ ಭೂಮಿ ದೊರೆಯಬೇಕು, ದುಡಿಯುವ ಕೈಗಳಿಗೆ ಕೆಲಸ ಬೇಕು, ದುಡಿಮೆಗೆ ಸಮಾನವಾದಂತ ಕೂಲಿ ಬೇಕೆಂಬ ಆರ್ಥಿಕ ಹೋರಾಟವು ನಡೆಯಿತು. ಜೊತೆ ಜೊತೆಯಲ್ಲಿ ಸಾಮಾಜಿಕ ಅನಿಷ್ಟಗಳಾದ ಸತಿ ಸಹಗಮನ, ಅಸ್ಪೃಶ್ಯತೆ, ವರದಕ್ಷಿಣೆ, ಬಾಲ್ಯ ವಿವಾಹ ಇತ್ಯಾದಿಗಳ ವಿರುದ್ಧವೂ ಹೋರಾಟಗಳು ನಡೆದವು.

ಬ್ರಿಟಿಷರು ಭಾರತದಲ್ಲಿ ಸಾಮೂಹಿಕ ಶಿಕ್ಷಣ ಪ್ರಾರಂಭಿಸಿದರು. ಇದರ ಪರಿಣಾಮವಾಗಿ ಓದುವ ದೊಡ್ಡ ಜನ ಸಮುದಾಯ ಹುಟ್ಟಿಕೊಂಡಿತು. ಓದುವವರಿಗೆ ಬೇಕಾದ ಪತ್ರಿಕೆಗಳು ಹುಟ್ಟಿಕೊಂಡವು. ಪತ್ರಿಕೋದ್ಯಮ ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ದೀವಟಿಗೆಯಂತೆ ಕೆಲಸ ಮಾಡಿದೆ. ಪತ್ರಿಕೆಗಳು ಸ್ವಾತಂತ್ರ್ಯ ಹೋರಾಟವನ್ನು ತೀವ್ರಗೊಳಿಸುವುದನ್ನು ಸಹಿಸಲಾಗದ ಬ್ರಿಟಿಷ್ ಸರ್ಕಾರ ಪತ್ರಿಕೆಗಳ ಮೇಲೆ ದಾಳಿ ನಡೆಸಿತು. ಭಾರತದ ಸ್ವಾತಂತ್ರ್ಯ ಹೋರಾಟ ಮತ್ತು ಪತ್ರಿಕಾ ಸ್ವಾತಂತ್ರ್ಯದ ಹೋರಾಟ ಇವೆರಡೂ ಜೊತೆ ಜೊತೆಯಲ್ಲಿ ನಡೆದು ಬಂದಿದ್ದು ಗಮನಾರ್ಹ.

ರಾಜಮಹಾರಾಜರುಗಳು ಅರೆ ಮನಸ್ಸಿನಿಂದ ಯುದ್ಧ, ಅರೆ ಮನಸ್ಸಿನಿಂದ ರಾಜ್ಯಾಡಳಿತ ಮಾಡಿಕೊಂಡು ಬ್ರಿಟಿಷ್ ಆಳ್ವಿಕೆಯೊಂದಿಕೆ ಹೊಂದಾಣಿಕೆ ಮಾಡಿಕೊಳ್ಳಲು ಪ್ರಯತ್ನ ಮಾಡುತ್ತಿರುವಾಗಲೇ ಆದಿವಾಸಿಗಳು ತಮ್ಮ ಶಕ್ತಿಯನ್ನೆಲ್ಲಾ ಕ್ರೂಢೀಕರಿಸಿ ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದರು. ಬಿಹಾರದ ಛೋಟನಾಗಪುರ ದಂಗೆ, 1831ರ ಬಿಹಾರಿನ ಕೋಲರ ದಂಗೆ, 1855ರ ಸಂತಾಲರ ದಂಗೆ, 1899ರ ಮುಂಡರ ದಂಗೆ, ಈಶಾನ್ಯ ಭಾರತದ ಜಯಂತಿಯ ಜನರು ಮತ್ತು ನಾಗಾಗಳ ದಂಗೆಗಳು, ಆಂಧ್ರದ ರಂಪ ಜೋಡಾವರಂನಲ್ಲಿ 1922–24ರಲ್ಲಿ ಅಲ್ಲೂರಿ ಸೀತಾರಾಮರಾಜು ನಡೆಸಿದ ಹೋರಾಟ, ಮುಂಬಯಿ ಪ್ರದೇಶದ ವಾರ್ಲಿ ಜನರ ಹೋರಾಟ ಇತ್ಯಾದಿಗಳು ಆದಿವಾಸಿ ಬುಡಕಟ್ಟುಗಳು ಬ್ರಿಟಿಷರ ವಿರುದ್ಧ ನಡೆಸಿದ ಅಪ್ರತಿಮ ಹೋರಾಟಗಳಾಗಿವೆ.

ಬ್ರಿಟಿಷರ ಆಳ್ವಿಕೆಯ ವಿರುದ್ಧವಾಗಿ ರೈತ ಹೋರಾಟಗಳು ಮಹತ್ತರ ಪಾತ್ರ ವಹಿಸಿವೆ. 1859ರ ಬಂಗಾಳದ ನೀಲಿ ಬೆಳಗಾರರ ಹೋರಾಟ, ತೇಭಾಗ ಹೋರಾಟ, ಚೌರಿ ಚೌರದ ಹೋರಾಟ, ಗುಜರಾತಿನ ಬರ್ಡೋಲಿ ರೈತರ ಹೋರಾಟ, ತೆಲಂಗಾಣ ಹೋರಾಟ, ಕೇರಳದ ಕಯ್ಯೂರು ಇತ್ಯಾದಿ ರೈತ ಹೋರಾಟಗಳು ಚಾರಿತ್ರಿಕವಾದವು.

19ನೇ ಶತಮಾನದ ಮಧ್ಯಭಾಗದಲ್ಲಿ ಬ್ರಿಟಿಷರು ಚಹ, ನೀಲಿ, ಅಫೀಮು, ಹತ್ತಿ ಮುಂತಾದ ಬೆಳೆಗಳ ತೋಟಗಳನ್ನು ಅಭಿವೃದ್ಧಿ ಪಡಿಸಿದರು. ಕಚ್ಚಾ ಮಾಲು ಸಾಗಿಸಲು ರೈಲು ಮತ್ತು ಬಂದರುಗಳನ್ನು ಸ್ಥಾಪನೆ ಮಾಡಿದರು. ಕಲ್ಕತ್ತೆಯ ಸುತ್ತ ಸೆಣಬು ಕಾರ್ಖಾನೆಗಳು ಹುಟ್ಟಿಕೊಂಡವು. ಮುಂಬಯಿ ಮತ್ತು ಅಹಮದಾಬಾದ್ ಪ್ರದೇಶಗಳಲ್ಲಿ ಜವಳಿ ಉದ್ಯಮ ಬೆಳೆಯಿತು. ಇದರ ಪರಿಣಾಮವಾಗಿ ಭಾರತದಲ್ಲಿ ಆಧುನಿಕ ಕಾರ್ಮಿಕ ವರ್ಗ ರೂಪಗೊಂಡಿತು. ಕಡಿಮೆ ಕೂಲಿ, ಮಿತಿಯಿಲ್ಲದ ದುಡಿಮೆ, ಹೀನವಾದ ವಸತಿ ಸೌಕರ್ಯ, ಮಾಲೀಕರ ದಬ್ಬಾಳಿಕೆ ಕಾರ್ಮಿಕರನ್ನು ಹೈರಾಣುಗೊಳಿಸಿದವು. ಇವುಗಳ ವಿರುದ್ಧ

ಕಾರ್ಮಿಕರು ಹೋರಾಟ ಮಾಡಲೇಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಯಿತು. ಆರಂಭದ ಹಂತದಲ್ಲಿ ಕಾರ್ಮಿಕರು ತಮಗೆ ತಿಳಿದ ರೀತಿಯಲ್ಲಿ ಹೋರಾಟ ಪ್ರಾರಂಭಿಸಿದರು. ಮುಂದುವರೆದು ಕಾರ್ಮಿಕ ಸಂಘಗಳು ಹುಟ್ಟಿಕೊಂಡವು. ಕ್ರಮೇಣ ಸ್ವಾತಂತ್ರ್ಯ ಹೋರಾಟ ಮತ್ತು ಕಾರ್ಮಿಕರ ಹೋರಾಟ ಪರಸ್ಪರ ಹತ್ತಿರಕ್ಕೆ ಬಂದವು ಮತ್ತು ಕಾರ್ಮಿಕ ವರ್ಗವು ಸ್ವಾತಂತ್ರ್ಯ ಹೋರಾಟದಲ್ಲಿ ಗಣನೀಯ ಪಾತ್ರ ವಹಿಸಿತು.

ಮಹಾತ್ಮ ಗಾಂಧಿ ದಕ್ಷಿಣ ಆಫ್ರಿಕದ ಹೋರಾಟಗಳಲ್ಲಿ ಗಳಿಸಿದ ಅಮೂಲ್ಯ ಅನುಭವದೊಂದಿಗೆ ಭಾರತಕ್ಕೆ ಬಂದರು. ಚಂಪಾರಣ್ಯದ ನೀಲಿಗೇಣಿ ರೈತರ ಹೋರಾಟ, ಖೇಡಾ ಜಿಲ್ಲೆಯ ರೈತರ ಕರ ನಿರಾಕರಣ ಚಳವಳಿ ಮತ್ತು ಅಹಮದಾಬಾದಿನ ಕಾರ್ಮಿಕರ ಪರ ಉಪವಾಸ ಸತ್ಯಾಗ್ರಹಗಳಲ್ಲಿ ಗಾಂಧೀಜಿ ಮುಂದಾಳತ್ವ ವಹಿಸಿದರು. ಈ ಹೋರಾಟಗಳು ರಾಷ್ಟ್ರಮಟ್ಟದಲ್ಲಿ ಪರಿಣಾಮಬಿದ್ದು ಗಾಂಧೀಜಿಯವರನ್ನು ರಾಷ್ಟ್ರನಾಯಕನ ಸ್ಥಾನಕ್ಕೆ ಏರಿಸಿತು. ಮುಂದೆ ದೇಶದಲ್ಲಿ ಜನಾಂದೋಲನಗಳು ಪ್ರಾರಂಭವಾದವು. ಅಸಹಕಾರ ಚಳುವಳಿ, ಕಾಯಿದೆ ಭಂಗ ಚಳುವಳಿ, ಉಪ್ಪಿನ ಸತ್ಯಾಗ್ರಹ, ವಿದೇಶಿ ವಸ್ತುಗಳ ಬಹಿಷ್ಕಾರ, ಕ್ವಿಟ್ ಇಂಡಿಯಾ ಚಳುವಳಿ ಇತ್ಯಾದಿಯಾಗಿ ಅನೇಕ ಹೋರಾಟಗಳು ಬ್ರಿಟಿಷರು ಭಾರತ ಬಿಟ್ಟು ಹೋಗುವಂತಹ ಪರಿಸ್ಥಿತಿಯನ್ನು ನಿರ್ಮಾಣಮಾಡಿದವು. ಕೊನೆಗೆ 1947ರ ಆಗಸ್ಟ್ 15ರಂದು ಭಾರತ ಸ್ವತಂತ್ರ ದೇಶವಾಯಿತು.

# ಭಾಗ 5

# ಭಾರತದ ಸಂವಿಧಾನ ರಚನೆ

*"ಸಂವಿಧಾನದನ ಮೊದಲ ಕರಡನ್ನು 1948ರ ಫೆಬ್ರವರಿ 21ರಂದು ಭಾರತದ ಜನತೆಯ ಮುಂದಿಟ್ಟು ಚರ್ಚೆಗೆ ಅವಕಾಶವನ್ನು ಕಲ್ಪಿಸಲಾಯಿತು. ಜನತೆ ಈ ಕರಡು ಸಂವಿಧಾನವನ್ನು ಚರ್ಚಿಸಿ 7,635 ತಿದ್ದುಪಡಿಗಳನ್ನು ಸೂಚಿಸಿದರು".*

## 1. ಸಂವಿಧಾನ ಸಭೆ:

ಭಾರತದ ಸಂವಿಧಾನ ರಚನೆಯ ಇತಿಹಾಸ 20ನೇ ಶತಮಾನದ ಪ್ರಾರಂಭದಲ್ಲಿ ಶುರುವಾಗುತ್ತದೆ. ಭಾರತದ ಸಂವಿಧಾನಕ್ಕೆ ಅಡಿಪಾಯ ಹಾಕಿದ ಮೊತ್ತ ಮೊದಲ ದಾಖಲೆಗಳೆಂದರೆ ಬ್ರಿಟಿಷ್ ಕೌನ್ಸಿಲ್ ಕಾನೂನುಗಳು. ಇವು ಬ್ರಿಟಿಷ್ ಸಂಸತ್ತು ತನ್ನ ಆಳ್ವಿಕೆಯಲ್ಲಿದ್ದ ಭಾರತಕ್ಕಾಗಿ ಹೊರಡಿಸಿದ ಕಾನೂನುಗಳಾಗಿದ್ದವು. ಪ್ರಾರಂಭದಲ್ಲಿ ಬ್ರಿಟಿಷರ ಈ ಕಾನೂನು ರಚನೆಯ ಹಕ್ಕನ್ನು ಒಪ್ಪಿಕೊಂಡಿದ್ದ ಭಾರತೀಯರು, ಇದರ ಜೊತೆಗೆ ಇನ್ನೂ ಉತ್ತಮವಾದ ಕಾನೂನುಗಳನ್ನು ರಚಿಸಬೇಕು ಎಂಬ ಬೇಡಿಕೆ ಮಂಡಿಸಿದ್ದರು. 1920ರಲ್ಲಿ ಮೋತಿಲಾಲ್ ನೆಹರು ಹಾಗೂ ಮತ್ತಿತರ ಮುಖಂಡರು 'ಭಾರತಕ್ಕೆ ಒಂದು ಪ್ರತ್ಯೇಕ ಸಂವಿಧಾನ ಬೇಕು ಮತ್ತು ಅದನ್ನು ಭಾರತೀಯರೇ ರಚಿಸಬೇಕು' ಎಂಬ ಬೇಡಿಕೆಯನ್ನು ಮುಂದಿಟ್ಟರು. **1928ರಲ್ಲಿ ಮೋತಿಲಾಲ್ ನೆಹರು ಅವರ ನೇತೃತ್ವದಲ್ಲಿ ಭಾರತಕ್ಕೆ ಒಂದು ಸಂವಿಧಾನವನ್ನು ಸಿದ್ಧಪಡಿಸಲಾಯಿತು**. ಇದು 'ನೆಹರು ವರದಿ' ಎಂದೇ ಜನಪ್ರಿಯವಾಯಿತು. ಈ ವರದಿಯು ಮೂಲಭೂತ ಹಕ್ಕುಗಳು, ಸಂಸದೀಯ ವ್ಯವಸ್ಥೆಯ, ಸಾರ್ವತ್ರಿಕ ವಯಸ್ಕ ಮತದಾನದ ಹಕ್ಕು, ಭಾಷಾವಾರು ಪ್ರಾಂತ್ಯಗಳ ರಚನೆ ಮತ್ತು ಸ್ವತಂತ್ರ ನ್ಯಾಯಾಂಗದ ರಚನೆಗಳನ್ನು ಶಿಫಾರಸ್ಸು ಮಾಡಿತು. ಆದರೆ ಬ್ರಿಟಿಷ್ ಸರ್ಕಾರ ಮೋತಿಲಾಲ್ ನೆಹರು ಅವರ ವರದಿಯನ್ನು ನಿರಾಕರಿಸಿತು. ಹಾಗಾಗಿ ಇದು ಕಾಗದದ ಮೇಲೆಯೇ ಉಳಿಯಿತು.

1933ರಲ್ಲಿ ಜವಾಹರಲಾಲ್ ನೆಹರು ಅವರು ಮತ್ತೆ ಭಾರತಕ್ಕೆ ಒಂದು ಸಂವಿಧಾನ ರಚನೆಯಾಗಬೇಕೆಂಬ ಬೇಡಿಕೆಯನ್ನು ಮುಂದಿಟ್ಟರು. ಮತ್ತು ಅದನ್ನು ರಚಿಸಲು ಭಾರತೀಯರೇ ಚುನಾಯಿಸಿದ ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಬೇಕೆಂದು ಒತ್ತಾಯಿಸಿದರು. ಇದಕ್ಕೆ ಪೂರಕವಾಗಿ 1934ರಲ್ಲಿ ಕಾಂಗ್ರೆಸ್ ಪಕ್ಷದ ಕಾರ್ಯಕಾರಿ ಸಮಿತಿಯು ಸಂವಿಧಾನ ಸಮಿತಿಯನ್ನು ಚುನಾಯಿಸುವಂತೆ ಒತ್ತಾಯಿಸಿ ಒಂದು ಗೊತ್ತುವಳಿಯನ್ನು ಅಂಗೀಕರಿಸಿತು. ಬ್ರಿಟಿಷ್ ಸರ್ಕಾರ ಈ ಬೇಡಿಕೆಯನ್ನು ತತ್ವಶಃ ಒಪ್ಪಿದರೂ, ಎರಡನೇ ಮಹಾಯುದ್ಧದ ನೆಪದಲ್ಲಿ ಅನುಷ್ಠಾನಗೊಳಿಸಲಿಲ್ಲ.

ಎರಡನೇ ಮಹಾಯುದ್ಧ ಮುಗಿದ ನಂತರ 1945ರಲ್ಲಿ ಇಂಗ್ಲೆಂಡಿನಲ್ಲಿ ಸಾರ್ವತ್ರಿಕ ಚುನಾವಣೆಗಳು ನಡೆದು ಲೇಬರ್ ಪಕ್ಷ ಅಧಿಕಾರಕ್ಕೆ ಬಂತು. ಕ್ಲೆಮೆಂಟ್ ಆಟ್ಲಿ ಎಂಬಾತ ಬ್ರಿಟಿಷ್ ಪ್ರಧಾನಮಂತ್ರಿಯಾದರು. ಅವರು 1946ರಲ್ಲಿ ಭಾರತಕ್ಕೆ ಸ್ವಾತಂತ್ರ್ಯ ಕೊಡುವ ಭರವಸೆಯನ್ನು ಹಾಗೂ ಅದಕ್ಕೆ ಪೂರಕವಾಗಿ ಸಂವಿಧಾನ ಸಭೆಯನ್ನು ರಚಿಸಿಕೊಳ್ಳಲು ಅನುಮತಿಯನ್ನು ನೀಡಿದರು. ಅದರಂತೆ 1946ರಲ್ಲಿ ಚುನಾವಣೆಯ ಮೂಲಕ 389 ಮುಖಂಡರನ್ನೊಳಗೊಂಡ ಒಂದು ಸಂವಿಧಾನ ಸಭೆಯನ್ನು ರಚಿಸಲಾಯಿತು. (ಮುಂದೆ ಈ ಸಭೆಯ ಸದಸ್ಯರ ಸಂಖ್ಯೆ 299ಕ್ಕೆ ಇಳಿಯಿತು.) ಇದರಲ್ಲಿ ಪ್ರಮುಖ ರಾಜಕೀಯ ಮುಖಂಡರು, ಕಾಂಗ್ರೆಸ್ ಪಕ್ಷದವರು, ಕಮ್ಯುನಿಷ್ಟರು, ಸಮಾಜವಾದಿಗಳು, ಕೈಗಾರಿಕೋದ್ಯಮಿಗಳು, ಕಾರ್ಮಿಕ ಸಂಘಗಳ ಪ್ರತಿನಿಧಿಗಳು, ವಿಭಿನ್ನ ಆರ್ಥಿಕ ಮತ್ತು ರಾಜಕೀಯ ಸಿದ್ಧಾಂತಗಳವರು, ಭಿನ್ನ ಪಂಥಗಳಿಗೆ ಸೇರಿದವರು, ಹಿಂದುಗಳು, ಮುಸಲ್ಮಾನರು, ಕ್ರಿಶ್ಚಿಯನ್ನರು, ಪಾರ್ಸಿಗಳು, ನಾಸ್ತಿಕರು ಮತ್ತು ವಿಭಿನ್ನ ಸಾಮಾಜಿಕ ವರ್ಗಗಳಿಗೆ ಸೇರಿದವರು, ಶ್ರೀಮಂತರು, ಮಧ್ಯಮ ವರ್ಗದವರು, ಹಿಂದುಳಿದ ವರ್ಗದವರು, ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳಿಗೆ ಸೇರಿದವರು ಎಲ್ಲರೂ ಈ ಸಮಿತಿಯಲ್ಲಿದ್ದರು. ಸಂವಿಧಾನ ಸಭೆಯ ಸದಸ್ಯರು ಡಾ. ಬಾಬು ರಾಜೇಂದ್ರ ಪ್ರಸಾದ್ ಅವರನ್ನು ಅಧ್ಯಕ್ಷರನ್ನಾಗಿ ಚುನಾಯಿಸಿದರು.



ಸಂವಿಧಾನ ಸಭೆಯ ಚಿತ್ರ, 1950ರಲ್ಲಿ

ಡಾ. ಬಿ. ಆರ್. ಅಂಬೇಡ್ಕರ್ ಅವರನ್ನು ಕರಡು ರಚನಾ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು.

### (i) ಸಂವಿಧಾನ ರಚನಾಕಾರರ ಮೇಲೆ ಪ್ರಭಾವ ಬೀರಿದ ಪ್ರಮುಖ ಅಂಶಗಳು

1. 1776ರ ಅಮೇರಿಕ ಕ್ರಾಂತಿಯ ಘೋಷಣೆ **'ಸೃಷ್ಟಿಯಲ್ಲಿ ಎಲ್ಲಾ ಮನುಷ್ಯರು ಸಮಾನರು'**, 1789ರ ಫ್ರೆಂಚ್ ಕ್ರಾಂತಿಯ ಘೋಷಣೆ **'ಸ್ವಾತಂತ್ರ್ಯ, ಸಮಾನತೆ ಮತ್ತು ಸಹೋದರತ್ವ'**, 1917ರ ರಷ್ಯಾ ಕ್ರಾಂತಿಯ ಘೋಷಣೆ **'ಸಾಮರ್ಥ್ಯಕ್ಕನುಸಾರವಾಗಿ ದುಡಿಯಬೇಕು, ಅಗತ್ಯಕ್ಕೆ ಅನುಸಾರವಾಗಿ ಪಡೆಯಬೇಕು'** ಮತ್ತು 1948ರ ವಿಶ್ವಸಂಸ್ಥೆಯ **'ಮಾನವ ಹಕ್ಕುಗಳ'** ಘೋಷಣೆಗಳು.

2. ನಮ್ಮ ಸಂವಿಧಾನ ರಚನೆ ಪ್ರಾರಂಭಿಸುವ ವೇಳೆಗಾಗಲೇ ಅಮೇರಿಕ, ಫ್ರಾನ್ಸ್, ಜರ್ಮನಿ, ಆಸ್ಟ್ರೇಲಿಯಾ, ಸೋವಿಯತ್ ರಷ್ಯಾ, ಕೆನಡಾ, ಐರ್ಲೆಂಡ್ ಮುಂತಾದ ದೇಶಗಳಲ್ಲಿ ರಚನೆಯಾಗಿ, ಅನುಷ್ಠಾನಗೊಂಡಿದ್ದ ಸಂವಿಧಾನಗಳಲ್ಲಿ ಅಡಕವಾಗಿದ್ದ ಉತ್ತಮ ಅಂಶಗಳು.

3. ನಮ್ಮ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಅನೇಕ ಪ್ರಶ್ನೆಗಳು ಎದುರಾಗಿದ್ದವು. ಈ ಪ್ರಶ್ನೆಗಳಿಗೆ ಈ ದೇಶದ ಜನ ಕಂಡುಕೊಂಡಂತಹ ಉತ್ತರಗಳು ನಮ್ಮ ರಾಷ್ಟ್ರೀಯ ಚಳುವಳಿಯ ಗುರಿಗಳಾದವು. ಈ ಗುರಿಗಳನ್ನು ಕಾರ್ಯರೂಪಕ್ಕೆ ತರುವುದು ನಮ್ಮ ಸಂವಿಧಾನ ರಚನಕಾರರ ಕರ್ತವ್ಯವಾಯಿತು. ಉದಾಹರಣೆಗೆ:

**ಅ. ಬ್ರಿಟಿಷರನ್ನು ಈ ದೇಶದಿಂದ ಹೊರದೂಡಿದ ನಂತರ ರಾಜಕೀಯ ಅಧಿಕಾರ ಯಾರ ಕೈಗೆ ಹೋಗಬೇಕು? ಮಹಾತ್ಮಗಾಂಧಿಯವರನ್ನು ಒಬ್ಬ ಸಾಮ್ರಾಟನನ್ನಾಗಿ, ಜವಾಹರಲಾಲ್ ನೆಹರೂರವರನ್ನು ಒಬ್ಬ ಚಕ್ರವರ್ತಿಯನ್ನಾಗಿ ಮಾಡೋಣವೇ?**

ಉತ್ತರ: ನಮಗೆ ಸಾಮ್ರಾಟರು, ಚಕ್ರವರ್ತಿಗಳು, ರಾಜ ಮಹಾರಾಜರುಗಳು ಬೇಡ. ಪಾಳೇಗಾರಿ ಪದ್ಧತಿ ರದ್ದಾಗಬೇಕು, ರಾಜಕೀಯ ಅಧಿಕಾರ ಪ್ರಜೆಗಳ ಕೈಗೆ ಬರಬೇಕು. ಭಾರತವನ್ನು ಒಂದು ಪ್ರಜಾಪ್ರಭುತ್ವ ರಾಷ್ಟ್ರವನ್ನಾಗಿ ಮಾಡುವುದು ರಾಷ್ಟ್ರೀಯ ಚಳುವಳಿಯ ಮುಖ್ಯ ಗುರಿಯಾಯಿತು.

**ಅ. ಬಹುಸಂಖ್ಯಾತ ಹಿಂದುಗಳಿರತಕ್ಕಂಥ ಭಾರತವನ್ನು ಹಿಂದು ರಾಷ್ಟ್ರವನ್ನಾಗಿ ಘೋಷಿಸೋಣವೇ?**

ಉತ್ತರ: ಎಲ್ಲಾ ಧರ್ಮದ, ಜಾತಿಯ, ಭಾಷೆಯ ಜನರು ಭುಜಕ್ಕೆ ಭುಜ ಕೊಟ್ಟು ಬ್ರಿಟಿಷರ ವಿರುದ್ಧ ಹೋರಾಟ ನಡೆಸಿದ ಇತಿಹಾಸ ಈ ದೇಶದ್ದು. ಅನೇಕ ಶತಮಾನಗಳ ಕಾಲ ಅನೇಕ ಧರ್ಮದ ಜನರು ಭಾರತ ದೇಶದಲ್ಲಿ ಒಟ್ಟಿಗೆ ಬಾಳಿದ ಮತ್ತು ಎಲ್ಲರೂ ಕೂಡಿ ದೇಶವನ್ನು ಕಟ್ಟಿದ ಇತಿಹಾಸ ಇದೆ. ಹಾಗಾಗಿ ನಮಗೆ ಹಿಂದು ರಾಷ್ಟ್ರ ಬೇಡ, ಕ್ರೈಸ್ತ ರಾಷ್ಟ್ರ ಬೇಡ, ಇಸ್ಲಾಂ ರಾಷ್ಟ್ರ ಬೇಡ, ಸಿಖ್ ರಾಷ್ಟ್ರ ಬೇಡ. ಬದಲಾಗಿ ನಮಗೆ ಜಾತ್ಯತೀತ ಹಾಗೂ ಧರ್ಮನಿರಪೇಕ್ಷ ರಾಷ್ಟ್ರ ಬೇಕು. ಅದರಂತೆ ಧರ್ಮನಿರಪೇಕ್ಷಿತ



ಪ್ರೇಮ್ ಬಿಹಾರಿ ನಾರಾಯಣ್ ರಾಯ್ಜಾದಾ



ನಂದಲಾಲ್ ಬೋಸ್



ಸಂವಿಧಾನ ಸಭೆಯ ಅಧ್ಯಕ್ಷರಾದ ಡಾ. ರಾಜೇಂದ್ರ ಪ್ರಸಾದ್ ಅವರು ಮೂಲ ಪ್ರತಿಯನ್ನು ಪರಿಶೀಲಿಸುತ್ತಿರುವುದು

ಭಾರತ ಸಂವಿಧಾನವನ್ನು ತಮ್ಮ ಸುಂದರವಾದ ಕೈಬರಹದಿಂದ ನಿರೂಪಿಸಿದವರು ಪ್ರೇಮ್ ಬಿಹಾರಿ ನಾರಾಯಣ್ ರಾಯ್ಜಾದಾ. 479 ಪುಟಗಳ ಹೊತ್ತಿಗೆಯನ್ನು ಬರೆಯಲು ಪ್ರೇಮ್ ಬಿಹಾರಿ ಅವರಿಗೆ ತಗುಲಿದ್ದು 6 ತಿಂಗಳ ಅವಧಿ ಹಾಗೂ 254 ಪೆನ್ ನಿಬ್‌ಗಳು. ದೆಹಲಿಯ ಸೆಂಟ್ ಸ್ಟೀಫನ್‌ಸನ್ ಕಾಲೇಜಿನ ಪದವೀಧರರಾದ ಪ್ರೇಮ್ ಬಿಹಾರಿಯವರಿಗೆ ಸಂವಿಧಾನವನ್ನು ಬರೆಯುವ ಜವಾಬ್ದಾರಿ ವಹಿಸಿದಾಗ ರೋಮಾಂಚಿತರಾಗಿ, ಈ ಕೆಲಸಕ್ಕೆ ಯಾವುದೇ ಹಣ ತೆಗೆದುಕೊಳ್ಳಲು ನಿರಾಕರಿಸಿದರು. ಗೌರವ ಧನ ಸ್ವೀಕರಿಸುವಂತೆ ಜವಾಹರ್ ಲಾಲ್ ನೆಹರೂ ಅವರು ಆಗ್ರಹಿಸಿದಾಗ ಅವರು ಹಣಕ್ಕೆ ಬದಲಾಗಿ ಸಂವಿಧಾನದ ಪ್ರತಿಪುಟದ ಅಂತ್ಯದಲ್ಲಿ ತಮ್ಮ ಹೆಸರನ್ನು ಹಾಗೂ ಕೊನೆಯ ಪುಟದಲ್ಲಿ ತಮ್ಮ ಹೆಸರಿನ ಜೊತೆಗೆ ತಮ್ಮ ತಾತನ ಹೆಸರು ಬರೆಯಲು ಅನುಮತಿ ಕೋರಿದರಂತೆ. ಹಾಗೂ ನೆಹರೂ ಸಮ್ಮತಿಸಿದರು ಎನ್ನುತ್ತವೆ ಇತಿಹಾಸದ ಪುಸ್ತಕಗಳು.

ಸಂವಿಧಾನಕ್ಕೆ ಸುಂದರ ಕಲೆಯ ಸ್ಪರ್ಶ ನೀಡಿದವರು ನಂದಲಾಲ್ ಬೋಸ್ ಅವರು. ರವೀಂದ್ರನಾಥ್ ಠಾಗೂರ್ ಅವರಿಂದ ಪ್ರೇರಣೆ ಪಡೆದಿದ್ದ ನಂದಲಾಲ್ ಅವರು ಶಾಂತಿನಿಕೇತನದ ಪ್ರಾಂಶುಪಾಲರಾಗಿದ್ದರು. ದೇಶದ ಮಹಾನ್ ಕಲಾವಿದರಲ್ಲಿ ಒಬ್ಬರಾದ ನಂದಲಾಲ್ ಅವರು ತಮ್ಮ ಶಿಷ್ಯರೊಡಗೂಡಿ ಸಂವಿಧಾನಕ್ಕೆ ಕಲೆಯ ಚಿತ್ತಾರ ಮಾಡಿರುವುದಲ್ಲದೆ ಭಾರತ ರತ್ನವೂ ಸೇರಿದಂತೆ ಹಲವು ರಾಷ್ಟ್ರೀಯ ಪ್ರಶಸ್ತಿಗಳ ಚಿಹ್ನೆಯನ್ನೂ ರೂಪಿಸಿದವರು.

ಮತ್ತು ಜಾತ್ಯತೀತ ರಾಷ್ಟ್ರದ ಧ್ಯೇಯ ನಮ್ಮ ಸ್ವಾತಂತ್ರ್ಯ ಚಳುವಳಿಯ ಮಹತ್ತರ ಗುರಿಯಾಯಿತು.

**ಆ. ತೋಳ್ಬಲ ಮತ್ತು ಬುದ್ಧಿಮತ್ತೆ ಅಥವಾ ಪ್ರತಿಭೆಯ ಆಧಾರದ ಮೇಲೆ ದೇಶವನ್ನು ನಡೆಸಬೇಕೆ?**

ಉತ್ತರ: ಈ ದೇಶದಲ್ಲಿ ಅನೇಕ ಜಾತಿಗಳಿವೆ. ಇಲ್ಲಿ ಮೇಲ್ಜಾತಿಗಳು ಮೇಲ್ವರ್ಗಗಳಾಗಿವೆ, ಕೆಳಜಾತಿಗಳು ಕೆಳವರ್ಗಗಳಾಗಿವೆ. ಜಾತಿ ಜಾತಿಗಳ ನಡುವೆ ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಅಸಮಾನತೆಗಳಿವೆ. ಈ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ತರಬೇಕೆಂಬುದು ನಮ್ಮ ಸ್ವಾತಂತ್ರ್ಯ ಹೋರಾಟದ ಬಯಕೆಯಾಗಿತ್ತು. ದೇಶವನ್ನು ಕಟ್ಟುವ ಪ್ರಕ್ರಿಯೆಯಲ್ಲಿ ಎಲ್ಲಾ ಜಾತಿಯ, ಸಾಮರ್ಥ್ಯದ ಜನ ಭಾಗಿಯಾಗಬೇಕು ಎನ್ನುವುದು ಆಶಯವಾಗಿತ್ತು. ಹಾಗಾಗಿ ಸಾಮಾಜಿಕ ನ್ಯಾಯವು ನಮ್ಮ ಸ್ವಾತಂತ್ರ್ಯ ಚಳುವಳಿಯ ಗುರಿಯಾಯಿತು.

**ಇ. ರಾಜಧಾನಿಯಾದ ದೆಹಲಿಯಲ್ಲಿ ಒಂದು ಬಲಾಢ್ಯವಾದ ಕೇಂದ್ರ ಸರ್ಕಾರ ರಚಿಸಿ, ಇಡೀ ದೇಶದ ಆಡಳಿತ ನಡೆಸೋಣವೇ?**

ಉತ್ತರ: ಈ ದೇಶದ ಒಂದೊಂದು ಪ್ರದೇಶದಲ್ಲಿ ಒಂದೊಂದು ರೀತಿಯ ಭಾಷೆ ಇದೆ. ಭಿನ್ನವಾದ ಸಂಸ್ಕೃತಿ, ಉಪಸಂಸ್ಕೃತಿ, ಆಚರಣೆಗಳು ಇವೆ. ಇಂತಹ ವೈವಿಧ್ಯಮಯವಾದ ದೇಶವನ್ನು ಒಂದು ಕೇಂದ್ರಿತ ಸರ್ಕಾರದಿಂದ ಆಳುವುದು ಸೂಕ್ತವಲ್ಲ ಹಾಗೂ ಸಾಧ್ಯವೂ ಇಲ್ಲ. ಹಾಗೆಯೇ, ಒಂದು ಭಾಷೆ ಮಾತನಾಡುವ ಪ್ರದೇಶವನ್ನು ಒಂದು ದೇಶವೆಂದು ಘೋಷಿಸಿದರೆ, ಸಮಗ್ರ ಭಾರತ ನಿರ್ಮಾಣ ಸಾಧ್ಯವಾಗುವುದಿಲ್ಲ. ಆದ್ದರಿಂದ ಇಲ್ಲಿ ನಮಗೆ ಬಲಿಷ್ಠವಾದ ಕೇಂದ್ರ ಸರ್ಕಾರ ಹಾಗೂ ಭಾಷಾವಾರು ರಾಜ್ಯ ಸರ್ಕಾರಗಳು ಬೇಕು ಎನ್ನಲಾಯಿತು. ಹೀಗೆ ಒಂದು ಒಕ್ಕೂಟ (ಫೆಡರಲ್) ವ್ಯವಸ್ಥೆ ನಮ್ಮ ರಾಷ್ಟ್ರೀಯ ಚಳುವಳಿಯ ಗುರಿಯಾಯಿತು.



ಸಂವಿಧಾನ ಸಭೆಯ ಸದಸ್ಯರು

ಸ್ವಾತಂತ್ರ್ಯ ಗಳಿಸಿದ ನಂತರ ಬಡತನ, ಸಾಮಾಜಿಕ ಪಿಡುಗುಗಳು, ಶೋಷಣೆ ಮತ್ತು ಅಸಮಾನತೆಯನ್ನು ಹೋಗಲಾಡಿಸುವುದಾಗಿ ನಮ್ಮ ಮುಖಂಡರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ವಚನ ನೀಡಿದ್ದರು. ಅಲ್ಲದೇ, ಉಳುವವನಿಗೇ ಭೂಮಿಯನ್ನು, ಎಲ್ಲರಿಗೂ ಶಿಕ್ಷಣವನ್ನು, ಉದ್ಯೋಗವನ್ನು, ಕಾನೂನಿನ ಮುಂದೆ ಸಮಾನತೆಯನ್ನು ದೊರಕಿಸಿ ಕೊಡುವುದಾಗಿ ಸಹ ಭರವಸೆ ನೀಡಿದ್ದರು. ಸ್ವಾತಂತ್ರ್ಯ ಬಂದಾಗ ನಮ್ಮದು ಬಡ ರಾಷ್ಟ್ರವಾಗಿತ್ತು. ದೇಶವು ಕೃಷಿ ಆರ್ಥಿಕತೆಯನ್ನು ಅವಲಂಬಿಸಿತ್ತು. ಬಡತನ, ಹಸಿವು, ಆಹಾರದ ಕೊರತೆ, ಕನಿಷ್ಠ ಜೀವನ ಮಟ್ಟ, ಅತ್ಯಲ್ಪ ಮೂಲ ಸೌಕರ್ಯಗಳು, ಅನಕ್ಷರತೆ, ಮೌಢ್ಯ, ನಿರುದ್ಯೋಗ, ಮುಂತಾದ ಸಮಸ್ಯೆಗಳು ಅಗಾಧವಾಗಿದ್ದವು. ಸ್ವಾತಂತ್ರ್ಯ ಹೋರಾಟದಲ್ಲಿ ನೀಡಿದ ವಚನವನ್ನು ಉಳಿಸಿಕೊಳ್ಳಬೇಕಾದದು ಮತ್ತು ದೇಶದ ಮುಂದಿದ್ದ ಸಮಸ್ಯೆಗಳನ್ನು ಎದುರಿಸಬೇಕಾದುದು ಇವೆರಡರ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಾದ ಸವಾಲು ನಮ್ಮ ಸಂವಿಧಾನ ರಚನಕಾರರ ಮೇಲೆ ಇತ್ತು. ಈ ಕಾರಣಕ್ಕಾಗಿಯೇ ಕಡ್ಡಾಯವಾಗಿ ಜಾರಿಗೊಳಿಸಬೇಕಾದ (enforceable) ಮತ್ತು ಸಾಂದರ್ಭಿಕವಾಗಿ ಜಾರಿಗೊಳಿಸಬಹುದಾದ (non-enforcable) ಹಕ್ಕುಗಳನ್ನು ನಮ್ಮ ಸಂವಿಧಾನದಲ್ಲಿ ನೀಡಲಾಯಿತು.

## (ii) ಕರಡು ಸಂವಿಧಾನ ಅಳವಡಿಕೆ:

1946 ಜುಲೈ ತಿಂಗಳಲ್ಲಿ ನಡೆದ ಚುನಾವಣೆಯಲ್ಲಿ ಸಂವಿಧಾನ ಸಭೆಗೆ 296 ಸದಸ್ಯರನ್ನು ಆಯ್ಕೆ ಮಾಡಲಾಯಿತು. ಕೆಲವು ಭಿನ್ನಾಭಿಪ್ರಾಯಗಳು ಮತ್ತು ರಾಜಕೀಯ ಬೆಳವಣಿಗೆಗಳ ಕಾರಣ ಮುಸ್ಲಿಮ್ ಲೀಗ್ ಸದಸ್ಯರು ಸಂವಿಧಾನ ಸಭೆಗಳಲ್ಲಿ ಭಾಗವಹಿಸಲು ನಿರಾಕರಿಸಿದರು. ಉಳಿದ 272 ಸದಸ್ಯರು 1946ರ ಡಿಸೆಂಬರ್ 6ರಂದು ಮೊದಲನೆ ಸಭೆ ಸೇರಿ ಸಂವಿಧಾನ ರಚನೆ ಕೆಲಸವನ್ನು ಪ್ರಾರಂಭಿಸಿದರು. ಒಂದು ವರ್ಷ ಎರಡು ತಿಂಗಳ ಅವಧಿಯಲ್ಲಿ ರೂಪುಗೊಂಡ ಸಂವಿಧಾನದನ ಮೊದಲ ಕರಡನ್ನು 1948ರ ಫೆಬ್ರವರಿ 21ರಂದು ಭಾರತದ ಜನತೆಯ ಮುಂದಿಟ್ಟು ಚರ್ಚೆಗೆ ಅವಕಾಶವನ್ನು ಕಲ್ಪಿಸಲಾಯಿತು. ಜನತೆ ಈ ಕರಡು ಸಂವಿಧಾನವನ್ನು ಚರ್ಚಿಸಿ 7,635 ತಿದ್ದುಪಡಿಗಳನ್ನು ಸೂಚಿಸಿದರು. ಈ ತಿದ್ದುಪಡಿಗಳನ್ನು ಪರಿಶೀಲಿಸಿ ಸೂಕ್ತವಾದವುಗಳನ್ನು ಒಪ್ಪಿ 1949 ನವೆಂಬರ್ 26ರಂದು ಅಂತಿಮ ಕರಡನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಯಿತು. ಈ ಐತಿಹಾಸಿಕ ದಿನದ ನೆನಪಿನಲ್ಲಿ ಪ್ರತಿವರ್ಷ ನವೆಂಬರ್ ತಿಂಗಳ 26ನೇ ದಿನವನ್ನು **'ಕಾನೂನು ದಿನ'** (Law Day) ಎಂದು ಆಚರಿಸಲಾಗುತ್ತಿದೆ. ಈಗ ಕಳೆದ ಎರಡು ವರ್ಷಗಳಿಂದ ಈ ದಿನವನ್ನು **'ಸಂವಿಧಾನ ದಿನ'**ವನ್ನಾಗಿ ಪುನರ್ ಘೋಷಿಸಲಾಗಿದೆ. ಹೀಗೆ 2 ವರ್ಷ 11 ತಿಂಗಳು 18 ದಿವಸಗಳ ಪರಿಶ್ರಮದ ಫಲವಾಗಿ ಜಗತ್ತಿನ ಅತಿದೊಡ್ಡ ಲಿಖಿತ ಸಂವಿಧಾನ ರಚನೆಯಾಯಿತು.

ಸಂವಿಧಾನ ರಚನಾ ಸಭೆಯಲ್ಲಿ 272 ಜನ ಸದಸ್ಯರು ಇದ್ದರೂ ಸಹ ಕೆಲವು ಸದಸ್ಯರು ಹೆಚ್ಚು ಕೊಡುಗೆಯನ್ನು ನೀಡಿದ್ದಾರೆ. ಅದರಲ್ಲೂ ಬಾಬಾ ಸಾಹೇಬ್ ಅಂಬೇಡ್ಕರ್ ಅವರು ದಿನಕ್ಕೆ 18 ಗಂಟೆಗಳಿಗೂ ಹೆಚ್ಚು ಕೆಲಸ ನಿರ್ವಹಿಸಬೇಕಾಯಿತು. ಭಾರತದ ಸಂವಿಧಾನ ರಚನೆಗೆ ಅಂಬೇಡ್ಕರ್ ಅವರ ಕೊಡುಗೆ ಬಗ್ಗೆ ಭಾರತದ ಮೊದಲ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದ್ ಅವರು ಪ್ರಶಂಸೆಯ ಮಾತುಗಳನ್ನಾಡಿದ್ದಾರೆ.

*"(ಸಂವಿಧಾನ ಸಭೆಯ) ಅಧ್ಯಕ್ಷನಾಗಿ ಪ್ರತಿದಿನದ ಚಟುವಟಿಕೆಗಳನ್ನು ಬಹಳ ಕೂಲಂಕುಷವಾಗಿ ಗಮನಿಸಿದ್ದೇನೆ. ಸಂವಿಧಾನ ಕರಡು ರಚನೆ ಸಮಿತಿ ಮತ್ತು ವಿಶೇಷವಾಗಿ ಅದರ ಅಧ್ಯಕ್ಷರಾದ ಡಾ॥ ಬಿ. ಆರ್. ಅಂಬೇಡ್ಕರ್ ಅವರು ಇಷ್ಟು ಶ್ರದ್ಧೆ ಮತ್ತು ಉತ್ಸುಕತೆಯಿಂದ ಈ ಕಾರ್ಯವನ್ನು ನಡೆಸಿದ್ದಕ್ಕೆ ಎಲ್ಲರಿಗಿಂತ ಹೆಚ್ಚು ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಡಾ॥ ಬಿ.ಆರ್. ಅಂಬೇಡ್ಕರ್‌ರವರನ್ನು ಕರಡು ರಚನೆ ಸಮಿತಿಗೆ ಸೇರಿಸಿದ್ದು ಮತ್ತು ಅದರ ಅಧ್ಯಕ್ಷರನ್ನಾಗಿ ಮಾಡಿದ್ದು ನಾವು ಮಾಡಿದ ಅತ್ಯುತ್ತಮ ಕೆಲಸ".*

ಸಂವಿಧಾನ ಸಭೆಯ ಉಪಾಧ್ಯಕ್ಷರೂ, ಕರಡು ರಚನಾ ಸಮಿತಿಯ ಸದಸ್ಯರೂ ಆಗಿದ್ದ ಶ್ರೀ ಟಿ. ಟಿ. ಕೃಷ್ಣಮಾಚಾರಿ ಹೇಳುತ್ತಾರೆ:

*"ಸಂವಿಧಾನ ಕರಡು ಸಮಿತಿಗೆ ನೇಮಿಸಿದ 7 ಜನ ಸದಸ್ಯರಲ್ಲಿ ಒಬ್ಬರು ಮಧ್ಯದಲ್ಲಿ ರಾಜೀನಾಮೆ ನೀಡಿದರು ಮತ್ತು ಆ ಜಾಗವನ್ನು ಮತ್ತೆ ತುಂಬಲಾಯಿತು ಎಂಬುದು ಈ ಸದನಕ್ಕೆ ತಿಳಿದಿರಬಹುದು. ಆದರೆ ಒಬ್ಬರು ಮರಣವನ್ನಪ್ಪಿದರು ಮತ್ತೆ ಆ ಜಾಗಕ್ಕೆ ಯಾರನ್ನೂ ತುಂಬಲಿಲ್ಲ. ಮತ್ತೊಬ್ಬರು ಅಮೇರಿಕಾದಲ್ಲೇ ಇದ್ದರು; ಅವರ ಜಾಗವನ್ನು ಬೇರೆಯವರಿಂದ ತುಂಬಲಿಲ್ಲ. ಮತ್ತೊಬ್ಬರು ರಾಜ್ಯದ ಆಡಳಿತ ಕಾರ್ಯಗಳಲ್ಲಿ ನಿರತರಾಗಿದ್ದರು. ಮತ್ತೇ ಒಬ್ಬರು ಅಥವಾ ಇಬ್ಬರು ದೆಹಲಿಯಿಂದ ದೂರವೇ ಉಳಿದರು; ಕಾರಣ ಅವರ ಆರೋಗ್ಯ ಅವರನ್ನು ಅನುಮತಿಸಲಿಲ್ಲ. ನಂತರ ಸಂವಿಧಾನದ ಕರಡನ್ನು ರಚಿಸುವ ಭಾರ ಡಾ॥ ಅಂಬೇಡ್ಕರ್‌ರವರ ಮೇಲೆ ಬಿತ್ತು ಮತ್ತು ಅವರು ಆ ಕಾರ್ಯವನ್ನು ಒಂಟಿಯಾಗಿ ನಿಭಾಯಿಸಿದ ರೀತಿ ಶ್ಲಾಘನೀಯ ಮತ್ತು ನಾವೆಲ್ಲ ಯಾವುದೇ ಅನುಮಾನಗಳಿಲ್ಲದೆ ಅವರಿಗೆ ಚಿರಋಣಿಯಾಗಿರಬೇಕು".*



ಕರಡು ಸಮಿತಿಯ ಸದಸ್ಯರು–ಕುಳಿತವರು– ಎನ್. ಮಾಧವರಾವ್, ಸಯ್ಯದ್ ಮೊಹಮದ್ ಸಾದುಲ್ಲಾ, ಡಾ.ಬಿ.ಆರ್.ಅಂಬೇಡ್ಕರ್, ಕೃಷ್ಣಸ್ವಾಮಿ ಅಯ್ಯರ್ ಮತ್ತು ಸಲಹೆಗಾರರಾದ ಬಿ. ಎನ್. ರಾವ್. ನಿಂತಿರುವ ಇತರರು– ಎಸ್. ಎಂ. ಮುಖರ್ಜಿ, ಜುಗಲ್ ಕಿಶೋರ್ ಖನ್ನಾ ಮತ್ತು ಕೇವಲ್ ಕೃಷ್ಣನ್.

1947ರ ಆಗಸ್ಟ್ 15ರಂದು ಬ್ರಿಟಿಷರಿಂದ ಸ್ವತಂತ್ರವಾದ ಭಾರತವು, 1950ರ ಜನವರಿ 26ರಂದು ಜಗತ್ತಿನ ಅತಿದೊಡ್ಡ ಲಿಖಿತ ಸಂವಿಧಾನವನ್ನು ಜಾರಿಗೆ ತರುವುದರ ಮೂಲಕ ಗಣರಾಜ್ಯವಾಯಿತು. ಹಿಂದೆ 1930ರ ಜನವರಿ 26ರಂದು 'ಪೂರ್ಣ ಸ್ವರಾಜ್ಯ' ಬೇಕೆಂಬ ಹೋರಾಟ ಪ್ರಾರಂಭವಾದ ಕಾರಣ ಅದರ ನೆನಪಿಗಾಗಿ 1950ರ ಜನವರಿ 26ರಂದು ನಮ್ಮ ಸಂವಿಧಾನವನ್ನು ಜಾರಿಗೆ ತರಲಾಯಿತು.





ಸಂವಿಧಾನದ ಮೂಲ ಪ್ರತಿಯ ಮೇಲೆ ಸದಸ್ಯರ ಸಹಿಗಳು

ಸಂವಿಧಾನದ ಕರಡು ಪ್ರತಿಯನ್ನು 26 ನವೆಂಬರ್ 1949ರಂದು ಅಂಗೀಕರಿಸಲಾಯಿತು. ಕೈ ಬರಹದಲ್ಲಿದ್ದ ಸಂವಿಧಾನದ ಇಂಗ್ಲೀಷ್ ಮತ್ತು ಹಿಂದಿಯ ತಲಾ ಒಂದು ಪ್ರತಿಗೆ ಸಂವಿಧಾನ ಸಭೆಯ 284 ಜನ ಸದಸ್ಯರು 24 ಜನವರಿ 1950ರಂದು ಸಹಿ ಮಾಡಿದರು. ಈ 284 ಜನರಲ್ಲಿ ಹದಿನೈದು ಮಹಿಳೆಯರೂ ಇದ್ದರು. ಈ ಮೂಲ ಪ್ರತಿಗಳನ್ನು ಸಂಸತ್ತಿನ ಗ್ರಂಥ ಭಂಡಾರದಲ್ಲಿ ರಕ್ಷಿಸಲಾಗಿದೆ.

ಸಂವಿಧಾನ ಜಾರಿಗೆ ಬಂದಿದ್ದು 26 ಜನವರಿ 1950ರಂದು. 1930ರ ಜನವರಿ 26ರಂದು ನಡೆದಿದ್ದ ಪೂರ್ಣ ಸ್ವರಾಜ್ ಆಂದೋಲನದ ಸ್ಮರಣೆಗಾಗಿ ಈ ದಿನವನ್ನು ಆಯ್ಕೆ ಮಾಡಿ, ಅದನ್ನು ಗಣರಾಜ್ಯೋತ್ಸವ ದಿನವೆಂದು ಘೋಷಿಸಲಾಯಿತು.





- 1949ರ ನವೆಂಬರ್ 25ರಂದು ಸಂವಿಧಾನ ಕರಡು ರಚನೆ ಸಮಿತಿಯ ಅಧ್ಯಕ್ಷರಾದ ಡಾ. ಬಿ. ಆರ್. ಅಂಬೇಡ್ಕರ್ ಅವರು ಸಂವಿಧಾನ ಸಭೆಯ ಅಧ್ಯಕ್ಷ ಡಾ. ರಾಜೇಂದ್ರ ಪ್ರಸಾದ್ ಅವರಿಗೆ ಸಂವಿಧಾನದ ಅಂತಿಮ ಕರಡು ಪ್ರತಿಯನ್ನು ಸಲ್ಲಿಸಿದರು.
- ಸಂವಿಧಾನ ಸಭೆಯ ಸದಸ್ಯರು ಸಂವಿಧಾನದ ಅಂಗೀಕೃತ ಪ್ರತಿಯ ಮೇಲೆ ಸಹಿ ಮಾಡುತ್ತಿರುವುದು.

**ಸಂವಿಧಾನ ಸಭೆಯ ಸದಸ್ಯರಾಗಿದ್ದು, ಸಂವಿಧಾನ ರಚನೆಗೆ ಕೊಡುಗೆ ನೀಡಿರುವ ಹದಿನೈದು ಮಹಿಳೆಯರು:**

ದಾಕ್ಷಾಯಿಣಿ ವೇಲಾಯುಧನ್ (ಮದ್ರಾಸ್ ಪ್ರಾಂತ್ಯ), ಬೇಗಂ ಐಜಾಜ್ ರಸೂಲ್ (ಪಂಜಾಬ್ ಪ್ರಾಂತ್ಯ), ದುರ್ಗಾಬಾಯಿ ದೇಶ್‌ಮುಖ್ (ಆಂಧ್ರ ಪ್ರಾಂತ್ಯ), ಹನ್ಸ ಮೆಹ್ತಾ (ಮುಂಬೈ ಪ್ರಾಂತ್ಯ), ಅಮೃತ್ ಕೌರ್ (ಉತ್ತರ ಪ್ರದೇಶ), ಅಮ್ಮು ಸ್ವಾಮಿನಾಥನ್ ಮತ್ತು ಆ್ಯನಿ ಮಸ್ಕರೇನಸ್ (ಕೇರಳ ಪ್ರಾಂತ್ಯ), ವಿಜಯಲಕ್ಷ್ಮಿ ಪಂಡಿತ್, ಸುಚೇತಾ ಕೃಪಲಾನಿ (ಪಂಜಾಬ್), ರೇಣುಕಾ ರಾಯ್, ಪೂರ್ಣಿಮಾ ಬ್ಯಾನರ್ಜಿ (ಉತ್ತರ ಪ್ರದೇಶ), ಕಮಲಾ ಚೌಧರಿ (ಉತ್ತರ ಪ್ರದೇಶ), ಲೀಲಾ ರಾಯ್, ಮಾಲತಿ ಚೌಧರಿ (ಬಿಹಾರ) ಮತ್ತು ಸರೋಜಿನಿ ನಾಯ್ಡು. ಸ್ವಾತಂತ್ರ್ಯ ಹೋರಾಟದಲ್ಲಿ ಮಹತ್ತರ ಪಾತ್ರ ವಹಿಸಿದ್ದ ಈ ಮಹಿಳೆಯರು ಸ್ವತಃ ಬಾಲ್ಯ ವಿವಾಹ, ವೈಧವ್ಯ, ಕೌಟುಂಬಿಕ ದೌರ್ಜನ್ಯ, ಹಿಂಸೆ, ಆಸ್ತಿ ಕಬಳಿಕೆ, ಜಾತಿ ದಬ್ಬಾಳಿಕೆಗಳಿಗೆ ಗುರಿಯಾಗಿದ್ದರು.




**ನಿಂತವರು–** ದುರ್ಗಾಬಾಯಿ ದೇಶ್‌ಮುಖ್, ರೇಣುಕಾ ರೇ, ಆ್ಯನಿ ಮಸ್ಕರೇನಸ್, ಬೇಗಂ ಐಜಾಜ್ ರಸೂಲ್, ಲೀಲಾ ರಾಯ್ ಮತ್ತು ದಾಕ್ಷಾಯಿಣಿ ವೇಲಾಯುಧನ್; **ಕುಳಿತವರು–** ಸುಚೇತಾ ಕೃಪಲಾನಿ, ಹನ್ಸ ಮೆಹ್ತಾ, ಅಮೃತ್ ಕೌರ್, ಅಮ್ಮು ಸ್ವಾಮಿನಾಥನ್

# ಭಾಗ ೬

## ನಮ್ಮ ಸಂವಿಧಾನದಲ್ಲಿ ಏನಿದೆ?




*"ಭಾರತ ಒಂದು ಸ್ವತಂತ್ರ ವಾದ ಸಾರ್ವಭೌಮ ರಾಷ್ಟ್ರ. ಅದೊಂದು ಸಮಾಜವಾದಿ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕವಾದ ಗಣರಾಜ್ಯ. ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ದೊರಕಿಸಿಕೊಡುವುದು ನಮ್ಮ ಗುರಿ."*

ಭಾರತದ ಸಂವಿಧಾನವು 22 ಭಾಗಗಳು, 448 ಅನುಚ್ಛೇದಗಳು ಮತ್ತು 12 ಅನುಸೂಚಿಗಳನ್ನು ಒಳಗೊಂಡಿದೆ. ಒಂದೊಂದು ಅಧ್ಯಾಯದಲ್ಲೂ ಹಲವು ಅನುಚ್ಛೇದಗಳಿವೆ. ಪ್ರತಿಯೊಂದು ಅಧ್ಯಾಯದಲ್ಲೂ ಪ್ರತ್ಯೇಕ ವಿಷಯದ ಬಗ್ಗೆ ಪ್ರಸ್ತಾಪಿಸಲಾಗಿದೆ.

| ಅಧ್ಯಾಯ | ಅನುಚ್ಛೇದಗಳು | ವಿಷಯ |
|---|---|---|
| 1 | 1 – 4 | ಒಕ್ಕೂಟ ಮತ್ತು ಅದರ ರಾಜ್ಯ ಕ್ಷೇತ್ರ |
| 2 | 5 – 11 | ನಾಗರಿಕತ್ವ |
| 3 | 12 – 35 | ಮೂಲಭೂತ ಹಕ್ಕುಗಳು |
| 4 | 36 – 51 | ರಾಜ್ಯನೀತಿಯ ನಿರ್ದೇಶಕ ತತ್ವಗಳು |
| 4ಎ | 51ಎ | ಮೂಲಭೂತ ಕರ್ತವ್ಯಗಳು |
| 5 | 52 – 151 | ಒಕ್ಕೂಟದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ವ್ಯವಸ್ಥೆ |
| 6 | 152 – 237 | ರಾಜ್ಯಗಳು, ವಿಧಾನಮಂಡಲ, ಉಚ್ಛನ್ಯಾಯಾಲಯಗಳು, ಸರ್ಕಾರ |
| 7 | 238 | ಮೊದಲನೆ ಅನುಸೂಚಿಯ 'ಬಿ' ಭಾಗದಲ್ಲಿರುವ ರಾಜ್ಯಗಳು |
| 8 | 239 – 242 | ಒಕ್ಕೂಟ ರಾಜ್ಯಕ್ಷೇತ್ರಗಳು |
| 9 | 243 – 243ಬಿ | ಪಂಚಾಯಿತಿಗಳು ಮತ್ತು ಪೌರಸಭೆಗಳು |
| 10 | 244 – 244ಎ | ಅನುಸೂಚಿತ ಮತ್ತು ಬುಡಕಟ್ಟಿನ ಪ್ರದೇಶಗಳು |
| 11 | 245 – 263 | ಒಕ್ಕೂಟ ಮತ್ತು ರಾಜ್ಯಗಳ ನಡುವಿನ ಸಂಬಂಧಗಳು |
| 12 | 264 – 300ಎ | ಹಣಕಾಸು, ಸ್ವತ್ತು, ಕರಾರುಗಳು ಮತ್ತು ದಾವೆಗಳು |
| 13 | 301 – 307 | ಭಾರತ ರಾಜ್ಯಕ್ಷೇತ್ರದೊಳಗೆ ವ್ಯಾಪಾರ, ವಾಣಿಜ್ಯ ಮತ್ತು ಪರಸ್ಪರ ವ್ಯವಹಾರ |
| 14 | 308 – 323 | ಒಕ್ಕೂಟದ ಮತ್ತು ರಾಜ್ಯಗಳ ಅಧೀನದಲ್ಲಿನ ಸೇವೆಗಳು |
| 14ಎ | 323ಎ – 323ಬಿ | ನ್ಯಾಯಾಧಿಕರಣಗಳು |
| 15 | 324 – 329ಎ | ಚುನಾವಣೆಗಳು |
| 16 | 330 – 342 | ಬುಡಕಟ್ಟು, ಆಂಗ್ಲೋ–ಇಂಡಿಯನ್ ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟ ವಿಶೇಷ ಉಪಬಂಧಗಳು |
| 17 | 343 – 351 | ರಾಜ್ಯಭಾಷೆ, ಪ್ರಾದೇಶಿಕ ಭಾಷೆ, ನ್ಯಾಯಾಲಯಗಳ ಭಾಷೆ |
| 18 | 352 – 360 | ತುರ್ತು ಪರಿಸ್ಥಿತಿ |
| 19 | 361 – 367 | ಸಂಕೀರ್ಣ / ಇತರೆ |
| 20 | 368 | ಸಂವಿಧಾನ ತಿದ್ದುಪಡಿ |
| 21 | 369 – 392 | ತಾತ್ಕಾಲಿಕ, ಮಧ್ಯಕಾಲೀನ ಮತ್ತು ವಿಶೇಷ ಉಪಬಂಧಗಳು |
| 22 | 393 – 395 | ಹೆಸರು, ಅನುಷ್ಠಾನ ಮತ್ತು ಹಿಂದಿನ ಶಾಸನಗಳ ರದ್ಧತಿ |

**ನಮ್ಮ ಸಂವಿಧಾನ 12 ಅನುಸೂಚಿಗಳನ್ನು ಹೊಂದಿದ್ದು, ಒಂದೊಂದು ಅನುಸೂಚಿಯು ಪ್ರತ್ಯೇಕ ವಿಷಯದ ಬಗ್ಗೆ ಪ್ರಾಸ್ತಾಪಿಸಿದೆ. ಅವುಗಳ ವಿವರಗಳು:**

| | |
|---|---|
| ಮೊದಲನೆ ಅನುಸೂಚಿ | ರಾಜ್ಯಗಳು ಮತ್ತು ಒಕ್ಕೂಟ ರಾಜ್ಯಕ್ಷೇತ್ರಗಳು |
| ಎರಡನೇ ಅನುಸೂಚಿ | ರಾಷ್ಟ್ರಾಧ್ಯಕ್ಷರು, ರಾಜ್ಯಪಾಲರು, ಲೋಕಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ವಿಧಾನಸಭೆಯ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು, ವಿಧಾನ ಪರಿಷತ್ತಿನ ಸಭಾಧ್ಯಕ್ಷರು ಮತ್ತು ಉಪಸಭಾಧ್ಯಕ್ಷರಿಗೆ ಸಂಬಂಧಿಸಿದ ಉಪಬಂಧಗಳು |
| ಮೂರನೇ ಅನುಸೂಚಿ | ಪ್ರಮಾಣವಚನಗಳ ಅಥವಾ ಪ್ರತಿಜ್ಞಾ ವಿಧಿಗಳ ನಮೂನೆಗಳು |
| ನಾಲ್ಕನೆ ಅನುಸೂಚಿ | ರಾಜ್ಯಸಭೆಯ ಸ್ಥಾನಗಳ ಹಂಚಿಕೆ |
| ಐದನೆ ಅನುಸೂಚಿ | ಅನುಸೂಚಿತ ಪ್ರದೇಶಗಳು ಮತ್ತು ಅನುಸೂಚಿತ ಬುಡಕಟ್ಟುಗಳು |
| ಆರನೆ ಅನುಸೂಚಿ | ಅಸ್ಸಾಂ, ಮೇಘಾಲಯ, ತ್ರಿಪುರ ಮತ್ತು ಮಿಜೋರಂ ರಾಜ್ಯಗಳ ಬುಡಕಟ್ಟು ಪ್ರದೇಶಗಳ ಆಡಳಿತದ |
| ಏಳನೆ ಅನುಸೂಚಿ | ಒಕ್ಕೂಟ ಪಟ್ಟಿ, ರಾಜ್ಯಪಟ್ಟಿ ಮತ್ತು ಸಮವರ್ತಿ ಪಟ್ಟಿ |
| ಎಂಟನೆ ಅನುಸೂಚಿ | ಭಾಷೆಗಳು |
| ಒಂಭತ್ತನೆ ಅನುಸೂಚಿ | ಕೆಲವು ಅಧಿನಿಯಮಗಳನ್ನು ಮತ್ತು ರೆಗ್ಯುಲೇಷನ್‌ಗಳನ್ನು ಮಾನ್ಯ ಮಾಡುವುದು |
| ಹತ್ತನೆ ಅನುಸೂಚಿ | ಪಕ್ಷಾಂತರದ ಕಾರಣದಿಂದ ಉಂಟಾಗುವು ಅನರ್ಹತೆಗೆ ಸಂಬಂಧಿಸಿದ ಉಪಬಂಧಗಳು |
| ಹನ್ನೊಂದನೆ ಅನುಸೂಚಿ | ಪಂಚಾಯತಿಗಳ ಅಧಿಕಾರ, ಪ್ರಾಧಿಕಾರ ಮತ್ತು ಜವಾಬ್ದಾರಿಗಳು ಇತ್ಯಾದಿ |
| ಹನ್ನೆರಡನೆ ಅನುಸೂಚಿ | ಪೌರಸಭೆಗಳ ಅಧಿಕಾರಗಳು, ಪ್ರಾಧಿಕಾರ ಮತ್ತು ಜವಾಬ್ದಾರಿಗಳು, ಇತ್ಯಾದಿ |

**ಭಾರತದಲ್ಲಿ ಸಂವಿಧಾನವೇ ಸರ್ವೋಚ್ಚವಾದದು. ನಮ್ಮ ಸಂವಿಧಾನದ ಮೂಲಭೂತ ತತ್ವಗಳು, ಆಶಯಗಳು ಮತ್ತು ಸಿದ್ಧಾಂತಗಳನ್ನು ಸಾರಾಂಶ ರೂಪದಲ್ಲಿ ತಿಳಿಸುವ ಪೀಠಿಕೆಯನ್ನು ಸಂವಿಧಾನದ ಪ್ರಸ್ತಾವನೆ (Preamble) ಎಂದು ಕರೆಯಲಾಗಿದೆ.**

**“ಭಾರತದ ಜನತೆಯಾದ ನಾವು,**
**ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ,**
**ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ ರೂಪಿಸುವುದಕ್ಕಾಗಿ;**
**ಭಾರತದ ಎಲ್ಲ ನಾಗರಿಕರಿಗೆ**
**ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;**
**ವಿಚಾರ, ಅಭಿವ್ಯಕ್ತಿ, ನಂಬಿಕೆ, ಶ್ರದ್ಧೆ ಮತ್ತು**
**ಉಪಾಸನೆಯ ಸ್ವಾತಂತ್ರ್ಯವನ್ನು;**
**ಸ್ಥಾನಮಾನ ಮತ್ತು ಅವಕಾಶಗಳ ಸಮತೆಯನ್ನು**
**ದೊರೆಯುವಂತೆ ಮಾಡುವುದಕ್ಕಾಗಿ;**
**ವ್ಯಕ್ತಿ ಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ**
**ಸಹೋದರ ಭಾವನೆಯನ್ನು ಮೂಡಿಸುವುದಕ್ಕೆ**
**ದೃಢ ಸಂಕಲ್ಪ ಮಾಡಿ,**
**ನಮ್ಮ ಸಂವಿಧಾನ ಸಭೆಯಲ್ಲಿ**
**1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು**
**ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,**
**ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ”.**

ಈ ಪ್ರಸ್ತಾವನೆಯ ಮೂಲಕ ತಿಳಿಯಪಡಿಸುವ ತತ್ವಗಳೆಂದರೆ, ಜನರೇ ಅಧಿಕಾರದ ಮೂಲ. ಭಾರತ ಒಂದು ಸ್ವತಂತ್ರ ವಾದ ಸಾರ್ವಭೌಮ ರಾಷ್ಟ್ರ. ಅದೊಂದು ಸಮಾಜವಾದಿ, ಜಾತ್ಯತೀತ ಮತ್ತು ಪ್ರಜಾಸತ್ತಾತ್ಮಕವಾದ ಗಣರಾಜ್ಯ. ಎಲ್ಲಾ ಪ್ರಜೆಗಳಿಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ನ್ಯಾಯ ದೊರಕಿಸಿಕೊಡುವುದು ನಮ್ಮ ಗುರಿ. ವಿಚಾರ, ಅಭಿವ್ಯಕ್ತಿ, ನಂಬಿಕೆ, ಭಕ್ತಿ (ಶ್ರದ್ಧೆ) ಹಾಗೂ ಉಪಾಸನೆಯ ಸ್ವಾತಂತ್ರ್ಯವನ್ನು ನೀಡುವುದು, ಎಲ್ಲರಿಗೂ ಸಮಾನ ಅವಕಾಶಗಳು ಮತ್ತು ಸ್ಥಾನಮಾನವನ್ನು ಕಲ್ಪಿಸುವುದು; ವ್ಯಕ್ತಿ ಗೌರವ ಮತ್ತು ಸಹೋದರತೆಯನ್ನು ಬೆಳೆಸುವುದು; ರಾಷ್ಟ್ರದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡುವುದು ನಮ್ಮ ಆದ್ಯ ಕರ್ತವ್ಯ.

ಸಂವಿಧಾನದ ಅನುಚ್ಛೇದ 5ರಿಂದ 11ರಲ್ಲಿ ಪೌರತ್ವದ ಬಗ್ಗೆ ತಿಳಿಸಲಾಗಿದೆ. ಭಾರತ ಒಕ್ಕೂಟದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳೆಂಬ ಎರಡು ಸರ್ಕಾರಗಳಿದ್ದರೂ, ತನ್ನ ಪ್ರಜೆಗಳಿಗೆ ಒಂದೇ ಪೌರತ್ವ ಹಕ್ಕನ್ನು ನೀಡಲಾಗಿದೆ. ವಿಶ್ವದ ಕೆಲವು ದೇಶಗಳಲ್ಲಿ ಎರಡು ರೀತಿಯ ಪೌರತ್ವವನ್ನು ನೀಡಲಾಗಿದೆ. ಉದಾಹರಣೆಗೆ ಅಮೇರಿಕ ದೇಶದಲ್ಲಿ ಎರಡು ರೀತಿಯ ಪೌರತ್ವಕ್ಕೆ ಅವಕಾಶವಿದೆ. ಸಂವಿಧಾನವು ಜಾರಿಗೆ ಬಂದ ಸಮಯದಲ್ಲಿ 1) ಭಾರತದಲ್ಲಿ ವಾಸಿಸುತ್ತಿದ್ದವರು 2) ಭಾರತದಲ್ಲಿ ಜನಿಸಿದ್ದವರು, 3) ತಂದೆ–ತಾಯಿಯರಲ್ಲಿ ಒಬ್ಬರು ಭಾರತದಲ್ಲಿ ಜನಿಸಿದ್ದವರ ಮಗ ಅಥವಾ ಮಗಳು ಹಾಗೂ 4) ಸಂವಿಧಾನ

ಅನುಷ್ಠಾನಗೊಳ್ಳುವುದಕ್ಕೆ ಹಿಂದಿನ 5 ವರ್ಷಗಳಿಂದ ಭಾರತದಲ್ಲಿ ವಾಸಿಸುತ್ತಿದ್ದವರು ಭಾರತದ ಪೌರತ್ವವನ್ನು ಪಡೆಯಲು ಹಕ್ಕುಳ್ಳವರಾಗಿದ್ದಾರೆ.

ಯಾವುದೇ ವ್ಯಕ್ತಿ ಬೇರೆ ರಾಷ್ಟ್ರದ ಪೌರತ್ವವನ್ನು ಪಡೆದಾಗ ಭಾರತದ ಪೌರತ್ವವನ್ನು ಕಳೆದುಕೊಳ್ಳುತ್ತಾರೆ. ಯಾವುದೇ ವ್ಯಕ್ತಿ ಸುಳ್ಳು ಪುರಾವೆಗಳನ್ನೊದಗಿಸಿ ಭಾರತದ ಪೌರತ್ವ ಪಡೆದಿದ್ದಾರೆಂದು ಕಂಡುಬಂದರೆ, ರಾಷ್ಟ್ರಕ್ಕೆ ನಿಷ್ಠೆ ತೋರಿಸದಿದ್ದರೆ, ಶತ್ರು ರಾಷ್ಟ್ರಗಳೊಡನೆ ವ್ಯವಹಾರ ನಡೆಸುತ್ತಿದ್ದರೆ, ಅಥವಾ ಸತತವಾಗಿ 7 ವರ್ಷಗಳ ಕಾಲ ಭಾರತದ ಹೊರಗೆ ಜೀವಿಸುತ್ತಿದ್ದಲ್ಲಿ ಅಂತಹವರ ಪೌರತ್ವವನ್ನು ಭಾರತ ಸರ್ಕಾರ ರದ್ದುಗೊಳಿಸಬಹುದು.

ನಮ್ಮ ಸಂವಿಧಾನವು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಪ್ರತ್ಯೇಕವಾಗಿ ಹಾಗೂ ಜಂಟಿಯಾಗಿ ನಿರ್ವಹಿಸಬೇಕಾದ ಕಾರ್ಯಕ್ಷೇತ್ರಗಳ ಬಗ್ಗೆ ತಿಳಿಯಪಡಿಸುತ್ತದೆ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಎಂಬ ಸ್ವತಂತ್ರ ಅಂಗಗಳನ್ನು ರಚಿಸಲು ಅನುವು ಮಾಡಿಕೊಟ್ಟಿದೆ. ಪ್ರಜಾಪ್ರಭುತ್ವವಾದಿ ಸರ್ಕಾರದ ರಚನೆಗೆ ಅವಕಾಶ ಮಾಡಿಕೊಟ್ಟಿದೆ. ಈ ಪದ್ಧತಿಯಲ್ಲಿ ಜನರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡುವ ಮೂಲಕ, ತಮಗೆ ಸೂಕ್ತವಾದ ಸರಕಾರವನ್ನು ರಚನೆ ಮಾಡಲು ಹಾಗೂ ಪ್ರತಿನಿಧಿಗಳ ಮೂಲಕ ಆಡಳಿತ ನಡೆಸಲು ಅಧಿಕಾರ ಹೊಂದಿರುತ್ತಾರೆ. ಮತದಾರರು ತಮ್ಮ ಪ್ರತಿನಿಧಿಗಳನ್ನು ಕಾಲಕಾಲಕ್ಕೆ ಚುನಾವಣೆ ಮೂಲಕ ಆಯ್ಕೆ ಮಾಡುತ್ತಾರೆ. ಗಣರಾಜ್ಯ ವ್ಯವಸ್ಥೆಯಲ್ಲಿ ದೇಶದ ಮುಖ್ಯಸ್ಥರು ತಮ್ಮ ಅಧಿಕಾರವನ್ನು ಅನುವಂಶಿಕವಾಗಿ ಪಡೆಯುವ ಹಕ್ಕನ್ನು ಹೊಂದಿರುವುದಿಲ್ಲ. ಗಣರಾಜ್ಯದಲ್ಲಿ ರಾಷ್ಟ್ರದ ಮುಖ್ಯಸ್ಥರನ್ನು ನಿಶ್ಚಿತ ಅವಧಿಗೆ ಜನರು ಆಯ್ಕೆ ಮಾಡುತ್ತಾರೆ. ನಮ್ಮ ಸಂವಿಧಾನವು ಸಂಸದೀಯ ಮಾದರಿಯ ಸರ್ಕಾರಕ್ಕೆ ಅವಕಾಶ ಕಲ್ಪಿಸಿದೆ. ಲೋಕಸಭೆ ಮತ್ತು ರಾಜ್ಯ ಸಭೆಗಳಿಂದ ಕೂಡಿದ ಸಂಸತ್ತು ಪರಮೋಚ್ಛ ಅಧಿಕಾರವನ್ನು ಹೊಂದಿದೆ. ಚುನಾವಣೆಯಲ್ಲಿ ಬಹುಮತ ಗಳಿಸಿದ ಪಕ್ಷದ ವತಿಯಿಂದ ಮಂತ್ರಿಮಂಡಲವನ್ನು ಆಯ್ಕೆ ಮಾಡಲಾಗುತ್ತದೆ. ಸಚಿವ ಸಂಪುಟದ ಮುಖ್ಯಸ್ಥರಾದ ಪ್ರಧಾನಿಯವರು ಸಂಸತ್ತಿಗೆ ಜವಾಬ್ದಾರರಾಗುತ್ತಾರೆ. ಇದೇ ರೀತಿ ರಾಜ್ಯಗಳಲ್ಲಿ ವಿಧಾನಸಭೆ ಮತ್ತು ವಿಧಾನಮಂಡಲಗಳು ಕಾರ್ಯನಿರ್ವಹಿಸುತ್ತವೆ.

ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಅತ್ಯುನ್ನತ ಸ್ಥಾನದಲ್ಲಿರುವುದು ಸರ್ವೋಚ್ಛ ನ್ಯಾಯಾಲಯ. ರಾಜ್ಯಗಳಲ್ಲಿ ಉಚ್ಛನ್ಯಾಯಾಲಯ, ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ. ನಮ್ಮ ನ್ಯಾಯಾಂಗ ವ್ಯವಸ್ಥೆಯು ಸ್ವತಂತ್ರವಾದುದು. ಹಾಗೂ ಜನರ ಸ್ವಾತಂತ್ರ್ಯವನ್ನು ರಕ್ಷಿಸುವ ಮಹತ್ತರ ಹೊಣೆಗಾರಿಕೆಯುಳ್ಳದ್ದು. ಸಂವಿಧಾನದತ್ತವಾದ ಪ್ರಜೆಗಳ ಮೂಲಭೂತ ಹಕ್ಕುಗಳನ್ನು ನ್ಯಾಯಾಂಗವು ರಕ್ಷಿಸುತ್ತದೆ. ಶಾಸಕಾಂಗವು ಅಂಗೀಕರಿಸುವ ಶಾಸನಗಳು ಸಂವಿಧಾನ ವಿರೋಧಿಯಾಗಿದ್ದರೆ ಅಂತಹ ಶಾಸನಗಳನ್ನು ಅಸಿಂಧು ಎಂದು ತಿರಸ್ಕರಿಸಿ ಸಂವಿಧಾನದ ರಕ್ಷಕನಾಗಿ ಕೆಲಸ ಮಾಡುತ್ತದೆ. ಕಾರ್ಯಾಂಗವು ತನ್ನ ಕಾರ್ಯ ವೈಖರಿಯಲ್ಲಿ ತಪ್ಪು ಮಾಡಿದರೆ, ಕಾನೂನು ಬಾಹಿರ ಕೆಲಸ ಮಾಡಿದರೆ, ಪಕ್ಷಪಾತ ಧೋರಣೆ ತೋರಿದರೆ ಅಂತಹವುಗಳನ್ನು ನ್ಯಾಯಾಲಯಗಳು ರದ್ಧುಪಡಿಸಿ ಸೂಕ್ತ ಆದೇಶಗಳನ್ನು ನೀಡುವ ಮೂಲಕ ಕಾನೂನು ಸುವ್ಯವಸ್ಥೆಯನ್ನು (Rule of Law) ಎತ್ತಿ ಹಿಡಿಯುತ್ತದೆ.

ನಮ್ಮದು ಧರ್ಮನಿರಪೇಕ್ಷ ಮತ್ತು ಜಾತ್ಯತೀತ ರಾಷ್ಟ್ರವೆಂದು ಸಂವಿಧಾನದಲ್ಲಿ ತಿಳಿಯಪಡಿಸಿದೆ. ಧರ್ಮನಿರಪೇಕ್ಷ ಮತ್ತು ಜಾತ್ಯತೀತವೆಂದರೆ ಧರ್ಮವನ್ನು ರಾಜಕಾರಣದಿಂದ ಬೇರ್ಪಡಿಸುವುದು. ಸರ್ಕಾರ ಯಾವುದೇ ಧರ್ಮದ ಜೊತೆಗೆ ಗುರುತಿಸಿಕೊಳ್ಳಬಾರದು, ಯಾವುದೇ ಧರ್ಮವನ್ನು ಪೋಷಿಸಬಾರದು, ಯಾವುದೇ ಧರ್ಮದ ಬಗ್ಗೆ ತಾರತಮ್ಯ ತೋರಿಸಬಾರದು. ಧರ್ಮದ ಪೋಷಣೆಗೆ ಸರ್ಕಾರ ಜನರ ಮೇಲೆ ಕಂದಾಯ ವಿಧಿಸಬಾರದು. ಸರ್ಕಾರದ ನೀತಿಗಳು ಯಾವುದೇ ಧರ್ಮದ ಫರಮಾನ್‌ಗಳಿಂದ ಪ್ರೇರಿತವಾಗಿರಕೂಡದು. ಇಂತಹ ಒಂದು ರಾಜಕೀಯ ವ್ಯವಸ್ಥೆಯನ್ನು ಧರ್ಮನಿರಪೇಕ್ಷ ಮತ್ತು ಜಾತ್ಯತೀತವೆಂದು ಕರೆಯುವುದು.

ನಮ್ಮ ಸಂವಿಧಾನವು ಭಾರತವನ್ನು ಕಲ್ಯಾಣ ರಾಜ್ಯವನ್ನಾಗಿ ಮಾಡುವ ಗುರಿ ಹೊಂದಿದೆ. ಈ ಗುರಿಯನ್ನು ಸಾಧಿಸಲು ಜನರ ಆರ್ಥಿಕ, ಸಾಮಾಜಿಕ, ಭೌತಿಕ ಮತ್ತು ಸಾಂಸ್ಕೃತಿಕ ಜೀವನವನ್ನು ಸುಧಾರಿಸಲು ಈ ಕೆಳಕಂಡ ಮಾರ್ಗದರ್ಶನಗಳನ್ನು ನೀಡಿದೆ:

1. ಎಲ್ಲಾ ಪ್ರಜೆಗಳ ಜೀವನ ನಿರ್ವಹಣೆಗೆ ಅಗತ್ಯವಾದಷ್ಟು ಸಾಧನ ಸೌಕರ್ಯಗಳು ಲಭ್ಯವಿರುವಂತೆ ನೋಡಿಕೊಳ್ಳುವುದು.
2. ಗಂಡಸು ಮತ್ತು ಹೆಂಗಸು ಎಂಬ ಬೇಧ–ಭಾವ ಇಲ್ಲದೆ ಸಮಾನ ಕೆಲಸಕ್ಕೆ ಸಮಾನ ಸಂಬಳ ನೀಡುವುದು.
3. ಸಂಪತ್ತು ಕೇವಲ ಕೆಲವೇ ಜನರ ಸ್ವತ್ತಾಗದೆ, ಎಲ್ಲರಿಗೂ ಲಭ್ಯವಾಗುವಂತಹ ಅರ್ಥವ್ಯವಸ್ಥೆಯನ್ನು ರೂಪಿಸುವುದು.
4. ಗ್ರಾಮ ಪಂಚಾಯಿತಿಗಳನ್ನು ರೂಪಿಸಿ, ವ್ಯವಸ್ಥೆಗೊಳಿಸುವುದು.
5. ಎಲ್ಲಾ ಪೌರರಿಗೂ ಒಂದೇ ರೀತಿಯಾದ ನಿಯಮಗಳನ್ನು ರೂಪಿಸುವುದು.
6. ಹದಿನಾಲ್ಕು ವರ್ಷದವರೆಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವುದು.
7. ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಮತ್ತು ಸಾಮಾಜಿಕ ದುರ್ಬಲ ವರ್ಗಗಳ ಸ್ಥಿತಿಗತಿಗಳನ್ನು ಸುಧಾರಿಸುವುದು.
8. ಜನರ ಜೀವನಮಟ್ಟವನ್ನು ಹೆಚ್ಚಿಸುವುದು ಮತ್ತು ಸಾರ್ವಜನಿಕ ಆರೋಗ್ಯವನ್ನು ಉತ್ತಮಪಡಿಸುವುದು.
9. ವ್ಯವಸಾಯ ಮತ್ತು ಪಶುಸಂಗೋಪನೆಯನ್ನು ವ್ಯವಸ್ಥೆಗೊಳಿಸುವುದು.
10. ರಾಷ್ಟ್ರೀಯ ಪ್ರಾಮುಖ್ಯತೆಯನ್ನು ಪಡೆದ ಸ್ಮಾರಕಗಳನ್ನು ಮತ್ತು ಸ್ಥಳಗಳನ್ನು ರಕ್ಷಿಸುವುದು.
11. ಕಾರ್ಯಾಂಗ ಮತ್ತು ನ್ಯಾಯಾಂಗಗಳ ಕರ್ತವ್ಯವನ್ನು ಪ್ರತ್ಯೇಕವಾಗಿಡುವುದು.
12. ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ವೃದ್ಧಿಸುವುದು.

ಪ್ರತಿಯೊರ್ವ ಪ್ರಜೆಯ ವ್ಯಕ್ತಿತ್ವ ಪರಿಪೂರ್ಣವಾಗಿ ಬೆಳೆದು ವಿಕಾಸವಾಗಬೇಕಾದರೆ ಅವರಿಗೆ ಕೆಲವು ಹಕ್ಕುಗಳನ್ನು ನೀಡಬೇಕಾಗುತ್ತದೆ. ಇಂತಹ ಮೂಲಭೂತ ಹಕ್ಕುಗಳನ್ನು

ಭಾರತದ ಸಂವಿಧಾನವು ನಮಗೆ ನೀಡಿದೆ.

## 1. ಸಮಾನತೆಯ ಹಕ್ಕು

i) ಎಲ್ಲಾ ವ್ಯಕ್ತಿಗಳು ಕಾನೂನಿನ ದೃಷ್ಟಿಯಲ್ಲಿ ಸರಿಸಮಾನರು ಹಾಗೂ ಎಲ್ಲರಿಗೂ ಕಾನೂನಿಂದ ಸಮಾನ ರಕ್ಷಣೆ ದೊರೆಯುವುದು.

ii) ಧರ್ಮ, ಜಾತಿ, ಲಿಂಗ, ಜನ್ಮತಾಣದ ಆಧಾರದ ಮೇಲೆ ತಾರತಮ್ಯ ತೋರುವುದನ್ನು ನಿಷೇಧಿಸಿದೆ

iii) ಉದ್ಯೋಗ ಅವಕಾಶಗಳನ್ನು ಪಡೆಯಲು ಎಲ್ಲರೂ ಸಮಾನರು.

## 2. ಸ್ವಾತಂತ್ರ್ಯದ ಹಕ್ಕು

i) ಎಲ್ಲರಿಗೂ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ

ii) ಶಾಂತಿಯುತವಾಗಿ, ಶಸ್ತ್ರರಹಿತವಾಗಿ ಸಭೆ ಸೇರುವ ಸ್ವಾತಂತ್ರ್ಯ

iii) ಸಂಘ, ಸಂಸ್ಥೆಗಳನ್ನು ರಚಿಸುವ ಸ್ವಾತಂತ್ರ್ಯ

iv) ಭಾರತದಾದ್ಯಂತ ಸ್ವತಂತ್ರವಾಗಿ ಸಂಚರಿಸುವ ಸ್ವಾತಂತ್ರ್ಯ

v) ಭಾರತದಲ್ಲಿ ಎಲ್ಲಿ ಬೇಕಾದರೂ ವಾಸಿಸುವ ಸ್ವಾತಂತ್ರ್ಯ

vi) ಯಾವುದೇ ವೃತ್ತಿ, ಉದ್ಯೋಗ, ವ್ಯಾಪಾರ ಮಾಡುವ ಸ್ವಾತಂತ್ರ್ಯ

## 3. ಶೋಷಣೆಯ ವಿರುದ್ಧ ಹಕ್ಕು

i) ಮಾನವ ಕಳ್ಳಸಾಗಾಣಿಕೆ ಮತ್ತು ಯಾವುದೇ ಸ್ವರೂಪದ ಬಲಾತ್ಕಾರದ ದುಡಿಮೆಗಳನ್ನು ನಿಷೇಧಿಸಲಾಗಿದೆ.

ii) ಸಾರ್ವಜನಿಕ ಉದ್ದೇಶಗಳಿಗಾಗಿ ಸರ್ಕಾರ ಕಡ್ಡಾಯ ಸೇವೆಯನ್ನು ವಿಧಿಸಬಹುದು; ಆದರೆ ಅಂಥ ಸೇವೆಯನ್ನು ವಿಧಿಸುವಾಗ ಧರ್ಮ, ಜಾತಿ, ವಂಶ ಹಾಗೂ ವರ್ಗ ಆಧಾರದ ಮೇಲೆ ತಾರತಮ್ಯ ತೋರಬಾರದು.

iii) ಹದಿನಾಲ್ಕು ವರ್ಷಗಳಿಗಿಂತ ಕಡಿಮೆ ವಯಸ್ಸಿನ ಮಕ್ಕಳನ್ನು ಕಾರ್ಖಾನೆಗಳಲ್ಲಿ, ಗಣಿಗಳಲ್ಲಿ ಅಥವಾ ಯಾವುದೇ ಅಪಾಯಕಾರಿ ಕೆಲಸದಲ್ಲಿ ತೊಡಗಿಸುವಂತಿಲ್ಲ.

## 4. ಧಾರ್ಮಿಕ ಸ್ವಾತಂತ್ರದ ಹಕ್ಕು

i) ತಮ್ಮ ಆತ್ಮಸಾಕ್ಷಿಯಂತೆ ಯಾವುದೇ ಧರ್ಮವನ್ನು ಅವಲಂಬಿಸಿ, ಆಚರಿಸಿ, ಪ್ರಚಾರ ಮಾಡುವ ಸ್ವಾತಂತ್ರ್ಯ

ii) ಧಾರ್ಮಿಕ ಸಂಸ್ಥೆಗಳನ್ನು ಸ್ಥಾಪಿಸಿ, ನಿರ್ವಹಿಸುವ ಸ್ವಾತಂತ್ರ್ಯ

iii) ಧರ್ಮ ಹಾಗೂ ಧಾರ್ಮಿಕ ಸಂಸ್ಥೆಗಳ ಪೋಷಣೆಗೆ ತೆರಿಗೆ ವಿನಾಯತಿಯ ಸ್ವಾತಂತ್ರ್ಯ

## 5. ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಹಕ್ಕು

i) ಯಾವುದೇ ಜನ ವಿಭಾಗವು ತನ್ನದೇ ಆದ ವಿಭಿನ್ನ ಭಾಷೆ, ಲಿಪಿ ಅಥವಾ ಸಂಸ್ಕೃತಿಯನ್ನು ಅನುಸರಿಸುವುದು ಮತ್ತು ಸಂರಕ್ಷಿಸಿಕೊಳ್ಳುವುದು

ii) ಸರ್ಕಾರ ನಿರ್ವಹಿಸುವ ಅಥವಾ ಸರ್ಕಾರದ ನೆರವು ಪಡೆದು ನಿರ್ವಹಿಸುವ ಯಾವುದೇ ಶೈಕ್ಷಣಿಕ ಸಂಸ್ಥೆಗಳು ಧರ್ಮ, ಜಾತಿ, ಭಾಷೆ, ವಂಶ, ಲಿಂಗದ ಆಧಾರದ ಮೇಲೆ ಯಾರಿಗೂ ಪ್ರವೇಶಾವಕಾಶವನ್ನು ನಿರಾಕರಿಸುವಂತಿಲ್ಲ

## 6. ಸಂವಿಧಾನಾತ್ಮಕ ಪರಿಹಾರದ ಹಕ್ಕು

i) ಮೂಲಭೂತ ಹಕ್ಕಿಗೆ ಚ್ಯುತಿ ಬಂದರೆ, ಉಚ್ಚ ನ್ಯಾಯಾಲಯ ಮತ್ತು ಸರ್ವೋಚ್ಚ ನ್ಯಾಯಾಲಯಗಳಿಗೆ ಹೋಗಿ ನ್ಯಾಯ ಪಡೆಯಬಹುದು.

ii) ಈ ನ್ಯಾಯಾಲಯಗಳು ಮೂಲಭೂತ ಹಕ್ಕುಗಳ ರಕ್ಷಣೆಗೆ ವಿವಿಧ ರೀತಿಯ ರಿಟ್ ಅರ್ಜಿಗಳನ್ನು ಸ್ವೀಕರಿಸಿ ಸೂಕ್ತ ಆದೇಶಗಳನ್ನು ನೀಡಬಹುದು.

**a) ಹೇಬಿಯಸ್ ಕಾರ್ಪಸ್ ರಿಟ್:** ಕಾಣೆಯಾದ ಅಥವಾ ಬಂಧಿಸಿರುವ ವ್ಯಕ್ತಿಯನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಿ, ಬಂಧನದ ಕಾರಣ ತಿಳಿಸಿ, ತಿಳಿಸಿದ ಕಾರಣ ಸಮರ್ಥನೀಯವಲ್ಲದಿದ್ದರೆ ವ್ಯಕ್ತಿಯ ಬಿಡುಗಡೆಗೆ ಆದೇಶ ಮಾಡುವುದು.

**b) ಮ್ಯಾಂಡಮಸ್ ರಿಟ್:** ಕಾನೂನು ಬದ್ಧವಾದ ಸಾರ್ವಜನಿಕ ಕರ್ತವ್ಯವನ್ನು ನಿರ್ವಹಿಸಲು ಸರ್ಕಾರದ ಯಾವುದೇ ಸಂಸ್ಥೆಯು ನಿರಾಕರಿಸಿದಾಗ, ಅಂತಹ ಸಂಸ್ಥೆಗೆ ಕರ್ತವ್ಯ ನಿರ್ವಹಿಸುವಂತೆ ಆಜ್ಞೆ ಮಾಡುವುದು.

**c) ಪ್ರಾಹಿಬಿಷನ್ ರಿಟ್:** ಯಾವುದೇ ಸರ್ಕಾರಿ ಸಂಸ್ಥೆ ಅಥವಾ ಅಧಿಕಾರಿ ತನ್ನ ಕಾರ್ಯವ್ಯಾಪ್ತಿ ಮೀರಿ ಅಧಿಕಾರ ಚಲಾಯಿಸಿದರೆ ಅದನ್ನು ತಡೆಯುವುದು.

**d) ಸೆರ್ಷಿಯೋರರಿ ರಿಟ್:** ಸರ್ಕಾರ ಅಥವಾ ಅದರ ಅಧಿಕಾರಿಗಳು ಅಥವಾ ನ್ಯಾಯಮಂಡಳಿಗಳು ಹೊರಡಿಸಿರುವ ಆದೇಶಗಳು ಕಾನೂನು ಬದ್ಧವಾಗಿಲ್ಲದಿದ್ದರೆ ಅವುಗಳನ್ನು ರದ್ದುಗೊಳಿಸುವುದು.

e) **ಕೋ–ವಾರಂಟೋ ರಿಟ್:** ಯಾವುದೇ ಸರ್ಕಾರಿ ಸ್ಥಾನವನ್ನು ಹೊಂದಲು ನಿಗದಿಪಡಿಸಲಾದ ಅರ್ಹತೆಯನ್ನು ಹೊಂದಿಲ್ಲದೆ ಆ ಸರ್ಕಾರಿ ಸ್ಥಾನದಲ್ಲಿದ್ದರೆ ಅಂತಹವರನ್ನು ಆ ಸ್ಥಾನದಿಂದ ತೆಗೆದು ಹಾಕುವುದು.

## ಮೂಲಭೂತ ಕರ್ತವ್ಯಗಳು

ಮೂಲಭೂತ ಹಕ್ಕುಗಳ ರೀತಿಯಲ್ಲಿಯೇ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಕರ್ತವ್ಯಗಳನ್ನೂ ನಮ್ಮ ಸಂವಿಧಾನವು ನಿಗದಿಪಡಿಸಿದೆ. 1976ರಲ್ಲಿ ಸಂವಿಧಾನಕ್ಕೆ 42ನೆ ತಿದ್ದುಪಡಿ ತರುವುದರ ಮೂಲಕ, ಮೂಲಭೂತ ಕರ್ತವ್ಯಗಳ ಪಟ್ಟಿಯನ್ನು ಸೇರಿಸಲಾಯಿತು. ಅದರಂತೆ ಪ್ರತಿಯೊಬ್ಬ ಪ್ರಜೆಯು

1. ರಾಷ್ಟ್ರಗೀತೆ, ರಾಷ್ಟ್ರಧ್ವಜ ಹಾಗೂ ಸಂವಿಧಾನದ ಆದರ್ಶಗಳನ್ನು ಗೌರವಿಸುವುದು.
2. ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾಗಿದ್ದ ಉದಾತ್ತ ಆದರ್ಶಗಳನ್ನು ಅನುಸರಿಸುವುದು ಹಾಗೂ ಗೌರವಿಸುವುದು.
3. ಭಾರತದ ಸಮಗ್ರತೆ, ಐಕ್ಯತೆ ಹಾಗೂ ಸಾರ್ವಭೌಮತ್ವವನ್ನು ಎತ್ತಿ ಹಿಡಿಯುವುದು.
4. ದೇಶದ ರಕ್ಷಣೆಗೆ ಹಾಗೂ ಸೇವೆಗೆ ಕರೆ ಬಂದಾಗ ಧಾವಿಸುವುದು.
5. ಧರ್ಮ, ಭಾಷೆ, ಪ್ರಾದೇಶಿಕತೆ, ಜಾತಿ ಮತ್ತು ಪಂಗಡಗಳ ಎಲ್ಲೆ ಮೀರಿ ಸಮಸ್ತ ಭಾರತೀಯರಲ್ಲಿ ಸಹೋದರ ಭಾವನೆಯನ್ನು ಬೆಳೆಸುವುದು ಹಾಗೂ ಮಹಿಳೆಯರ ಗೌರವಕ್ಕೆ ಚ್ಯುತಿ ತರುವ ಆಚರಣೆಗಳನ್ನು ತ್ಯಜಿಸುವುದು.
6. ಬಹುತ್ವದ ಸಂಸ್ಕೃತಿಯನ್ನು, ಪರಂಪರೆಯನ್ನು ಗೌರವಿಸುವುದು ಹಾಗೂ ರಕ್ಷಿಸುವುದು.
7. ಅರಣ್ಯಗಳು, ನದಿಗಳು, ಸರೋವರ ಹಾಗೂ ವನ್ಯಜೀವಿಗಳು ಸೇರಿದಂತೆ, ಸಮಗ್ರ ನೈಸರ್ಗಿಕ ಪರಿಸರವನ್ನು ಕಾಪಾಡುವುದು; ಜೊತೆಗೆ ಪ್ರಾಣಿಗಳ ಬಗ್ಗೆ ಅನುಕಂಪ ತೋರುವುದು.
8. ವೈಜ್ಞಾನಿಕ ಮನೋಭಾವನೆ, ಮಾನವೀಯತೆ, ಜಿಜ್ಞಾಸೆಯ ಮತ್ತು ಸುಧಾರಣೆಯ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವುದು ಮತ್ತು ಇತರರಲ್ಲಿ ಬೆಳೆಸುವುದು.
9. ಸಾರ್ವಜನಿಕ ಸ್ವತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.
10. ವೈಯಕ್ತಿಕ ಹಾಗೂ ಸಾಮೂಹಿಕ ಕಾರ್ಯಗಳಲ್ಲಿ ಶ್ರೇಷ್ಠತೆಯನ್ನು ತೋರಿ, ರಾಷ್ಟ್ರದ ಎಲ್ಲಾ ಕಾರ್ಯಕ್ಷೇತ್ರಗಳಲ್ಲಿ ಸಾಧನೆಯನ್ನು ತೋರುವುದು.

## ಲಿಂಗ ಸಮಾನತೆ:

ನಮ್ಮ ಸಂವಿಧಾನದಲ್ಲಿ ಲಿಂಗಬೇಧ ನಿವಾರಣೆಗೆ ಹಾಗೂ ಮಹಿಳೆಯರ ಸ್ಥಿತಿಗತಿ ಅಭಿವೃದ್ಧಿಗೆ ಹಲವು ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ.

- ಸಂವಿಧಾನದ ಅನುಚ್ಛೇದ 14ರಲ್ಲಿ ಮಹಿಳೆ ಮತ್ತು ಪುರುಷರಿಗೆ ಸಮಾನವಾದ ಕಾನೂನಿನ ರಕ್ಷಣೆಯನ್ನು ಒದಗಿಸಲಾಗಿದೆ.
- ಅನುಚ್ಛೇದ 15ರಲ್ಲಿ ಲಿಂಗಬೇಧದ ಆಧಾರದ ಮೇಲೆ ತಾರತಮ್ಯ ಧೋರಣೆಯನ್ನು ತೋರಬಾರದೆಂದು ಸೂಚಿಸಲಾಗಿದೆ.
- ಅನುಚ್ಛೇದ 18ರಲ್ಲಿ ಸರ್ಕಾರಿ ನೌಕರಿ ಅಥವಾ ಯಾವುದೇ ಹುದ್ದೆಯಲ್ಲಿ ಮಹಿಳೆಯರ ವಿರುದ್ಧ ತಾರತಮ್ಯ ನೀತಿ ತೋರಬಾರದೆಂದು ನಿರ್ದೇಶಿಸಿದೆ.
- ಅನುಚ್ಛೇದ 21ರಲ್ಲಿ ಮಹಿಳೆಯರು ಮಾನವ ಘನತೆಯಿಂದ ಬದುಕುವ ಹಕ್ಕನ್ನು ಕೊಡುತ್ತದೆ.
- ಮಹಿಳೆಯರು ಮತ್ತು ಪುರುಷರಿಗೆ ಸಮಾನವಾದ ಮೂಲಭೂತ ಹಕ್ಕುಗಳನ್ನು ನೀಡಲಾಗಿದೆ. ಸರ್ಕಾರವು ಮಹಿಳೆಯರ ಅಭಿವೃದ್ಧಿಗಾಗಿ ಪ್ರತ್ಯೇಕ ಕಾನೂನುಗಳನ್ನು ಮತ್ತು ಯೋಜನೆಗಳನ್ನು ರೂಪಿಸುವ ಅಧಿಕಾರವನ್ನೂ ನೀಡಲಾಗಿದೆ.
- ಅನುಚ್ಛೇದ 51(ಎ)ನಲ್ಲಿ ಮಹಿಳೆಯರ ಗೌರವಕ್ಕೆ ಚ್ಯುತಿ ತರುವ ಆಚರಣೆಗಳನ್ನು ತ್ಯಜಿಸಬೇಕೆಂದು ನಿರ್ದೇಶಿಸಿದೆ.
- ಅನುಚ್ಛೇದ 243ರಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಕಡ್ಡಾಯ ಮೀಸಲಾತಿ ಒದಗಿಸಲಾಗಿದೆ.

## ದುಡಿಯುವ ವರ್ಗದ ಹಕ್ಕುಗಳು:

ದುಡಿಯುವ ವರ್ಗದ ಹಿತವನ್ನು ಕಾಪಾಡುವ ಅಂಶಗಳನ್ನು ಹಲವಾರು ಅನುಚ್ಛೇದಗಳಲ್ಲಿ ಪ್ರಸ್ತಾಪಿಸಲಾಗಿದೆ. ಪ್ರಮುಖವಾದ ಅನುಚ್ಛೇದಗಳೆಂದರೆ: 14, 15, 16, 19, 21, 23, 24, 39, 41, 42 ಮತ್ತು 43. ಈ ಅನುಚ್ಛೇದಗಳ ಅನುಸಾರ ದುಡಿಯುವ ವರ್ಗಕ್ಕೆ ಸಂಘ ಸಂಸ್ಥೆಗಳನ್ನು ಸ್ಥಾಪಿಸಿಕೊಳ್ಳುವುದಕ್ಕೆ, ಸಭೆ ಸೇರುವುದಕ್ಕೆ, ಶಾಂತಿಯುತವಾಗಿ ಪ್ರತಿಭಟಿಸುವುದಕ್ಕೆ, ಧರಣಿ ನಡೆಸಲು, ಮುಷ್ಕರ ಹೂಡಲು ಮತ್ತು ಅಭಿಪ್ರಾಯವನ್ನು ವ್ಯಕ್ತಪಡಿಸುವುದಕ್ಕೆ ಸ್ವಾತಂತ್ರ್ಯ ನೀಡಲಾಗಿದೆ. ಮನುಷ್ಯರ ಮಾರಾಟ ಮತ್ತು ಬಲಾತ್ಕಾರದ ದುಡಿಮೆಗಳನ್ನು ನಿಷೇಧಿಸಲಾಗಿದೆ. 14 ವರ್ಷಗಳಿಗಿಂತ ಕಡಿಮೆ ವಯಸ್ಸಿನ ಯಾವುದೇ ಮಗುವನ್ನು ಕಾರ್ಖಾನೆ ಅಥವಾ ಗಣಿಯಲ್ಲಿ ಕೆಲಸ ಮಾಡಲು ನಿಯೋಜಿಸತಕ್ಕದ್ದಲ್ಲ ಅಥವಾ ಅಪಾಯಕಾರಿಯಾದ ಉದ್ಯೋಗದಲ್ಲಿ ತೊಡಗಿಸತಕ್ಕದ್ದಲ್ಲ.

ಪುರುಷರಿಗೂ ಮತ್ತು ಮಹಿಳೆಯರಿಗೂ ಸಮಾನ ಕೆಲಸಕ್ಕೆ ಸಮಾನ ವೇತನ ನೀಡುವುದು; ಎಲ್ಲರಿಗೂ ಕನಿಷ್ಠ ವೇತನ ನೀಡುವುದು; ಕೈಗಾರಿಕಾ ಸಂಸ್ಥೆಗಳ ಆಡಳಿತದಲ್ಲಿ ಕಾರ್ಮಿಕರೂ ಭಾಗವಹಿಸುವುದು ಇತ್ಯಾದಿ ಹಕ್ಕುಗಳನ್ನು ಮತ್ತು ರಕ್ಷಣೆಗಳನ್ನು ನೀಡಲಾಗಿದೆ.

## ಅಸ್ಪೃಷ್ಯತೆ ನಿವಾರಣೆ:

ಸಂವಿಧಾನವು ಅಸ್ಪೃಶ್ಯತೆಯ ನಿರ್ಮೂಲನೆ ಹಾಗೂ ಅಸ್ಪೃಶ್ಯರ ವಿಮೋಚನೆಗೆ ಹಲವು ವಿಚಾರಗಳನ್ನು ಪ್ರಸ್ತಾಪಿಸಿದೆ. ಅನುಚ್ಛೇದ 15, 16, 17, 21, 23, 43, 45, 46, 243, 330, 332, 335, 338, 340, 341 ಮತ್ತು 342ರಲ್ಲಿ ಈ ಅಂಶಗಳು ಪ್ರಸ್ತಾಪಿಸಲ್ಪಟ್ಟಿವೆ. ಈ ಅನುಚ್ಛೇದಗಳ ಪ್ರಕಾರ ಧರ್ಮ, ಜನಾಂಗ, ಜಾತಿ ಆಧಾರದ ಮೇಲೆ ಯಾವುದೇ ವ್ಯಕ್ತಿಯನ್ನು ಸಾರ್ವಜನಿಕ ಸ್ಥಳಗಳಲ್ಲಿ ನಿರ್ಬಂಧಿಸುವಂತಿಲ್ಲ; ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸಬೇಕು; ಯಾರಿಗೂ ಯಾವುದೇ ರೀತಿಯ ತಾರತಮ್ಯ ತೋರುವಂತಿಲ್ಲ. ದುರ್ಬಲ ವರ್ಗಗಳ ಅಭಿವೃದ್ಧಿಗಾಗಿ ಮೀಸಲಾತಿ ಕಲ್ಪಿಸಬೇಕು; ಅಸ್ಪೃಶ್ಯತೆಯ ಆಚರಣೆಯು ಶಿಕ್ಷಾರ್ಹ ಅಪರಾಧ; ರಾಜ್ಯ ಸರ್ಕಾರಗಳು ಇವರ ಶೈಕ್ಷಣಿಕ ಮತ್ತು ಆರ್ಥಿಕ ಹಿತಾಸಕ್ತಿಗಳನ್ನು ವೃದ್ಧಿಗೊಳಿಸಲು ವಿಶೇಷ ಕ್ರಮ ಕೈಗೊಳ್ಳಬೇಕು ಮತ್ತು ಎಲ್ಲಾ ರೀತಿಯ ಶೋಷಣೆಯಿಂದ ಅವರನ್ನು ರಕ್ಷಿಸತಕ್ಕದ್ದು ಎನ್ನುತ್ತದೆ. ಲೋಕಸಭೆ, ವಿಧಾನಸಭೆ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಈ ವರ್ಗಗಳಿಗಾಗಿ ಮೀಸಲಾತಿಯನ್ನು ಕಲ್ಪಿಸಲಾಗಿದೆ.

# ಭಾಗ 7

## ಸಂವಿಧಾನದ ಮೂಲ ತತ್ವಗಳು

ನಮ್ಮ ಸಂವಿಧಾನವನ್ನು ಹಲವು ಮೂಲತತ್ವಗಳ ಅಡಿಪಾಯದ ಮೇಲೆ ರೂಪಿಸಲಾಗಿದೆ. ಇವುಗಳನ್ನು ಮೂಲತತ್ವ ಎಂಬ ಹೆಸರಿನಲ್ಲಿ ಪ್ರತ್ಯೇಕವಾಗಿ ನಮೂದಿಸಿಲ್ಲವಾದರೂ, ಅಂತರ್ಗತ ಮಾಡಲಾಗಿದೆ.

ಉದಾಹರಣೆಗೆ, ಸಂವಿಧಾನದ 368ನೇ ಅನುಚ್ಛೇದವು ಸಂವಿಧಾನವನ್ನು ತಿದ್ದುಪಡಿ ಮಾಡುವುದಕ್ಕೆ ಸಂಸತ್ತಿಗೆ ಅಧಿಕಾರ ನೀಡುತ್ತದೆ. ಆದರೆ, ಈ ಅಧಿಕಾರದ ಮುಖೇನ ಬೇರೊಂದು ಸಂವಿಧಾನವನ್ನು ರಚಿಸಿ ಈಗಿರುವ ಸಂವಿಧಾನವನ್ನು ಕೊನೆಗೊಳಿಸುವುದಕ್ಕೆ ಯಾವುದೇ ಅವಕಾಶ ಇರುವುದಿಲ್ಲ. ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಸತ್ತಿಗಿರುವ ಅಧಿಕಾರ ನಿರುಪಾಧಿಕವೇ ಅಥವಾ ನಿರ್ಬಂಧಗಳಿಗೆ ಒಳಪಟ್ಟಿದೆಯೇ ಎಂಬುದನ್ನು ಸರ್ವೋಚ್ಚ ನ್ಯಾಯಾಲಯವು ಕೇಶವಾನಂದ ಭಾರತಿ ಪ್ರಕರಣದಲ್ಲಿ (1973ರ (4) ಎಸ್‌ಸಿಸಿ 255) ಪರಾಮರ್ಶಿಸಿದೆ. ಹಾಗೆ ಮಾಡುವಾಗ ಸರ್ವೋಚ್ಚ ನ್ಯಾಯಾಲಯ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಂಡಿದೆ:

1) ಈ ದೇಶದ ಪ್ರಭುತ್ವವನ್ನು ನಾಶಪಡಿಸಿ ಇನ್ನೊಂದು ದೇಶಕ್ಕೆ ಅಧೀನವಾಗಿ ಮಾಡಬಹುದೇ?
2) ಈಗಿನ ಪ್ರಜಾಪ್ರಭುತ್ವ ಸರ್ಕಾರಕ್ಕೆ ಬದಲು ರಾಜಾಡಳಿತ ಪದ್ಧತಿಯನ್ನು ಅಥವಾ ನಿರಂಕುಶ ಪ್ರಭುತ್ವವನ್ನು ಜಾರಿಗೆ ತರಬಹುದೇ?
3) ಈ ದೇಶದ ಒಕ್ಕೂಟ ವ್ಯವಸ್ಥೆಯನ್ನು

*"ನಮ್ಮ ಸಂವಿಧಾನವನ್ನು ಹಲವು ಮೂಲತತ್ವಗಳ ಅಡಿಪಾಯದ ಮೇಲೆ ರೂಪಿಸಲಾಗಿದೆ. ಈ ಮೂಲ ತತ್ವಗಳನ್ನು ಬದಲಿಸಲೂ ಆಗದು ಮತ್ತು ತಿದ್ದುಪಡಿ ಮಾಡಲೂ ಆಗದು".*

ಬದಲಾಯಿಸಿ, ಹಲವು ಸ್ವತಂತ್ರ ರಾಜ್ಯಗಳನ್ನು ರಚಿಸಬಹುದೇ?

4) ಈ ದೇಶದ ಧರ್ಮನಿರಪೇಕ್ಷ ಸ್ವರೂಪವನ್ನು ಬದಲಿಸಿ ಧರ್ಮಾಧಾರಿತ ಸ್ವರೂಪದ ಸರ್ಕಾರವನ್ನು ಸ್ಥಾಪಿಸಬಹುದೇ?
5) ಪ್ರಜೆಗಳಿಗೆ ಮತ್ತು ಅಲ್ಪಸಂಖ್ಯಾತರಿಗೆ ನೀಡಲಾಗಿರುವ ಹಕ್ಕುಗಳನ್ನು ರದ್ದುಗೊಳಿಸಬಹುದೇ?
6) ಈ ದೇಶವನ್ನು ಒಂದು ಕಲ್ಯಾಣ ರಾಷ್ಟ್ರವನ್ನಾಗಿ ನಿರ್ಮಾಣ ಮಾಡಬೇಕೆನ್ನುವ ಜನಾದೇಶವನ್ನು ರದ್ದುಗೊಳಿಸಬಹುದೆ?
7) ಸಂಸತ್ತಿನ ಎರಡೂ ಸದನಗಳ ಕಾರ್ಯಾವಧಿಯನ್ನು ಅನಿರ್ದಿಷ್ಟ ಕಾಲದವರೆಗೆ ಮುಂದುವರೆಸಬಹುದೇ?
8) ಸಂವಿಧಾನವನ್ನು ಕಾನೂನು ರೀತ್ಯಾ ಅಥವಾ ಇತರ ಯಾವುದೇ ರೀತಿಯಲ್ಲಿ ತಿದ್ದುಪಡಿ ಮಾಡದಂತೆ ಸಂವಿಧಾನವನ್ನು ನಿರ್ಬಂಧಿಸಬಹುದೇ?

ಅನುಚ್ಛೇದ 368ರಲ್ಲಿ ನೀಡಿರುವ ಅಧಿಕಾರವು ಈ ಮೇಲಿನ ಯಾವುದೇ ರೀತಿಯಲ್ಲಿ ಸಂವಿಧಾನವನ್ನು ತಿದ್ದುಪಡಿ ಮಾಡಲು ಸಂಸತ್ತಿಗೆ ಅಧಿಕಾರವನ್ನು ನೀಡುವುದಿಲ್ಲ. ಸಂವಿಧಾನ ಕರ್ತೃಗಳು ಅಳವಡಿಸಿರುವ ಕೆಲವೊಂದು ಗುಣಲಕ್ಷಣಗಳನ್ನು ಮುಂದೆಂದೂ ತಿದ್ದುಪಡಿ ಮೂಲಕ ಬದಲಾಯಿಸಬಾರದು ಅಥವಾ ತೆಗೆದುಹಾಕಬಾರದು ಎಂಬುದನ್ನು ಗಮನದಲ್ಲಿಟ್ಟುಕೊಂಡು ಸರ್ವೋಚ್ಚ ನ್ಯಾಯಾಲಯವು ಅಂತರ್ಗತವಾಗಿದ್ದ ಸಂವಿಧಾನದ ಮೂಲತತ್ವಗಳನ್ನು ಹೆಕ್ಕಿ ಪಟ್ಟಿಮಾಡಿ ಪ್ರಸ್ತುತಪಡಿಸಿದೆ. **'ಈ ಮೂಲ ತತ್ವಗಳನ್ನು ಬದಲಿಸಲೂ ಆಗದು ಮತ್ತು ತಿದ್ದುಪಡಿ ಮಾಡಲೂ ಆಗದು'** ಎಂದೂ ಸ್ಪಷ್ಟಪಡಿಸಿದೆ. ಈ ಪ್ರಕರಣದಲ್ಲಿ ಮತ್ತು ಆನಂತರದ ಅನೇಕ ಪ್ರಕರಣಗಳಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪುಗಳಲ್ಲಿ ಈ ಮುಂದಿನ ತತ್ವಗಳನ್ನು ಸಂವಿಧಾನದ ಮೂಲ ತತ್ವಗಳೆಂದು ಸ್ಪಷ್ಟಪಡಿಸಲಾಗಿದೆ.

1. ಸಂವಿಧಾನದ ಪರಮಾಧಿಕಾರ
2. ಭಾರತದ ಸಾರ್ವಭೌಮತ್ವ
3. ಸಂಸದೀಯ ಪ್ರಜಾಪ್ರಭುತ್ವ
4. ಕಲ್ಯಾಣ ರಾಷ್ಟ್ರದ ಪರಿಕಲ್ಪನೆ
5. ಧರ್ಮನಿರಪೇಕ್ಷತೆ ಮತ್ತು ಜಾತ್ಯತೀತತೆ
6. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಅಧಿಕಾರ ಪ್ರತ್ಯೇಕೀಕರಣ
7. ಒಕ್ಕೂಟದ ಸ್ವರೂಪ
8. ದೇಶದ ಐಕ್ಯತೆ ಮತ್ತು ಸಮಗ್ರತೆ
9. ನ್ಯಾಯಿಕ ಪುನರವಲೋಕನ (ಜುಡಿಷಿಯಲ್ ರಿವ್ಯು)
10. ವೈಯಕ್ತಿಕ ಘನತೆ ಮತ್ತು ಸ್ವಾತಂತ್ರ್ಯ
11. ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸುವುದು
12. ಸಾಮಾಜಿಕ ನ್ಯಾಯ
13. ಸ್ವಾಭಾವಿಕ ನ್ಯಾಯ
14. ಮೂಲಭೂತ ಹಕ್ಕುಗಳು



ಭಾರತ ಸಂವಿಧಾನದ ಮೊದಲ ಪ್ರತಿಯಲ್ಲಿ 80,000 ಶಬ್ದಗಳಿದ್ದವು. ಪ್ರಸ್ತುತ 101 ತಿದ್ದುಪಡಿಗಳ ನಂತರ ಸಂವಿಧಾನದಲ್ಲಿ ಒಟ್ಟು 1,46,385 ಶಬ್ದಗಳು, 22 ಭಾಗಗಳು, 448 ಆರ್ಟಿಕಲ್, 12 ಪರಿಚ್ಛೇದಗಳು ಇವೆ. ಸಂವಿಧಾನ ಬರೆಯಲು ತಗುಲಿದ ಒಟ್ಟು ಸಮಯ 2 ವರ್ಷ, 11 ತಿಂಗಳು, 17 ದಿನಗಳು. ಮೊದಲ ಕರಡು ಪ್ರತಿಯನ್ನು ದೇಶದ ಜನರ ಮುಂದೆ ಮಂಡಿಸಿ ಸಲಹೆ ಸೂಚನೆಗಳನ್ನು ಕೋರಿದಾಗ 7000ಕ್ಕೂ ಹೆಚ್ಚು ಸಲಹೆಗಳು ಬಂದಿದ್ದವು.

# ಭಾಗ 8

## ಸಂವಿಧಾನದ ತಿದ್ದುಪಡಿಗಳು

*"ಎಲ್ಲ ಎಚ್ಚರಗಳನ್ನು ಗಮನದಲ್ಲಿಟ್ಟುಕೊಂಡು ಕಳೆದ 68 ವರ್ಷಗಳಲ್ಲಿ ನಮ್ಮ ಸಂವಿಧಾನವನ್ನು 101 ಬಾರಿ ತಿದ್ದುಪಡಿ ಮಾಡಲಾಗಿದೆ".*

ನಿರ್ದಿಷ್ಟ ಕಾಲಮಾನ ಮತ್ತು ಆ ಸಂದರ್ಭದ ಸ್ಥಿತಿಗತಿಗಳನ್ನು ಗಮನದಲ್ಲಿರಿಸಿಕೊಂಡು ಸಂವಿಧಾನವನ್ನು ರಚಿಸಲಾಯಿತು. ಬದಲಾಗುತ್ತಿರುವ ಕಾಲಮಾನ, ಹೊಸ ಪರಿಸ್ಥಿತಿ, ಸ್ಥಿತಿಗತಿ ಹಾಗೂ ಸಮಸ್ಯೆಗಳಿಗೆ ಅನುಗುಣವಾಗಿ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿಗಳನ್ನು ತರಬೇಕಾಗುತ್ತದೆ. ತಿದ್ದುಪಡಿಗಳನ್ನು ಮಾಡುವಾಗ ಹಿಂದಿನ ಅನುಭವ, ಪ್ರಸ್ತುತ ಪರಿಷ್ಕರಣೆಯ ಅಗತ್ಯ, ಪ್ರಸ್ತುತತೆ, ಭವಿಷ್ಯದ ಪ್ರಗತಿ ಹಾಗೂ ನ್ಯಾಯದ ಪರವಾಗಿರುವ ತತ್ವಗಳನ್ನು ಗಮನದಲ್ಲಿ ಇರಿಸಿಕೊಳ್ಳಬೇಕು.

ಸಂವಿಧಾನ ತಿದ್ದುಪಡಿ ಮಾಡುವ ಬಗ್ಗೆ ಪಂಡಿತ್ ಜವಾಹರಲಾಲ್ ನೆಹರೂ ಅವರ ಅಭಿಪ್ರಾಯ ಹೀಗಿದೆ:

***'ಅತ್ಯಂತ ಕಠಿಣವಾದ ಮತ್ತು ಸ್ಥಿರವಾದ ಏನನ್ನಾದರೂ ಮಾಡಲು ಪ್ರಯತ್ನಿಸಿದರೆ ಅದು ದೇಶದ ಪ್ರಗತಿಯನ್ನು ಮತ್ತು ಸಮಾಜದ ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತದೆ. ಆದ್ದರಿಂದ ಸಂವಿಧಾನವನ್ನು ಅತಿ ಕಠಿಣವಾಗಿ ರೂಪಿಸಲು ಸಾಧ್ಯವಿಲ್ಲ. ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚದಲ್ಲಿ ಇಂದು ಪ್ರಸ್ತುತವೆನಿಸುವುದು ನಾಳೆ ಅಪ್ರಸ್ತುತವೆನಿಸುತ್ತದೆ. ಸಂವಿಧಾನದಲ್ಲಿ ತಿದ್ದುಪಡಿಗೆ ಅವಕಾಶ ನೀಡುವುದು ಎಂದರೆ ಕಾಲಕಾಲಕ್ಕೆ ಬದಲಾಗುತ್ತಿರುವ ಸಮಾಜದೊಂದಿಗೆ ಸಂವಿಧಾನವೂ ಬದಲಾಗಿ ಇಂದಿನ ಸಮಾಜಕ್ಕೆ ಪ್ರಸ್ತುತವಾದ ಸಂವಿಧಾನ ಎನಿಸಿಕೊಳ್ಳುವುದಾಗಿರುತ್ತದೆ.'***

ಈ ಎಲ್ಲ ಎಚ್ಚರಗಳನ್ನು ಗಮನದಲ್ಲಿಟ್ಟುಕೊಂಡು ಕಳೆದ 68 ವರ್ಷಗಳಲ್ಲಿ ನಮ್ಮ ಸಂವಿಧಾನವನ್ನು 101 ಬಾರಿ ತಿದ್ದುಪಡಿ ಮಾಡಲಾಗಿದೆ. ಇವುಗಳಲ್ಲಿ ಪ್ರಮುಖವಾದ ತಿದ್ದುಪಡಿಗಳೆಂದರೆ:

1. **1ನೇ ತಿದ್ದುಪಡಿ, 1951:** ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ವರ್ಗಗಳ ಅಭಿವೃದ್ಧಿಗಾಗಿ ವಿಶೇಷ ನಿಯಮಗಳನ್ನು ರಚಿಸುವ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಲಾಯಿತು.

2. **5ನೇ ತಿದ್ದುಪಡಿ, 1956:** ರಾಜ್ಯಗಳ ಏಕೀಕರಣ ಮಾಡಲಾಯಿತು.

3. **42ನೇ ತಿದ್ದುಪಡಿ, 1976:** ತುರ್ತುಪರಿಸ್ಥಿಯ ಸಂದರ್ಭದಲ್ಲಿ ಈ ಕೆಳಕಂಡ ಬದಲಾವಣೆಗಳನ್ನು ತರಲಾಯಿತು:

   ಅ. ಸಂವಿಧಾನದ ಪ್ರಸ್ತಾವನೆಗೆ ಸಮಾಜವಾದಿ, ಧರ್ಮನಿರಪೇಕ್ಷ /ಜಾತ್ಯತೀತ ಎಂಬ ಎರಡು ಹೊಸ ಪದಗಳನ್ನು ಹಾಗೂ ದೇಶದ ಏಕತೆಯ ಜೊತೆಗೆ ಸಮಗ್ರತೆಯನ್ನೂ ಸೇರಿಸಲಾಯಿತು.

   ಆ. ಮೂಲಭೂತ ಕರ್ತವ್ಯಗಳ ಪಟ್ಟಿಯನ್ನು ಸಂವಿಧಾನಕ್ಕೆ ಸೇರಿಸಲಾಯಿತು.

   ಇ. ಎಲ್ಲರಿಗೂ ಸಮಾನ ನ್ಯಾಯ ದೊರಕಿಸುವುದು ಹಾಗೂ ದುರ್ಬಲರಿಗೆ ಉಚಿತ ಕಾನೂನು ನೆರವು ನೀಡುವುದು.

   ಈ. ಉದ್ದಿಮೆಗಳ ವ್ಯವಸ್ಥಾಪನೆಯಲ್ಲಿ ಕಾರ್ಮಿಕರು ಪಾಲ್ಗೊಳ್ಳಲು ಅವಕಾಶ ನೀಡಲಾಯಿತು.

   ಉ. ಪರಿಸರ, ಅರಣ್ಯ ಮತ್ತು ವನ್ಯಜೀವಿಗಳು ಮೊದಲಾದ ಪ್ರಾಕೃತಿಕ ಸಂಪತ್ತಿನ ಸಂರಕ್ಷಣೆಗೆ ಆದ್ಯತೆ ನೀಡಲಾಯಿತು

   ಊ. ದೇಶದ ಯಾವುದೇ ಭಾಗದಲ್ಲಿ ತುರ್ತು ಪರಿಸ್ಥಿತಿಯನ್ನು ಘೋಷಿಸಲು ಅವಕಾಶ ನೀಡಲಾಯಿತು.

   ಋ. ಗಂಭೀರ ಪರಿಸ್ಥಿತಿಯಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಪಾಲಿಸಲು ರಾಜ್ಯಗಳಲ್ಲಿ ತನ್ನ ಸೇನೆಯನ್ನು ನಿಯೋಜಿಸುವ ಅಧಿಕಾರವನ್ನು ಕೇಂದ್ರ ಸರ್ಕಾರಕ್ಕೆ ನೀಡಲಾಯಿತು.

4. **44ನೇ ತಿದ್ದುಪಡಿ, 1978:**

   (i) 42ನೇ ತಿದ್ದುಪಡಿಯ ಕೆಲವು ಅತಿರೇಕಗಳನ್ನು ರದ್ದುಗೊಳಿಸಿ ಹಿಂದೆ ಇದ್ದ ಪರಿಸ್ಥಿತಿಯನ್ನು ಮರುಸ್ಥಾಪಿಸಲಾಯಿತು.

   (ii) ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದುಹಾಕಲಾಯಿತು.

   (iii) ಅನುಚ್ಛೇದ 20 ಮತ್ತು 21ರಲ್ಲಿ ತಿಳಿಯಪಡಿಸಿರುವ ಮೂಲಭೂತ ಹಕ್ಕುಗಳನ್ನು ರಾಷ್ಟ್ರೀಯ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿಯೂ

ರದ್ದುಗೊಳಿಸದಂತೆ ಮಾಡಲಾಯಿತು.

5. **52ನೇ ತಿದ್ದುಪಡಿ, 1985:** ಚುನಾಯಿತ ಪ್ರತಿನಿಧಿಗಳ ಪಕ್ಷಾಂತರವನ್ನು ಕಾನೂನು ಬಾಹಿರಗೊಳಿಸಿ, ಪಕ್ಷಾಂತರ ನಿಷೇದ ಕಾಯ್ದೆಯನ್ನು 10ನೇ ಅನುಸೂಚಿಗೆ ಸೇರಿಸಲಾಯಿತು.

6. **61ನೇ ತಿದ್ದುಪಡಿ, 1989:** ಮತದಾನದ ವಯಸ್ಸನ್ನು 21ರಿಂದ 18 ವರ್ಷಗಳಿಗೆ ಇಳಿಸಲಾಯಿತು.

7. **73ನೇ ತಿದ್ದುಪಡಿ, 1992:** ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ತರಲಾಯಿತು.

8. **86ನೇ ತಿದ್ದುಪಡಿ, 2002**: 6ರಿಂದ 14 ವರ್ಷ ವಯಸ್ಸಿನ ಮಕ್ಕಳಿಗೆ ಕಡ್ಡಾಯ ಶಿಕ್ಷಣದ ಹಕ್ಕು ನೀಡಲಾಯಿತು.

ಸಂವಿಧಾನ ರಚನೆಗೆ ಪೂರಕವಾಗಿ ಒಟ್ಟು 13 ಸಮಿತಿಗಳನ್ನು ರಚನೆಮಾಡಲಾಗಿತ್ತು. ಸಂವಿಧಾನದ ಮೂಲ ಕರಡನ್ನು ರಚನೆ ಮಾಡಿದ ಸಮಿತಿಯಲ್ಲಿ ಇದ್ದ ಸದಸ್ಯರು: ಡಾ. ಬಿ. ಆರ್. ಅಂಬೇಡ್ಕರ್, ಎನ್. ಗೋಪಾಲಸ್ವಾಮಿ ಅಯ್ಯಂಗಾರ್, ಕೃಷ್ಣಸ್ವಾಮಿ ಅಯ್ಯರ್, ಡಾ. ಕೆ. ಎಂ. ಮುನ್ಷಿ, ಸಯ್ಯದ್ ಮೊಹಮದ್ ಸಾದುಲ್ಲಾ, ಎನ್. ಮಾಧವ ರಾವ್ ಮತ್ತು ಟಿ. ಟಿ. ಕೃಷ್ಣಮಾಚಾರಿ

# ಭಾಗ ೯

## ಗಣರಾಜ್ಯ ಭಾರತದ ಸಾಧನೆಗಳು

ಸಂವಿಧಾನ ಜಾರಿಗೆ ಬಂದ ನಂತರ ಭಾರತ ಸಾಕಷ್ಟು ಅಭಿವೃದ್ಧಿ ಸಾಧಿಸಿದೆ. ಇತಿಹಾಸದ ಪುಟಗಳನ್ನು ತಿರುವಿ ಹಾಕಿದಾಗ ಸಾಮಾನ್ಯವಾಗಿ ಕಾಣುವುದು ಗುಪ್ತರ ಭಾರತ, ಮೌರ್ಯರ ಭಾರತ, ಹರ್ಷವರ್ಧನರ ಭಾರತ, ಕಾನಿಷ್ಕರ ಭಾರತ, ಮೊಘಲರ ಭಾರತ, ಫ್ರೆಂಚರ ಭಾರತ ಮತ್ತು ಬ್ರಿಟಿಷರ ಭಾರತ ಎಂದು ಹಂಚಿಹೋದ ಹಲವು ಭಾರತಗಳು. ಯಾಕೆಂದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಇಡೀ ಭೂಪ್ರದೇಶ ಹಿಂದೆಂದೂ ಒಂದೇ ರಾಜಕೀಯ ಆಡಳಿತಕ್ಕೆ ಒಳಪಟ್ಟಿರಲಿಲ್ಲ. 1947ರಲ್ಲಿ ಸ್ವಾತಂತ್ರ್ಯ ಬಂದ ಸಮಯದಲ್ಲಿ ಭಾರತದಲ್ಲಿ ಸುಮಾರು 600 ಅರಸೊತ್ತಿಗೆಗಳಿದ್ದವು. ಅವುಗಳನ್ನೆಲ್ಲಾ ರದ್ದುಗೊಳಿಸಿ ಇಡೀ ದೇಶವನ್ನು, ಅಂದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಒಂದೇ ರಾಜಕೀಯ ಆಡಳಿತಕ್ಕೆ ಒಳಪಡಿಸಲಾಯಿತು. ಒಂದೇ ಸಂವಿಧಾನ, ಒಂದೇ ಗಡಿ, ಒಂದೇ ರಾಷ್ಟ್ರಗೀತೆ, ಒಂದೇ ರಾಷ್ಟ್ರ ಧ್ವಜ, ಒಂದೇ ರಾಷ್ಟ್ರ ಚಿನ್ಹೆ. ಇದು ನಿಜವಾದ ಭಾರತ ರಾಷ್ಟ್ರ ನಿರ್ಮಾಣ. ಇದು ನಿಜಕ್ಕೂ ಮಹತ್ತರವಾದ ಸಾಧನೆ.

ಪಾಳೆಗಾರಿ ಪದ್ಧತಿಯನ್ನು ರದ್ದುಪಡಿಸಿ ಸ್ವತಂತ್ರವಾದ ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವೆಂಬ ಸಂಸ್ಥೆಗಳನ್ನು ಸ್ಥಾಪಿಸಿದ್ದೇವೆ. ಕೇಂದ್ರದಲ್ಲಿ ಲೋಕಸಭೆ–ರಾಜ್ಯಸಭೆ, ರಾಜ್ಯಮಟ್ಟದಲ್ಲಿ ವಿಧಾನ ಸಭೆ–ವಿಧಾನ ಪರಿಷತ್ತು ಎಂಬ ಶಾಸಕಾಂಗ ಸಂಸ್ಥೆಗಳನ್ನೂ, ರಾಷ್ಟ್ರಾಧ್ಯಕ್ಷರು, ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ

**"1947ರಲ್ಲಿ ಸ್ವಾತಂತ್ರ್ಯ ಬಂದ ಸಮಯದಲ್ಲಿ ಭಾರತದಲ್ಲಿ ಸುಮಾರು 600 ಅರಸೊತ್ತಿಗೆಗಳಿದ್ದವು. ಅವುಗಳನ್ನೆಲ್ಲಾ ರದ್ದುಗೊಳಿಸಿ ಇಡೀ ದೇಶವನ್ನು, ಅಂದರೆ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಒಂದೇ ರಾಜಕೀಯ ಆಡಳಿತಕ್ಕೆ ಒಳಪಡಿಸಲಾಯಿತು".**

ಮತ್ತು ಗ್ರಾಮ ಪಂಚಾಯಿತಿಯೆಂಬ ಕಾರ್ಯಾಂಗದ ಸಂಸ್ಥೆಗಳನ್ನು ಮತ್ತು ಸರ್ವೋಚ್ಚ ನ್ಯಾಯಾಲಯ, ಉಚ್ಚ ನ್ಯಾಯಾಲಯಗಳು, ಜಿಲ್ಲಾ ನ್ಯಾಯಾಲಯಗಳು ಮತ್ತು ತಾಲ್ಲೂಕು ನ್ಯಾಯಾಲಯಗಳೆಂಬ ನ್ಯಾಯಾಂಗ ಸಂಸ್ಥೆಗಳನ್ನು ಕಟ್ಟಿದ್ದೇವೆ. ಸುಧಾರಣೆಗಳನ್ನು ತಂದಿದ್ದೇವೆ.

ಭಾರತ ದೇಶದಲ್ಲಿ ವಿಭಿನ್ನ ಧರ್ಮಗಳು, ಜಾತಿಗಳು, ಭಾಷೆಗಳು, ಸಂಸ್ಕೃತಿ, ಉಪಸಂಸ್ಕೃತಿ, ಆಚಾರ, ವಿಚಾರಗಳು, ಹಲವು ರಾಜಕೀಯ ಪಕ್ಷಗಳು, ವಿಭಿನ್ನ ಅಭಿಪ್ರಾಯಗಳು, ರಾಜಕೀಯ ಸಿದ್ಧಾಂತಗಳಿದ್ದರೂ ಕೂಡ, ನಮ್ಮ ಸಂವಿಧಾನದ ಪ್ರಕಾರ ಎಲ್ಲರನ್ನು ಒಳಗೊಳ್ಳುವ ಪ್ರಯತ್ನ ಮಾಡುತ್ತಾ ಸರ್ಕಾರ ರಚಿಸಿಕೊಂಡು, ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಿಕೊಂಡು, ಸರ್ಕಾರಗಳನ್ನು ಶಾಂತಿಯುತವಾಗಿ ಬದಲಾಯಿಸಿಕೊಂಡು ಮುಂದುವರೆದಿದ್ದೇವೆ.

1947ರಲ್ಲಿ ಶೇ.20ಕ್ಕಿಂತ ಕಡಿಮೆ ಇದ್ದ ಸಾಕ್ಷರತೆಯ ಪ್ರಮಾಣವನ್ನು ಇಂದು ಶೇ.78ರಷ್ಟಕ್ಕೆ ಹೆಚ್ಚಿಸಿದ್ದೇವೆ. ಸ್ವಾತಂತ್ರ್ಯ ಬಂದಾಗ 50 ದಶಲಕ್ಷ ಟನ್ನುಗಳಷ್ಟಿದ್ದ ವಾರ್ಷಿಕ ಕೃಷಿ ಉತ್ಪನ್ನವನ್ನು ಇಂದು 280 ದಶಲಕ್ಷ ಟನ್ನುಗಳಿಗೆ ಏರಿಸಿದ್ದೇವೆ. ಸ್ವಾತಂತ್ರ್ಯ ಬಂದಾಗ ಸರಾಸರಿ 32 ವರ್ಷ ಇದ್ದ ಜನರ ಆಯುಷ್ಯದ ಪ್ರಮಾಣವನ್ನು ಇಂದು ಸರಿಸುಮಾರು 69 ವರ್ಷಕ್ಕೆ ಏರಿಸಿದ್ದೇವೆ. ಉದ್ಯೋಗ, ವಸತಿ, ಆರೋಗ್ಯ, ಕುಡಿಯುವ ನೀರು, ರಸ್ತೆ, ದೀಪ, ಸಾರಿಗೆ ಇತ್ಯಾದಿಯಾಗಿ ಮೂಲಭೂತ ಸವಲತ್ತುಗಳನ್ನು ಒದಗಿಸಲಾಗಿದೆ. ಬಡತನ, ಹಸಿವು, ಬರಗಾಲ, ಪ್ರವಾಹಗಳು ಮತ್ತು ಸಾಂಕ್ರಾಮಿಕ ರೋಗಗಳನ್ನು ಸಾಕಷ್ಟು ಮಟ್ಟಿಗೆ ನಿಯಂತ್ರಿಸಲಾಗಿದೆ. ಖಗೋಳ ವಿಜ್ಞಾನ, ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಅಣುಶಕ್ತಿ, ರಕ್ಷಣಾ ವ್ಯವಸ್ಥೆ ಹೀಗೆ ಹಲವು ಕ್ಷೇತ್ರಗಳಲ್ಲಿ ಭಾರತ ವಿಶ್ವದ ಮೊದಲ ಹತ್ತು ದೇಶಗಳಲ್ಲಿ ಒಂದಾಗಿದೆ.

ನಮ್ಮ ಸಂವಿಧಾನ ಕೊಡಮಾಡಿರುವ ಹಲವು ಕಾನೂನುಗಳನ್ನು ಬಳಸಿಕೊಂಡು ಜಾರಿಗೆ ತಂದ ಅನೇಕ ಕಾರ್ಯಕ್ರಮಗಳು ಮತ್ತು ಯೋಜನೆಗಳ ಪರಿಣಾಮವಾಗಿ ಮಹಿಳೆಯರು, ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರ ಸ್ಥಿತಿಗತಿಗಳಲ್ಲಿ ಸುಧಾರಣೆಯನ್ನು ಹಾಗೂ ಅಭಿವೃದ್ಧಿಯನ್ನು ಕಾಣುತ್ತೇವೆ. ಈ ವರ್ಗಗಳ ಜನರು ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗಕ್ಕೆ ಪ್ರವೇಶಿಸಿ ತಮ್ಮದೇ ಕೊಡುಗೆಯನ್ನು ನೀಡಿದ್ದಾರೆ. ಶಿಕ್ಷಣ, ವಿಜ್ಞಾನ, ವೈದ್ಯಕೀಯ, ವಕೀಲಿವೃತ್ತಿ, ಪತ್ರಿಕೋದ್ಯಮ, ಕ್ರೀಡಾ ಕ್ಷೇತ್ರ ಇತ್ಯಾದಿಗಳಲ್ಲಿ ಹೆಸರು ಮಾಡಿದ್ದಾರೆ.

ಇಷ್ಟೆಲ್ಲ ಸಾಧನೆಗಳಿದ್ದರೂ ಸಹ, ಮೂಲಭೂತ ಸಮಸ್ಯೆಗಳನ್ನು ಸಂಪೂರ್ಣವಾಗಿ ಪರಿಹರಿಸಲು ಸಾಧ್ಯವಾಗಿಲ್ಲ. ಇನ್ನೂ ಒಂದಷ್ಟು ಅನಕ್ಷರಸ್ಥರು, ನಿರುದ್ಯೋಗಿಗಳು, ವಸತಿಹೀನರು, ಭಿಕ್ಷುಕರು ನಮ್ಮ ಮುಂದೆ ಇದ್ದಾರೆ. ಎಲ್ಲರಿಗೂ ಶುದ್ಧವಾದ ಕುಡಿಯುವ ನೀರು, ಆರೋಗ್ಯದ ಸೌಲಭ್ಯ, ಎಲ್ಲಾ ಹಳ್ಳಿಗಳಿಗೂ ರಸ್ತೆ, ವಿದ್ಯುತ್ ದೀಪ, ಇತ್ಯಾದಿಗಳನ್ನು ಒದಗಿಸಲು ಸಂಪೂರ್ಣವಾಗಿ ಸಾಧ್ಯವಾಗಿಲ್ಲ. ಕೃಷಿ ಬಿಕ್ಕಟ್ಟು ಮತ್ತು ಕೈಗಾರಿಕಾ ಬಿಕ್ಕಟ್ಟು ದೇಶವನ್ನು ಕಾಡುತ್ತಿದೆ. ನಾವೆಲ್ಲರೂ ಇನ್ನೂ ಸ್ವಲ್ಪ ಹೆಚ್ಚು ಕೆಲಸ ಮಾಡಿದರೆ, ಒಗ್ಗಟ್ಟಾಗಿ ಕೆಲಸ ಮಾಡಿದರೆ, ನಮ್ಮ ನೀತಿಯಲ್ಲಿ ಸ್ವಲ್ಪ ಬದಲಾವಣೆಯನ್ನು ತಂದುಕೊಂಡು, ಆಡಳಿತದಲ್ಲಿ ಸೂಕ್ತ ಬದಲಾವಣೆಗಳನ್ನು ಮಾಡಿಕೊಂಡು, ಆಧುನಿಕ ವಿಜ್ಞಾನದ ಸಾಧನೆಗಳನ್ನು ಬಳಸಿಕೊಂಡರೆ ಕೆಲವೇ ವರ್ಷಗಳಲ್ಲಿ ನಮ್ಮ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು.

# ಭಾಗ 10

## ನಮ್ಮ ಮುಂದಿರುವ ಸವಾಲುಗಳು

ಇಷ್ಟೆಲ್ಲ ಸಾಧನೆಗಳು ಮತ್ತು ಅಭಿವೃದ್ಧಿಯ ನಂತರ, ಸ್ವಾತಂತ್ರ್ಯ ಮತ್ತು ಸಮಗ್ರತೆಯ ನಂತರ, ಇಂದು ಸಂವಿಧಾನವೇ ಹಲವು ಸವಾಲುಗಳನ್ನು ಎದುರಿಸುತ್ತಿದೆ. ಈ ಸವಾಲುಗಳನ್ನು ಹಿಮ್ಮೆಟ್ಟಿಸದೇ ಹೋದರೆ ನಮ್ಮ ಸಂವಿಧಾನವನ್ನು ಹಾಗೂ ಅದು ನೀಡಿರುವ ಪ್ರಜಾಪ್ರಭುತ್ವವಾದಿ ಆಡಳಿತ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಸಾಧ್ಯವಿಲ್ಲ. ಸಂವಿಧಾನವನ್ನು ಉಳಿಸಿಕೊಳ್ಳದಿದ್ದರೆ ಪ್ರಜಾಪ್ರಭುತ್ವ ಹೋಗಿ ಅರಾಜಕತೆ ಬರುತ್ತದೆ. ಹಾಗಾಗಿ ಇಂದು ಸಂವಿಧಾನದ ಮುಂದಿರುವ ಹಾಗೂ ದೇಶದ ಮುಂದಿರುವ ಸವಾಲುಗಳನ್ನು ಅರಿತುಕೊಳ್ಳುವುದು ಅತ್ಯಗತ್ಯವಾಗಿದೆ.

### 1. ಕ್ಷೀಣಿಸುತ್ತಿರುವ ಪ್ರಜಾಪ್ರಭುತ್ವ

ಭಾರತದ ಸಂವಿಧಾನವು ಪಾಳೆಗಾರಿ ಪದ್ಧತಿಯನ್ನು ರದ್ದುಪಡಿಸಿದೆ. ಪ್ರಜಾಪ್ರಭುತ್ವವಾದಿ ರಾಜಕೀಯ ಮತ್ತು ಆಡಳಿತ ವ್ಯವಸ್ಥೆಯನ್ನು ಸ್ಥಾಪಿಸಲು ಅನುವು ಮಾಡಲಾಗಿದೆ. ಅದರಂತೆ 1952ರಿಂದ ಇಲ್ಲಿಯವರೆಗೆ 16 ಲೋಕಸಭೆ ಚುನಾವಣೆಗಳು ನಡೆದಿವೆ. ಕಾಲಕಾಲಕ್ಕೆ ಚುನಾವಣೆಗಳನ್ನು ನಡೆಸಿ, ಮತ ಚಲಾಯಿಸಿ, ಮತದಾರರು ತಮಗೆ ಬೇಕಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ, ಸರ್ಕಾರಗಳನ್ನು ರಚಿಸುತ್ತಾ ಬಂದಿದ್ದಾರೆ. ಆದರೆ ಇಂದು ಗ್ರಾಮ ಪಂಚಾಯಿತಿಯಿಂದ ಹಿಡಿದು ಸಂಸತ್ತಿನವರೆಗೆ ನಡೆಯುವ ಚುನಾವಣೆಗಳು ಧರ್ಮ, ಜಾತಿ, ಹಣ ಮತ್ತು ಅಪರಾಧಿಕರಣದಂತಹ ಅನಿಷ್ಟಗಳಿಗೆ ಬಲಿಯಾಗಿವೆ. ಹೆಚ್ಚು ಹಣ ಹೊಂದಿರುವ ಮತ್ತು

*'ಸಂವಿಧಾನ ಎಷ್ಟೇ ಉತ್ತಮವಾಗಿರಲಿ, ಅದನ್ನು ನಿರ್ವಹಿಸುವವರು ಕೆಟ್ಟವರಾಗಿದ್ದಾರೆ ಅದೂ ಕೆಟ್ಟದಾಗಿ ಬಿಡುವುದು ಖಂಡಿತ' ಎಂಬ ಡಾ. ಅಂಬೇಡ್ಕರ್‌ರವರ ಮಾತುಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.*

ಹೆಚ್ಚು ಕ್ರಿಮಿನಲ್ ಕೇಸ್ ಘೋಷಿಸಿಕೊಂಡಿರುವ ಅಭ್ಯರ್ಥಿಗಳು ಹೆಚ್ಚು ಮತಗಳನ್ನು ಪಡೆದು ಗೆಲವು ಸಾಧಿಸುತ್ತಿದ್ದು, ನಿಷ್ಠಾವಂತರು ಠೇವಣಿ ಕಳೆದುಕೊಳ್ಳುತ್ತಿದ್ದಾರೆ. ಎಲ್ಲ ಸಂಸ್ಥೆಗಳಲ್ಲಿ ಹಣ ಬಲ ಮತ್ತು ಅಪರಾಧದ ಹಿನ್ನೆಲೆ ಇರುವವರು ಚುನಾಯಿತರಾಗುತ್ತಿರುವ ಪ್ರಮಾಣ ಗಣನೀಯವಾಗಿ ಹೆಚ್ಚಾಗುತ್ತಿದೆ. 14, 15 ಮತ್ತು 16ನೇ ಲೋಕಸಭಾ ಚುನಾವಣೆಗಳಲ್ಲಿ ಗೆದ್ದ ಅಭ್ಯರ್ಥಿಗಳು ಘೋಷಿಸಿಕೊಂಡಿರುವ ಕ್ರಿಮಿನಲ್ ಪ್ರಕರಣಗಳು, ಹೊಂದಿರುವ ಸಂಪತ್ತು ಅಪಾರವಾಗಿದ್ದು, ಆತಂಕಕಾರಿಯಾಗಿದೆ.

| **ಚುನಾವಣೆ ವರ್ಷ** | **ಎಷ್ಟನೇ ಲೋಕಸಭೆ** | **ಕ್ರಿಮಿನಲ್ ಕೇಸ್ ಹೊಂದಿರುವವರು** | **ಕೋಟ್ಯಾಧಿಪತಿಗಳು** | **ರಾಜಕೀಯ ಕುಟುಂಬದ ಹಿನ್ನಲೆಯವರು** |
|---|---|---|---|---|
| 2004 | 14ನೇ | 24% | 30% | 45% |
| 2009 | 15ನೇ | 30% | 58% | 50% |
| 2014 | 16ನೇ | 34% | 82% | 52% |

ರಾಜಕಾರಣದಲ್ಲಿ ವಿದ್ಯಾವಂತರ, ನಿಷ್ಠರ, ಪರಿಣತರ, ಯೋಗ್ಯರ ಸಂಖ್ಯೆ ದಿನೇ ದಿನೇ ಕಡಿಮೆಯಾಗುತ್ತಿದೆ. ಭ್ರಷ್ಟರು, ಕ್ರಿಮಿನಲ್ ಕೇಸು ಹಾಕಿಸಿಕೊಂಡವರು, ರಾಜಕಾರಣಿಗಳ ಮಕ್ಕಳು, ಅವರ ಬಂಧುಗಳು, ಉದ್ಯಮಿಗಳು, ರಿಯಲ್ ಎಸ್ಟೇಟ್ ವ್ಯಾಪಾರಿಗಳು ಹೆಚ್ಚಿನ ಸಂಖ್ಯೆಯಲ್ಲಿ ಚುನಾವಣಾ ಕಣಕ್ಕೆ ಇಳಿಯುತ್ತಿದ್ದಾರೆ. ಇದರ ಪರಿಣಾಮ ನಮ್ಮ ಲೋಕಸಭೆ ಮತ್ತು ರಾಜ್ಯಸಭೆಯ ನಡವಳಿಕೆಗಳ ಮೇಲೆ ಪ್ರಭಾವ ಬೀರಿದೆ. ಹೊಸದಾಗಿ ಮಂಡಿಸುವ ಶಾಸನಗಳು ಚರ್ಚೆಯೇ ಇಲ್ಲದೆ ಅಂಗೀಕಾರವಾಗುತ್ತಿವೆ. ಅಸಹನೆ, ವಿಭಜನಶೀಲತೆ, ಭ್ರಷ್ಟಾಚಾರ, ಘರ್ಷಣೆಗಳು ಹಾಗೂ ಭಿನ್ನಮತಕ್ಕೆ ಅಗೌರವ ತೋರುವುದು ಸದನದ ಕಲಾಪಗಳ ದಿನನಿತ್ಯ ಸಂಗತಿಯಾಗಿದೆ. ಈ ಸಂಸ್ಥೆಗಳಲ್ಲಿ ಕಿರುಚಾಟ, ಕೂಗಾಟ, ಗದ್ದಲ, ಪ್ರತಿಭಟನೆ ಇತ್ಯಾದಿಗಳು ಆವರಿಸಿಕೊಂಡು ಜನಸಾಮಾನ್ಯರಿಗೆ, ಸಮಾಜಕ್ಕೆ ಮತ್ತು ದೇಶಕ್ಕೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚೆಗಳು ನಡೆಯುತ್ತಿಲ್ಲ. ಇಡೀ ಅಧಿವೇಶನದ ಸಮಯ ಯಾವುದೇ ಚರ್ಚೆಗಳು ನಡೆಯದೆ ಜನಸಾಮಾನ್ಯರು ಕಟ್ಟುವ ನೂರಾರು ಕೋಟಿ ರೂಪಾಯಿಗಳಷ್ಟು ತೆರಿಗೆ ಹಣ ವ್ಯರ್ಥವಾಗಿ ಪೋಲಾಗುತ್ತಿದೆ.

ಚುನಾವಣೆ ಸಂದರ್ಭದಲ್ಲಿ ಎಲ್ಲಾ ರಾಜಕೀಯ ಪಕ್ಷಗಳು ಪ್ರಣಾಳಿಕೆಗಳನ್ನು ಬಿಡುಗಡೆ ಮಾಡುತ್ತಿವೆ. ಎಲ್ಲರ ಪ್ರಣಾಳಿಕೆಗಳಲ್ಲೂ ಬಡವರು, ರೈತರು, ಕಾರ್ಮಿಕರು ಹಾಗೂ ಜನಸಾಮಾನ್ಯರ ಅಭಿವೃದ್ಧಿಯ ಬಗ್ಗೆ ಅಪಾರ ಭರವಸೆಗಳನ್ನು ನೀಡಲಾಗುತ್ತದೆ. ಬಡತನ ನಿವಾರಣೆ, ಸಂಪೂರ್ಣ ಸಾಕ್ಷರತೆ, ಮಹಿಳೆಯರು, ಪರಿಶಿಷ್ಟ ಜಾತಿ, ಪಂಗಡ ಮತ್ತು ಹಿಂದುಳಿದವರ ಕಲ್ಯಾಣ, ಇತ್ಯಾದಿ ಘೋಷಣೆಗಳು ಮೊಳಗುತ್ತಲೇ ಬಂದಿವೆ. ಕೋಟಿಗಟ್ಟಲೆ ಉದ್ಯೋಗದ ಸೃಷ್ಟಿ ಮತ್ತು ಎಲ್ಲರ ಕಿಸೆಗೆ ಲಕ್ಷಗಟ್ಟಲೆ ರೂಪಾಯಿಗಳು ನೀಡುತ್ತೇವೆಂದು ಹೇಳುತ್ತಾರೆ. ಚುನಾವಣೆಯ ನಂತರ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷಗಳು ಪ್ರಣಾಳಿಕೆಗಳಲ್ಲಿ ನೀಡಿರುವ ಬಹುಪಾಲು ಆಶ್ವಾಸನೆಗಳನ್ನು ಮರೆಯುತ್ತವೆ. ನೀಡಿದ ಭರವಸೆಗಳನ್ನು ಜಾರಿ ಮಾಡುವ ಕನಿಷ್ಠ ಪ್ರಯತ್ನವನ್ನೂ ಮಾಡುವುದಿಲ್ಲ. ಹೀಗಾಗಿ ಚುನಾವಣಾ ಪ್ರಣಾಳಿಕೆಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿವೆ.

ಚುನಾಯಿತ ಪ್ರತಿನಿಧಿಗಳು ಸಂವಿಧಾನಾತ್ಮಕ ಸ್ಥಾನಗಳ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರೂ ಸಂವಿಧಾನದ ಮೇಲೆ ಅವರಲ್ಲಿ ಮೊದಲಿನಂತೆ ವಿಶ್ವಾಸ ಕಾಣುತ್ತಿಲ್ಲ. ಚುನಾಯಿತ ಸದಸ್ಯರಲ್ಲಿ ಕಾನೂನು ಮತ್ತು ಸಂವಿಧಾನದ ಬಗೆಗಿನ ತಿಳುವಳಿಕೆಯೂ ಇರುವುದಿಲ್ಲ. ಅವಕಾಶವಾದಿತನ ಹೆಚ್ಚಾಗುತ್ತಿದ್ದು, ಅನುಕೂಲಕ್ಕೆ ತಕ್ಕಂತೆ ನಿಲುವುಗಳನ್ನು ಬದಲಾಯಿಸುತ್ತಾರೆ, ಪಕ್ಷ ಬದಲಾಯಿಸುತ್ತಾರೆ. ನೈತಿಕ ಮೌಲ್ಯಗಳನ್ನು ಬದಿಗೊತ್ತಿ ನಡೆಯುವ ಈ ಸ್ಥಾನಾಂತರಗಳು ಅಪವಿತ್ರ ಹೊಂದಾಣಿಕೆಗಳಾಗಿರುತ್ತವೆ. ಇದರಿಂದ ಆಡಳಿತಕ್ಕಾಗಲಿ, ಮತ ನೀಡಿದ ಪ್ರಜೆಗಳಿಗಾಗಲಿ, ಪ್ರಜಾಪ್ರಭುತ್ವ ವ್ಯವಸ್ಥೆಗಾಗಲಿ ಯಾವುದೇ ಪ್ರಯೋಜನ ಆಗುವುದಿಲ್ಲ. ಬದಲಿಗೆ, ಇಂತಹ ಕ್ರಮಗಳು ಪ್ರಜಾಪ್ರಭುತ್ವೀಯ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಿವೆ.

ವಿಧಾನಸಭೆ ಅಥವಾ ಲೋಕಸಭೆ ಕ್ಷೇತ್ರದ ಪರಿಚಯವೇ ಇಲ್ಲದ ಎಷ್ಟೋ ಜನ ತಮ್ಮ ಹಣ ಬಲ ಮತ್ತು ತೋಳ್ಬಲಗಳಿಂದ ಚುನಾವಣೆಗಳನ್ನು ಗೆಲ್ಲುತ್ತಿರುವುದನ್ನು ಕಾಣುತ್ತಿದ್ದೇವೆ. ತಮ್ಮ ಕ್ಷೇತ್ರದ ಜನರ ಹಾಗೂ ಸಮಸ್ಯೆಗಳ ಬಗ್ಗೆ ತಿಳುವಳಿಕೆ ಇಲ್ಲದವರು ಹಣ ನೀಡಿ ಮತಗಳಿಸುತ್ತಾ, ಮತದಾರರನ್ನು ಭ್ರಷ್ಟರನ್ನಾಗಿ ಮಾಡಿ, ಜಾತಿವಾದ ಸೃಷ್ಟಿಸಿ, ರೌಡಿಸಂ ನಡೆಸಿ, ಚುನಾವಣೆಗಳಲ್ಲಿ ಗೆದ್ದು ಬರುತ್ತಿದ್ದಾರೆ.

ಈ ವೈಫಲ್ಯಗಳು ಹೇಗೆ ಆದವು? ನಾವು ಎಲ್ಲಿ ಸೋತೆವು? ಅತ್ಯುತ್ತಮ ಸಂವಿಧಾನ ಇದ್ದರೂ ಅದನ್ನು ಅರಿತು, ಗೌರವಿಸುತ್ತಾ, ಅದನ್ನು ಜಾರಿಗೆ ತರುವ ಪ್ರತಿನಿಧಿಗಳು ಇಲ್ಲದಿದ್ದರೆ ಹಾಗೂ ಸಂವಿಧಾನವನ್ನು ಅನುಸರಿಸಿ ಆಡಳಿತ ನಡೆಸಿ ಎಂದು ಆದೇಶಿಸುವ ಮತದಾರರು ಇಲ್ಲದಿದ್ದರೆ ಸಂವಿಧಾನ ತನ್ನಷ್ಟಕ್ಕೆ ಏನೂ ಮಾಡಲು ಬರುವುದಿಲ್ಲ. 'ಸಂವಿಧಾನ ಎಷ್ಟೇ ಉತ್ತಮವಾಗಿರಲಿ, ಅದನ್ನು ನಿರ್ವಹಿಸುವವರು ಕೆಟ್ಟವರಾಗಿದ್ದಾರೆ ಅದೂ ಕೆಟ್ಟದಾಗಿ ಬಿಡುವುದು ಖಂಡಿತ' ಎಂದು ಕರಡು ಸಂವಿಧಾನವನ್ನು ಅಂಗೀಕಾರಕ್ಕೆ ಮಂಡಿಸುತ್ತಾ ಡಾ. ಅಂಬೇಡ್ಕರ್‌ರವರು ಹೇಳಿದ ಎಚ್ಚರಿಕೆಯ ಮಾತುಗಳನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕು.

## 2. ಹಕ್ಕುಗಳ ದಮನ:

'ಅಭಿವ್ಯಕ್ತಿ ಸ್ವಾತಂತ್ರವು ಪ್ರಜಾತಾಂತ್ರಿಕ ವ್ಯವಸ್ಥೆಯ ತಳಹದಿ' ಎಂಬ ಸ್ಪಷ್ಟ ಕಲ್ಪನೆ ನಮ್ಮ ಸಂವಿಧಾನ ರಚನಕಾರರಿಗೆ ಇತ್ತು. ಸಂವಿಧಾನದ ಅನುಚ್ಛೇದ 19(1)(ಎ) ಎಲ್ಲ ಪ್ರಜೆಗಳಿಗೆ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡುತ್ತದೆ. ಈ ಅನುಚ್ಛೇದದಲ್ಲಿ ನೀಡಿರುವ ವಾಕ್ ಸ್ವಾತಂತ್ರ್ಯವು ಜನರು ಮುಕ್ತವಾಗಿ, ಸ್ವತಂತ್ರವಾಗಿ ವಿಭಿನ್ನ ಅಭಿಪ್ರಾಯಗಳನ್ನು ಹೊಂದಲು ಸ್ವಾತಂತ್ರ್ಯವನ್ನು ನೀಡುತ್ತದೆ. ಈ ವಾಕ್ ಸ್ವಾತಂತ್ರ್ಯವು ಸರ್ವ ಸ್ವತಂತ್ರವಾದದ್ದು. ಹಿಂದಿನ ಕಾಲದ ಕಟ್ಟಳೆಗಳಾಗಲಿ, ವರ್ತಮಾನದ ಕೋಳಗಳಾಗಲಿ ಇದಕ್ಕೆ ಇರಬಾರದು. ಮತ್ತೊಬ್ಬರ ಅಭಿವ್ಯಕ್ತಿ ಸ್ವಾತಂತ್ರವನ್ನು ಗೌರವಿಸುವುದು ಮತ್ತು ರಕ್ಷಿಸುವುದು ಪ್ರಜಾಪ್ರಭುತ್ವದ ಮೂಲ ಲಕ್ಷಣ. ಯಾವುದೇ ಮೂಲಭೂತ ಹಕ್ಕುಗಳ ಹತ್ತಿಕ್ಕುವಿಕೆಯನ್ನು ನಮ್ಮ ಸಂವಿಧಾನವು ಮಾನ್ಯ ಮಾಡುವುದಿಲ್ಲ. ಹಾಗಿರುವಾಗ ಇತ್ತೀಚೆಗೆ ವ್ಯಕ್ತವಾಗುತ್ತಿರುವ ವಿಭಿನ್ನ ಅಭಿಪ್ರಾಯಗಳು, ವಿಭಿನ್ನ ಚಿಂತನೆಗಳ ಬಗೆಗಿನ ಅಸಹನೆ ಪ್ರಜಾತಾಂತ್ರಿಕ ವ್ಯವಸ್ಥೆಗೆ ಅಪಾಯಕಾರಿಯಾಗಿದೆ. ಈ ನಿಟ್ಟಿನಲ್ಲಿ ಫ್ರಾನ್ಸ್‌ನ ಚಿಂತಕ ವಾಲ್ಟೇರ್ ಹೇಳಿರುವ ಮಾತು ಗಮನಾರ್ಹ– **'ನಿನ್ನ ಯಾವ**

**ಮಾತನ್ನೂ ನಾನು ಒಪ್ಪುವುದಿಲ್ಲ. ಆದರೆ ನಿನ್ನ ಅಭಿಪ್ರಾಯವನ್ನು ವ್ಯಕ್ತಪಡಿಸುವ ಹಕ್ಕನ್ನು ನನ್ನ ಉಸಿರಿರುವವರೆಗೂ ಸಮರ್ಥಿಸುತ್ತೇನೆ'.**

ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ವ್ಯಕ್ತಿ ಸ್ವಾತಂತ್ರ್ಯವು ಮೊದಲನೆಯ ಹೆಜ್ಜೆ. ಹಾಗಾಗಿ ಯಾವ ಸಂಪ್ರದಾಯಗಳನ್ನು ವಿರೋಧಿಸಿದರೂ ಸರಿಯೇ ವ್ಯಕ್ತಿಯು ಸತ್ಯಕ್ಕಾಗಿ ನಡೆಸುವ ಹುಡುಕಾಟದ ಸ್ವಾತಂತ್ರ್ಯ ಮೊಟಕುಗೊಳ್ಳಬಾರದು. ಎಲ್ಲಾ ಪ್ರಮುಖ ವಿಷಯಗಳ ಬಗ್ಗೆಯೂ ಮುಕ್ತ ಚರ್ಚೆ ನಡೆಯಬೇಕು. ಪ್ರಗತಿ ಸಾಧ್ಯವಾಗುವುದು ಪರಂಪರೆಯನ್ನು ಪರಾಮರ್ಶಿಸದೆ ಒಪ್ಪಿಕೊಳ್ಳುವುದರ ಮೂಲಕವಲ್ಲ; ಬದಲಾಗಿ ಜನರ ಅಭಿಪ್ರಾಯಗಳು ಬದಲಾಗುವಷ್ಟರ ಮಟ್ಟಿಗೆ ಹೊಸ ವಿಷಯಗಳನ್ನು, ವೈಜ್ಞಾನಿಕ ಚಿಂತನೆಯ ಆಧಾರದ ಮೇಲೆ ಮಂಡಿಸುವ ಮೂಲಕ. ಒಬ್ಬ ವ್ಯಕ್ತಿಯ ಚಿಂತನಾಕ್ರಮ ವೃದ್ಧಿಗೊಳ್ಳಲು, ವೈಚಾರಿಕತೆ ಅರಳಲು, ಬೌದ್ಧಿಕ ಜಗತ್ತು ವಿಸ್ತಾರಗೊಳ್ಳಲು ಮತ್ತು ವ್ಯಕ್ತಿತ್ವ ಪರಿಪಕ್ವಗೊಳ್ಳಲು ಎಲ್ಲಾ ರೀತಿಯ ಅಭಿಪ್ರಾಯಗಳು ಮುಕ್ತವಾಗಿರಬೇಕು.

ಕಳೆದ 68 ವರ್ಷಗಳಿಂದ ಅನುಭವಿಸುತ್ತಾ ಬಂದಿರುವ ಈ ಹಕ್ಕುಗಳನ್ನು ಇಂದು ಕಳೆದುಕೊಳ್ಳುವ ಅಂಚಿನಲ್ಲಿರುವಂತೆ ಭಾಸವಾಗುತ್ತಿದೆ. ಸರ್ಕಾರಗಳು ತನ್ನ ಹಿಡಿತದಲ್ಲಿರುವ ದೂರದರ್ಶನ ಮತ್ತು ಆಕಾಶವಾಣಿಯೆಂಬ ಸಾರ್ವಜನಿಕ ಮಾಧ್ಯಮಗಳನ್ನು ತನ್ನ ವಕ್ತಾರರಾಗಿ ಬಳಸಿಕೊಳ್ಳುತ್ತಿವೆ. ಜಾಹಿರಾತುಗಳ ಮೂಲಕ ಖಾಸಗಿ ಮಾಧ್ಯಮಗಳ ಮೇಲೆ ಪ್ರಭಾವ ಬೀರುತ್ತಿವೆ. ಸರ್ಕಾರ ತನ್ನ ಪರಮಾಧಿಕಾರವನ್ನು ದುರ್ಬಳಕೆ ಮಾಡಿಕೊಂಡು ವಿಭಿನ್ನ ಅಭಿಪ್ರಾಯಗಳನ್ನು ಹೊಂದಿರುವ ಪುಸ್ತಕಗಳನ್ನು, ಸಿನಿಮಾಗಳನ್ನು, ಚಿತ್ರಕಲೆಗಳನ್ನು ನಿಷೇಧಿಸುತ್ತಿದೆ. ಸರ್ಕಾರದ ಅತಿರೇಕಗಳನ್ನು ಪ್ರಶ್ನಿಸುವ ಕಲಾವಿದರು, ಸಾಮಾಜಿಕ ಕಾರ್ಯಕರ್ತರು, ವಿದ್ಯಾರ್ಥಿಗಳು ಹಾಗೂ ಸಾಹಿತಿಗಳನ್ನು ರಾಜದ್ರೋಹವೆಂಬ ಆಪಾದನೆಯನ್ನು ಹೊರಿಸಿ ಬಂಧಿಸಿ, ಕ್ರಿಮಿನಲ್ ಕೇಸ್ ದಾಖಲಿಸಿ, ಜೈಲಿಗೆ ಕಳುಹಿಸುತ್ತಿದ್ದಾರೆ. ಹತ್ಯೆ ಮಾಡುತ್ತಿದ್ದಾರೆ. ಸುದ್ಧಿ ಮಾಧ್ಯಮಗಳಲ್ಲಿ ಮೂಗು ತೂರಿಸಿ, ಜನರು ಏನನ್ನು ತಿಳಿಯಬೇಕು–ಏನನ್ನು ತಿಳಿಯಬಾರದು ಎಂಬುದನ್ನು ನಿಗ್ರಹಿಸುತ್ತಿವೆ ಸರ್ಕಾರಗಳು. ಮಾಧ್ಯಮಗಳೂ ಕೂಡ ಮಾರುಕಟ್ಟೆ ಹಾಗೂ ಆಡಳಿತ ಯಂತ್ರಗಳ ಮುಲಾಜಿಗೆ ಬಿದ್ದು ತಮ್ಮ ಅಗತ್ಯಕ್ಕೆ ಅನುಗುಣವಾಗಿ ಸುದ್ದಿಯನ್ನು ತಿರುಚಿದ ಉದಾಹರಣೆಗಳೂ ಇವೆ.

ಮಾಹಿತಿ ತಂತ್ರಜ್ಞಾನವು ಜಗತ್ತಿನ ಜನರನ್ನು ಹತ್ತಿರಕ್ಕೆ ತಂದಿದೆ ಮತ್ತು ಇಡೀ ವಿಶ್ವವೇ ಒಂದು ಹಳ್ಳಿಯೆಂದು ಹೇಳಲಾಗಿದೆ. ಆದರೆ, ಭಾರತವನ್ನೂ ಒಳಗೊಂಡಂತೆ, ವಿಶ್ವದಾದ್ಯಂತ ಮಹಿಳೆಯರ, ಅಲ್ಪಸಂಖ್ಯಾತರ, ಮಕ್ಕಳ, ಅಸಂಘಟಿತ ಕಾರ್ಮಿಕರ, ಅನಕ್ಷರಸ್ಥರ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಕೂಗನ್ನು ಯಾರೂ ಕೇಳುತ್ತಿಲ್ಲ ಮತ್ತು ಆ ವರ್ಗಗಳ ಜನರಿಗೆ ಬೇಕಾದ ಮಾಹಿತಿ ಅವರಿಗೆ ಕೈಗೆ ಎಟುಕುತ್ತಿಲ್ಲ. ಇಂತಹ ಬೆಳವಣಿಗೆಗಳಿಂದ ನಾವು ಏನನ್ನು ಗಳಿಸಿದ್ದೇವೆಯೋ ಅದನ್ನು ಕಳೆದುಕೊಳ್ಳುತ್ತಿದ್ದೇವೆ. ಈ ಬೆಳವಣಿಗೆಗಳು ನಮ್ಮ ಸಂವಿಧಾನಕ್ಕೆ ಒಂದು ದೊಡ್ಡ ಸವಾಲಾಗಿದೆ.

## 3. ಗಂಡಾಂತರದಲ್ಲಿ ರೂಲ್ ಆಫ್ ಲಾ (Rule of Law)

ಭಾರತದಲ್ಲಿ ಸಂವಿಧಾನವೇ ಸರ್ವಶ್ರೇಷ್ಠ. ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗದ ಕಾರ್ಯನಿರ್ವಹಣೆ ಸಂವಿಧಾನಾತ್ಮಕವಾಗಿರಬೇಕು. ಶಾಸಕಾಂಗವು ರಚಿಸುವ ಶಾಸನಗಳು, ಕಾರ್ಯಾಂಗ ಹೊರಡಿಸುವ ಆದೇಶಗಳು, ರೂಪಿಸಿದ ಯೋಜನೆಗಳು ಮತ್ತು ಕಾರ್ಯಕ್ರಮಗಳು ಹಾಗೂ ನ್ಯಾಯಾಂಗ ನೀಡುವ ತೀರ್ಪುಗಳು ಸಂವಿಧಾನತ್ಮಕವಾಗಿರಬೇಕು. ದೇಶದ ಎಲ್ಲಾ ಸಂಸ್ಥೆಗಳು ಮತ್ತು ಎಲ್ಲಾ ಪ್ರಜೆಗಳು ಸಂವಿಧಾನಕ್ಕೆ ಬದ್ಧರಾಗಿರಬೇಕು. ಸಂವಿಧಾನಕ್ಕಿಂತ ಮೇಲೆ ಯಾರೂ ಇಲ್ಲ. ರಾಜನೇ ಕಾನೂನಲ್ಲ, ಕಾನೂನೇ ರಾಜ ಎನ್ನುವಂತೆ. (King is not law, law is the King)

ಆದರೆ ಇತ್ತೀಚಿನ ಕೆಲವು ಬೆಳವಣಿಗೆಗಳು 'ರೂಲ್ ಆಫ್ ಲಾ' ಎಂಬ ತತ್ವಕ್ಕೆ ತದ್ವಿರುದ್ಧವಾಗಿವೆ. ದೇಶದ ಪ್ರತಿ ನಗರದಲ್ಲಿ ಕ್ರಿಮಿನಲ್ ಮಾಫಿಯಾಗಳು ಸಕ್ರಿಯವಾಗಿ ಕೆಲಸ ಮಾಡುತ್ತಿವೆ. ಮುಂಬಯಿ, ಕೊಲ್ಕತ್ತಾ, ಬೆಂಗಳೂರು, ಚೆನ್ನೈ, ದೆಹಲಿಯಂತಹ ನಗರಗಳಲ್ಲಿ ಹಲವಾರು ಮಾಫಿಯ ಗುಂಪುಗಳು ಕೆಲಸ ಮಾಡುತ್ತಿವೆ. ರಾಜಾರೋಷವಾಗಿ ಮಾರುಕಟ್ಟೆಯಲ್ಲಿ ತರಕಾರಿ ಮಾರಿದಂತೆ ಮಾಫಿಯಗಳು ರೇಟುಗಳನ್ನು ನಿಗದಿಗೊಳಿಸಿದ್ದಾರೆ. ಕಾಲು ತೆಗೆದರೆ ಒಂದು ರೇಟು, ಕೈ ತೆಗೆದರೆ ಒಂದು ರೇಟು, ತಲೆ ತೆಗೆದರೆ ಒಂದು ರೇಟು ಎಂಬಂತೆ ಕೆಲಸ ನಿರ್ವಹಿಸುತ್ತಿದ್ದಾರೆ. ಬಾಡಿಗೆದಾರರ ಮನೆ ಖಾಲಿ ಮಾಡಿಸಲಿಕ್ಕೆ, ಸಾಲ ವಸೂಲಾತಿಗೆ, ಜಾಗ ತೆರವುಗೊಳಿಸಲಿಕ್ಕೆ ಇತ್ಯಾದಿ ಉದ್ದೇಶಗಳಿಗೆ ಮಾಫಿಯಾಗಳನ್ನು ಬಳಸಲಾಗುತ್ತಿದೆ. ಕೆಲವರು ಮಾಫಿಯ ಕೆಲಸವನ್ನು ತಮ್ಮ ವೃತ್ತಿಯನ್ನಾಗಿಸಿಕೊಂಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ರೂಲ್ ಆಫ್ ಲಾ ಎನ್ನುವುದು ಎಲ್ಲಿರಲು ಸಾಧ್ಯ?

ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆಯ (ನ್ಯಾಷನಲ್ ಕ್ರೈಮ್ ರೆಕಾರ್ಡ್ಸ್ ಬ್ಯೂರೋ–ಎನ್.ಸಿ.ಆರ್.ಬಿ.) ವರದಿಯ ಪ್ರಕಾರ ಅಸ್ಪೃಶ್ಯರ ಮೇಲೆ ಪ್ರತಿದಿನ ಸರಾಸರಿ 27 ದೌರ್ಜನ್ಯಗಳು ನಡೆಯುತ್ತಿವೆ. ಪ್ರತಿ ದಿವಸ ಅಸ್ಪೃಶ್ಯರ 5 ಮನೆಗಳನ್ನು ಬೆಂಕಿಯಿಂದ ಸುಡಲಾಗುತ್ತಿದೆ, 3 ಮಹಿಳೆಯರ ಮೇಲೆ ಲೈಂಗಿಕ ಅತ್ಯಾಚಾರ ನಡೆಯುತ್ತಿದೆ ಮತ್ತು 11 ಜನರ ಮೇಲೆ ದೈಹಿಕ ದೌರ್ಜನ್ಯ ನಡೆಯುತ್ತಿದೆ. ಪ್ರತಿವಾರ 13 ಅಸ್ಪೃಶ್ಯರ ಕೊಲೆಯಾಗುತ್ತಿದೆ. ಸುಮಾರು 100 ರೀತಿಯ ದೌರ್ಜನ್ಯಗಳು ಅಸ್ಪೃಶ್ಯರ ಮೇಲೆ ನಡೆಯುತ್ತಿವೆ ಎಂದು ಅಧ್ಯಯನಗಳು ತಿಳಿಸಿವೆ. ಇದರಲ್ಲಿ ಅನೇಕ ಪ್ರಕರಣಗಳು ವರದಿಯಾಗುವುದಿಲ್ಲ. ವರದಿಯಾದ ಬಹುಪಾಲು ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗುತ್ತಿಲ್ಲ.

ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆಯ 2016ರ ವರದಿಯ ಪ್ರಕಾರ ಪ್ರತಿ 77 ನಿಮಿಷಗಳಿಗೆ ಒಬ್ಬ ಮಹಿಳೆ ಹಿಂಸೆಯಿಂದ ಸಾಯುತ್ತಿದ್ದಾಳೆ. ಪ್ರತಿ 6 ಗಂಟೆಗಳಿಗೆ ಒಬ್ಬ ವಿವಾಹಿತ ಮಹಿಳೆಯನ್ನು ಜೀವಂತವಾಗಿ ಸುಡಲಾಗುತ್ತಿದೆ ಅಥವಾ ಹೊಡೆದು ಸಾಯಿಸಲಾಗುತ್ತಿದೆ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವಂತಹ ದುಸ್ಥಿತಿಗೆ ತಳ್ಳಲಾಗುತ್ತಿದೆ. ವಿವಾಹವಾಗಿರುವ 100 ಮಹಿಳೆಯರ ಪೈಕಿ 20 ಮಹಿಳೆಯರು ಪ್ರತಿನಿತ್ಯವೂ ಗಂಡನಿಂದ ಅಥವಾ ಅವನ ಕುಟುಂಬದವರಿಂದ ದೈಹಿಕ ಹಲ್ಲೆಗೆ ಗುರಿಯಾಗುತ್ತಿದ್ದಾರೆ. ಪ್ರತಿ 47 ನಿಮಿಷಗಳಿಗೆ ಒಬ್ಬ ಮಹಿಳೆ ಅತ್ಯಾಚಾರಕ್ಕೆ ಬಲಿಯಾಗುತ್ತಿದ್ದಾಳೆ. ನಗರ ಪ್ರದೇಶಗಳಲ್ಲಿ

ಶೇಕಡ 96ರಷ್ಟು ಮಹಿಳಾ ಕಾರ್ಮಿಕರು ಒಂದಲ್ಲ ಒಂದು ಬಾರಿ ಅತ್ಯಾಚಾರಕ್ಕೆ ಗುರಿಯಾಗುತ್ತಿದ್ದಾರೆ. ಅಪ್ರಾಪ್ತ ವಯಸ್ಸಿನ ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ, ಆಸಿಡ್ ದಾಳಿ, ಬಿಸಿಎಣ್ಣೆ ಎರಚುವುದು ಇತ್ಯಾದಿಗಳು ದಿನೇ ದಿನೇ ಹೆಚ್ಚುತ್ತಿವೆ. ಅನೇಕ ಪ್ರಕರಣಗಳು ಬೆಳಕಿಗೆ ಬರುವುದಿಲ್ಲ.

ಸಾಮಾಜಿಕ ವಿಜ್ಞಾನ ಸಂಸ್ಥೆ ನಡೆಸಿರುವ ಅಧ್ಯಯನದ ಪ್ರಕಾರ ಭಾರತದಲ್ಲಿ ಸುಮಾರು 45 ಸಾವಿರ ಮಕ್ಕಳು ಪ್ರತಿ ವರ್ಷ ಕಾಣೆಯಾಗುತ್ತಿದ್ದಾರೆ. ಅವರ ಪೈಕಿ 11 ಸಾವಿರ ಮಕ್ಕಳು ಮರಳಿ ಸಿಗುವುದೇ ಇಲ್ಲ. ಮಕ್ಕಳನ್ನು ಅಪಹರಿಸಿ ಭಿಕ್ಷಾಟನೆ, ವೇಶ್ಯಾವೃತ್ತಿಗೆ ನೂಕುತ್ತಿರುವ ದಂಧೆಯು ಅವ್ಯಾಹತವಾಗಿ ನಡೆಯುತ್ತಿದೆ. ಅದೇ ರೀತಿ ದುಡ್ಡಿಗಾಗಿಯೂ ಅಪಹರಣಗಳು ನಡೆಯುತ್ತಿವೆ. ಇಲ್ಲಿ ಮಹಿಳೆ ಮತ್ತು ಮಕ್ಕಳು ಮಾರಾಟದ ಸರಕಾಗಿದ್ದಾರೆ.

ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಕಾಫ್ ಪಂಚಾಯಿತಿಗಳು ದೇಶದ ಸಂವಿಧಾನ ಮತ್ತು ಕಾನೂನುಗಳನ್ನು ಧಿಕ್ಕರಿಸಿ ಹೆಣ್ಣು ಮಕ್ಕಳ ಮೇಲೆ ಅನೇಕ ನಿರ್ಬಂಧಗಳನ್ನು ಹೇರುತ್ತಿವೆ. ಹೆಣ್ಣು ಮಕ್ಕಳ ಮದುವೆ ವಯಸ್ಸು, ಭ್ರೂಣಹತ್ಯೆ, ಅಂತರ್ಜಾತಿ ಮದುವೆ, ವರದಕ್ಷಿಣೆ, ಶಿಕ್ಷಣ ಇತ್ಯಾದಿಗಳ ಬಗ್ಗೆ ಸಂವಿಧಾನದ ಆಶಯಕ್ಕೆ ವಿರುದ್ಧವಾದ ಫರಮಾನ್‌ಗಳನ್ನು ಹೊರಡಿಸಿ ಅನುಷ್ಠಾನಗೊಳಿಸುತ್ತಿವೆ. ಕುಟುಂಬದ ಗೌರವ ಕಾಪಾಡುವ ಹೆಸರಿನಲ್ಲಿ ಹೆಣ್ಣು ಮಕ್ಕಳು ಮತ್ತು ಮಹಿಳೆಯರ ಮೇಲೆ ನಿರ್ಬಂಧ ಹೇರುತ್ತಿವೆ. ಅಂತರ್ಜಾತಿ ಮದುವೆಗಳನ್ನು ನಿಷೇಧಿಸಿವೆ. ಕಾಪ್ ಪಂಚಾಯಿತಿಯ ಯಾವುದೇ ನಿಯಮವನ್ನು ಉಲ್ಲಂಘಿಸಿದರೆ ಮರ್ಯಾದೆಯ ಹೆಸರಿನಲ್ಲಿ ಹೆಣ್ಣುಮಕ್ಕಳನ್ನು ಬಹಿರಂಗವಾಗಿ ಹತ್ಯೆ ಕೂಡ ಮಾಡಲಾಗುತ್ತಿದೆ. ಹೀಗೆ ಪರ್ಯಾಯ ಕಾನೂನುಗಳು ಮತ್ತು ಪಂಚಾಯಿತಿ ಎಂಬ ನ್ಯಾಯಾಲಯಗಳು ಇನ್ನೂ ಜೀವಂತವಾಗಿವೆ.

ಪೊಲೀಸರ ಪ್ರಮುಖ ಕೆಲಸವೆಂದರೆ ಪ್ರಜೆಗಳ ಜೀವ ರಕ್ಷಿಸುವುದು ಮತ್ತು ಅವರ ಆಸ್ತಿ–ಪಾಸ್ತಿಗಳಿಗೆ ಧಕ್ಕೆಯಾಗದಂತೆ ನೋಡಿಕೊಳ್ಳುವುದು; ಅಪರಾಧಿಗಳನ್ನು ಕಾನೂನು ಪ್ರಕ್ರಿಯೆಗೆ ಒಳಪಡಿಸಿ, ವಿಚಾರಣೆ ನಡೆಸಿ ನ್ಯಾಯಾಲಯಗಳ ಮೂಲಕ ಶಿಕ್ಷೆಯನ್ನು ವಿಧಿಸುವುದು. ಆದರೆ ಪೊಲೀಸ್ ಠಾಣೆಗಳಲ್ಲಿ ಚಿತ್ರಹಿಂಸೆ ನೀಡುವ ಮೂಲಕ ಜನರನ್ನು ಸಾಯಿಸುತ್ತಿರುವ ಪ್ರಕರಣಗಳು ದಿನನಿತ್ಯದ ಸುದ್ದಿಯಾಗಿವೆ. 2013ರಲ್ಲಿ 118, 2014ರಲ್ಲಿ 93, 2015ರಲ್ಲಿ 97 ಮತ್ತು 2016ರಲ್ಲಿ 92 ಸಾವುಗಳು ಪೊಲೀಸ್ ಠಾಣೆಗಳಲ್ಲಿ ಸಂಭವಿಸಿವೆಯೆಂದು ರಾಷ್ಟ್ರೀಯ ಅಪರಾಧ ದಾಖಲಾತಿ ಸಂಸ್ಥೆ ವರದಿ ಮಾಡಿದೆ. ಜೈಲುಗಳಲ್ಲಿರುವ ಕೈದಿಗಳು ಸಹ ಚಿತ್ರಹಿಂಸೆ ಹಾಗೂ ಇತರೆ ಕಾರಣಗಳಿಂದ ಸಾಯುತ್ತಿದ್ದಾರೆ. 2017ನೇ ಸಾಲಿನಲ್ಲಿ ನ್ಯಾಯಾಂಗ ಬಂಧನದಲ್ಲಿರುವ 894 ಕೈದಿಗಳು ಸಾವನ್ನಪ್ಪಿದ್ದಾರೆ. ಇದೇ ರೀತಿ ಎನ್‌ಕೌಂಟರ್ ಹೆಸರಿನಲ್ಲಿಯೂ ಸಹ ಪೊಲೀಸರು ಜನರನ್ನು ಸಾಯಿಸುತ್ತಿದ್ದಾರೆ. ಕಳೆದ ಒಂದು ವರ್ಷದಲ್ಲಿ ಉತ್ತರಪ್ರದೇಶದಲ್ಲಿ 1200 ಎನ್‌ಕೌಂಟರ್ ಪ್ರಕರಣಗಳು ನಡೆದು 50 ಸಾವುಗಳು ಸಂಭವಿಸಿವೆ. ಬೇಲಿಯೇ ಎದ್ದು ಹೊಲವನ್ನು ಮೇಯುವಂತ ಇಂತಹ ಪರಿಸ್ಥಿತಿಯಲ್ಲಿ ಕಾನೂನು ಸುವ್ಯವಸ್ಥೆಯು ಇಲ್ಲವಾಗುತ್ತಿದೆ.

ಈ ಸಂಖ್ಯೆಗಳು ವರದಿಯಾಗಿರುವ ಪ್ರಕರಣಗಳು. ಆದರೆ ಇಂತಹ ಅನೇಕ

ಪ್ರಕರಣಗಳು ವರದಿಯಾಗುವುದಿಲ್ಲ ಮತ್ತು ಬೆಳಕಿಗೆ ಬರುವುದಿಲ್ಲ. ವರದಿಯಾದ ಪ್ರಕರಣಗಳ ತನಿಖೆಯಲ್ಲಿ ದೋಷಗಳು, ಪ್ರಾಸಿಕ್ಯೂಷನ್‌ನಲ್ಲಿ ನ್ಯೂನತೆ, ಸಾಕ್ಷಿಗಳು ತಮ್ಮ ಹೇಳಿಕೆಯನ್ನು ಬದಲಾಯಿಸುವುದು, ಕಾನೂನಿನ ನ್ಯೂನತೆಗಳು, ನ್ಯಾಯಾಲಯದ ಪ್ರಕ್ರಿಯೆಯ ದೋಷಗಳು, ನ್ಯಾಯವಾದಿಗಳ ಹಾಗೂ ನ್ಯಾಯಾಧೀಶರ ಪೂರ್ವಗ್ರಹ ನಿಲುವುಗಳು ಇತ್ಯಾದಿ ಕಾರಣಗಳಿಂದ ಅನೇಕ ಅಪರಾಧಿಗಳು ತಪ್ಪಿಸಿಕೊಳ್ಳುತ್ತಿರುವುದು ನಿತ್ಯದ ಸಂಗತಿಯಾಗಿದೆ.

## 4. ಪ್ರಜಾತಂತ್ರ ಸಂಸ್ಥೆಗಳ ಸ್ವಾಯತ್ತತೆಗೆ ಧಕ್ಕೆ:

ಭಾರತವು ಗಣರಾಜ್ಯವಾದ ನಂತರ ಕಟ್ಟಿರುವ ಸ್ವತಂತ್ರವಾದ ಪ್ರಜಾಪ್ರಭುತ್ವ ಸಂಸ್ಥೆಗಳು ಜನಸಾಮಾನ್ಯರ ಜೀವನಮಟ್ಟವನ್ನು ಸುಧಾರಿಸಲು ಸಹಕಾರಿಯಾಗಿ ಕೆಲಸ ಮಾಡಿವೆ. ನಮ್ಮ ಸಮಾಜದಲ್ಲಿ ಸ್ಥಿರತೆ, ಸುಭದ್ರತೆ, ಐಕ್ಯತೆ ಮತ್ತು ಆಶಾದಾಯಕ ಭಾವನೆಯನ್ನು ಬೆಳೆಸುವಲ್ಲಿ ಪಾತ್ರವಹಿಸಿವೆ. ಆದರೆ ಇಂದು ಈ ಸಂಸ್ಥೆಗಳು ತಮ್ಮ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತಿವೆ. ಈ ಸಂಸ್ಥೆಗಳಲ್ಲಿ ಮೂಲಭೂತವಾದಿಗಳು ಮತ್ತು ಕೋಮುವಾದಿಗಳು ಪ್ರವೇಶಿಸಿದ್ದರಿಂದ ಅವುಗಳು ಪ್ರಜಾಪ್ರಭುತ್ವ ಸ್ವರೂಪವನ್ನೇ ಕಳೆದುಕೊಳ್ಳುತ್ತಿವೆ.

ನಮ್ಮ ಸಂವಿಧಾನದಲ್ಲಿ ನ್ಯಾಯಾಂಗಕ್ಕೆ ಒಂದು ಮಹತ್ತರವಾದ ಸ್ಥಾನವಿದೆ. ಶಾಸಕಾಂಗ ಮತ್ತು ಕಾರ್ಯಾಂಗದಿಂದ ಪ್ರತ್ಯೇಕಿಸಲ್ಪಟ್ಟಿರುವ ನ್ಯಾಯಾಂಗವು ಒಂದು ಸ್ವತಂತ್ರವಾದ ಅಂಗ. ನ್ಯಾಯಾಂಗವು ತನ್ನ ತೀರ್ಪುಗಳ ಮುಖಾಂತರ ನಮ್ಮ ಸಂವಿಧಾನವನ್ನು, ಅದರ ಮೂಲ ತತ್ವಗಳಾದ ಪ್ರಜಾಪ್ರಭುತ್ವ, ಜಾತ್ಯತೀತ ಮತ್ತು ಸಾಮಾಜಿಕ ನ್ಯಾಯವನ್ನು ಉಳಿಸಿ ಬೆಳೆಸುವಲ್ಲಿ ತನ್ನದೇ ಕೊಡುಗೆಯನ್ನು ನೀಡಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನಸಾಮಾನ್ಯರ ವಿಶ್ವಾಸವನ್ನು ಉಳಿಸಿದೆ. ಆದರೆ ಇತ್ತೀಚಿನ ಕೆಲವು ಬೆಳವಣಿಗೆಗಳು ನ್ಯಾಯಾಂಗದ ಸ್ವಾತಂತ್ರ್ಯಕ್ಕೂ ಧಕ್ಕೆ ತಂದಿವೆ.

ಸರ್ವೋಚ್ಚ ನ್ಯಾಯಾಲಯದಲ್ಲಿ ಶೇ.20ರಷ್ಟು, ಉಚ್ಚ ನ್ಯಾಯಾಲಯಗಳಲ್ಲಿ ಶೇ.40ರಷ್ಟು ಮತ್ತು ಜಿಲ್ಲಾ ನ್ಯಾಯಾಲಯಗಳಲ್ಲಿ ಶೇ.30ರಷ್ಟು ನ್ಯಾಯಾಧೀಶರ ಹುದ್ದೆಗಳು ಖಾಲಿ ಬಿದ್ದಿವೆ. ನ್ಯಾಯಾಧೀಶರ ನೇಮಕಾತಿ, ವರ್ಗಾವಣೆ ಹಾಗೂ ಬಡ್ತಿ ವಿಚಾರಕ್ಕೆ ಸಂಬಂಧಿಸಿದ 'ಪ್ರಕ್ರಿಯೆ ಒಪ್ಪಂದ'ವು (Memorandum of Procedure) ಸರ್ವೋಚ್ಚ ನ್ಯಾಯಾಲಯ ಮತ್ತು ಕೇಂದ್ರ ಸರ್ಕಾರದ ಮಧ್ಯದ ಸಂಘರ್ಷದಿಂದಾಗಿ 2015ರಿಂದಲೂ ನೆನೆಗುದಿಗೆ ಬಿದ್ದಿದೆ. ಈ ವಿಚಾರದಲ್ಲಿ ಮೇಲುಗೈ ಸಾಧಿಸಲು ಕಾರ್ಯಾಂಗ ಎಲ್ಲ ಪ್ರಯತ್ನಗಳನ್ನು ನಡೆಸುತ್ತಿದೆ. ಈ ಎಲ್ಲ ಬೆಳವಣಿಗೆಗಳಿಂದ ಬೇಸತ್ತು ಸರ್ವೋಚ್ಚ ನ್ಯಾಯಾಲಯದ ಹಿರಿಯ ನ್ಯಾಯಾಧೀಶರು ಜನರ ಮುಂದೆ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದ್ದಾರೆ. ಕೇಂದ್ರ ಸರ್ಕಾರವು ನ್ಯಾಯಾಮೂರ್ತಿಗಳ ನೇಮಕಾತಿ ವಿಚಾರದಲ್ಲಿ ಎಲ್ಲಾ ನಿಯಮಗಳನ್ನು ಮುರಿದು ಕೊಲಿಜಿಯಂ ಶಿಫಾರಸ್ಸು ಮಾಡಿದ ಹೆಸರುಗಳನ್ನು ಹಿಂತಿರುಗಿಸುತ್ತಿದೆ. ಸಕಾರಣವಿಲ್ಲದೆ ವಿಳಂಬ ಮಾಡುತ್ತಿದೆ ಮತ್ತು ಸರ್ವೋಚ್ಚ ನ್ಯಾಯಾಲಯವನ್ನು ಧಿಕ್ಕರಿಸಿ ನೇರವಾಗಿ ಉಚ್ಚ ನ್ಯಾಯಾಲಯಗಳ ಜೊತೆ ವ್ಯವಹರಿಸುತ್ತಿದೆ. ಈ ಬೆಳವಣಿಗೆಗಳಿಂದ ನ್ಯಾಯ ವಿತರಣಾ ಪದ್ಧತಿಯ ಮೇಲೆ ತೀವ್ರವಾದ ಪರಿಣಾಮ ಬಿದ್ದಿದೆ.

ಭಾರತೀಯ ರಿಸರ್ವ್ ಬ್ಯಾಂಕ್, ಸಿಬಿಐ, ಮೊದಲಾದ ಸ್ವಾಯತ್ತ ಸಂಸ್ಥೆಗಳ ಕೆಲಸ ಕಾರ್ಯಗಳಲ್ಲಿ ಹಸ್ತಕ್ಷೇಪ ಮಾಡುವ ಮೂಲಕ, ಆಯಾ ಸಂಸ್ಥೆಗಳ ನಿಯಮಗಳನ್ನು ಗಾಳಿಗೆ ತೂರಿ ಬದಲಾವಣೆಗಳನ್ನು ಮಾಡುವ ಮೂಲಕ ಹಾಗೂ ಆಡಳಿತದಲ್ಲಿರುವ ಸರ್ಕಾರಗಳು ತಮಗೆ ಬೇಕಾದ ವ್ಯಕ್ತಿಗಳನ್ನು ಈ ಸಂಸ್ಥೆಗಳ ಮುಖ್ಯಸ್ಥರ ಹುದ್ದೆಗೆ ನೇಮಕಾತಿ ಮಾಡಿಕೊಳ್ಳುವ ಮೂಲಕ ಈ ಸಂಸ್ಥೆಗಳ ಸ್ವಾಯತ್ತತೆಗೆ ಧಕ್ಕೆ ತರುತ್ತಿದೆ.

ಗುಣಾತ್ಮಕ ಶಿಕ್ಷಣವನ್ನು ನೀಡಿ ಯುವಜನ ವಿದ್ಯಾರ್ಥಿಗಳಲ್ಲಿ ವೈಚಾರಿಕತೆಯನ್ನು ಬೆಳೆಸುತ್ತಿರುವ ವಿಶ್ವವಿದ್ಯಾಲಯಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ಆಡಳಿತದಲ್ಲಿ, ಪಠ್ಯ ವಿಷಯಗಳಲ್ಲಿ ಹಸ್ತಕ್ಷೇಪ ಮಾಡುವ ಮೂಲಕ ಆ ಸಂಸ್ಥೆಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತರಲಾಗಿದೆ. ಉದಾಹರಣೆಗೆ ಮದ್ರಾಸ್ ಎಂಜಿನಿಯರಿಂಗ್ ಕಾಲೇಜು, ಪುಣೆಯ ಎಫ್.ಟಿ.ಐ.ಐ., ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ಮುಂಬೈನ ಟಾಟಾ ಸಮಾಜಶಾಸ್ತ್ರ ವಿಶ್ವವಿದ್ಯಾಲಯ, ಹೈದರಾಬಾದ್ ವಿಶ್ವವಿದ್ಯಾಲಯ, ಜೋಧ್‌ಪುರ್ ವಿಶ್ವವಿದ್ಯಾಲಯ, ಜಾಧವ್‌ಪುರ್ ವಿಶ್ವವಿದ್ಯಾಲಯ, ಇತ್ಯಾದಿಗಳಲ್ಲಿ ನಡೆದಿರುವ ಇತ್ತೀಚೆಗಿನ ಘಟನೆಗಳು ಮತ್ತು ಪ್ರಕರಣಗಳು ಇದಕ್ಕೆ ಸಾಕ್ಷಿಯಾಗಿವೆ. ಈ ವಿಶ್ವವಿದ್ಯಾಲಯಗಳಿಗೆ ಅನುದಾನವನ್ನು ಕಡಿತಗೊಳಿಸಿ, ಹತ್ತಾರು ವಿಷಯಗಳ ಬಗ್ಗೆ ಅಧ್ಯಯನವನ್ನು ನಿಲ್ಲಿಸಿ, ನೂರಾರು ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣವನ್ನು ನಿರಾಕರಿಸಲಾಗಿದೆ. ಈ ರೀತಿ ಅನೇಕ ಶಿಕ್ಷಣ ಸಂಸ್ಥೆಗಳು ದಾಳಿಗೆ ಒಳಗಾಗಿವೆ.

ಚುನಾವಣಾ ಆಯೋಗ, ಕೇಂದ್ರ ತನಿಖಾ ದಳ (ಸಿಬಿಐ), ಸೆಂಟ್ರಲ್ ಎನ್‌ಪೋರ್ಸ್‌ಮೆಂಟ್ ಸೆಲ್ (ಸಿಇಸಿ), ಚಲನಚಿತ್ರ ಸೆನ್ಸಾರ್ ಮಂಡಳಿ, ಇತ್ಯಾದಿ ಸಂಸ್ಥೆಗಳಿಗೆ ಇತ್ತೀಚೆಗೆ ಮಾಡಿರುವ ನೇಮಕಾತಿಗಳು ಹಾಗೂ ಅವುಗಳ ಕಾರ್ಯನಿರ್ವಹಣೆಯ ವೈಖರಿಯು ಜನರಲ್ಲಿ ಅಸಂತೋಷವನ್ನು ಉಂಟುಮಾಡಿದೆ.

## 5. ಆಪತ್ತಿನಲ್ಲಿರುವ ಜಾತ್ಯತೀತತೆ, ಧರ್ಮನಿರಪೇಕ್ಷತೆ

ಧರ್ಮನಿರಪೇಕ್ಷತೆ ಎಂದರೆ ಧರ್ಮವನ್ನು ರಾಜಕಾರಣದಿಂದ ಬೇರ್ಪಡಿಸುವುದು. ಸರ್ಕಾರಕ್ಕೆ ತನ್ನದೆ ಆದ ಧರ್ಮವಿರಕೂಡದು. ಸರ್ಕಾರ ಬೇರೆ ಬೇರೆ ಧರ್ಮಗಳ ಮಧ್ಯೆ ತಾರತಮ್ಯ ತೋರಬಾರದು. ಧರ್ಮದ ಪೋಷಣೆಗೆ ಸರ್ಕಾರ ಜನರ ಮೇಲೆ ತೆರಿಗೆ ವಿಧಿಸಬಾರದು. ಸರ್ಕಾರದ ನೀತಿಗಳು ಯಾವುದೇ ಧರ್ಮದ ಫರಮಾನ್‌ಗಳಿಂದ ಪ್ರೇರಿತವಾಗಿರಕೂಡದು. ಇಂತಹ ಒಂದು ರಾಜಕೀಯ ವ್ಯವಸ್ಥೆ ಧರ್ಮನಿರಪೇಕ್ಷ ವ್ಯವಸ್ಥೆ ಎಂದು ಕರೆಯಲ್ಪಡುತ್ತದೆ.

ಧರ್ಮನಿರಪೇಕ್ಷತೆ ಎಂದರೆ ಧರ್ಮ ವಿರೋಧಿಯಲ್ಲ. ಆದರೆ ಯಾವ ಧಾರ್ಮಿಕ ನಂಬಿಕೆಗಳು ಮತ್ತು ಆಚರಣೆಗಳು ಅಮಾನವಿಯವೋ, ಅನಾರೋಗ್ಯಕರವೋ, ಹಿಂಸಾತ್ಮಕವೋ, ದಮನಕಾರಿಯೋ ಮತ್ತು ಮಾನವ ಘನತೆಗೆ ಧಕ್ಕೆಯನ್ನು ತರುತ್ತದೋ ಅಂತಹವುಗಳನ್ನು ನಿಷೇಧಿಸುವ ಹಕ್ಕನ್ನು ಸರ್ಕಾರ ಹೊಂದಿರುತ್ತದೆ.

ಇತ್ತೀಚಿನ ವರ್ಷಗಳಲ್ಲಿ ದೇಶದಲ್ಲಿ ಮೂಲಭೂತವಾದಿ ಮತ್ತು ಕೋಮುವಾದಿ ಶಕ್ತಿಗಳು

ದೊಡ್ಡ ಪ್ರಮಾಣದಲ್ಲಿ ತಲೆ ಎತ್ತಿವೆ. ಈ ಶಕ್ತಿಗಳು ಜನರ ಐಕ್ಯತೆಯನ್ನು ಮುರಿಯುತ್ತಿವೆ. ಜನರ ಮಧ್ಯೆ ಗೋಡೆಗಳನ್ನು ನಿರ್ಮಾಣ ಮಾಡಿವೆ. ಜನರಲ್ಲಿ ದ್ವೇಷ, ಹಿಂಸೆ, ಅಸೂಯೆ, ಅಪನಂಬಿಕೆಗಳನ್ನು ಹುಟ್ಟು ಹಾಕಿವೆ. ಆತಂಕದ ವಿಚಾರವೆಂದರೆ ಈ ಶಕ್ತಿಗಳು ಎಲ್ಲಾ ಕ್ಷೇತ್ರಗಳಿಗೆ ಅಂದರೆ ರಾಜಕಾರಣ, ಆಡಳಿತ, ಶಿಕ್ಷಣ, ಸಿನಿಮಾ, ಕ್ರೀಡೆ, ಸಂಗೀತ, ಕಲೆ, ಪೊಲೀಸ್ ಇತ್ಯಾದಿಗಳಲ್ಲಿ ಪ್ರವೇಶಿಸಿವೆ.

ಈ ಶಕ್ತಿಗಳು ನಾವು ಏನನ್ನು ತಿನ್ನಬೇಕು, ಎಂತಹ ಬಟ್ಟೆ ಧರಿಸಬೇಕು, ಏನನ್ನು ಮಾತನಾಡಬೇಕು, ಹೇಗೆ ನಡೆದುಕೊಳ್ಳಬೇಕು, ಯಾರನ್ನು ಪ್ರೀತಿಸಬೇಕು, ಯಾರನ್ನು ಮದುವೆಯಾಗಬೇಕು, ಯಾರೊಂದಿಗೆ ಮಾತನಾಡಬೇಕು, ಯಾರೊಂದಿಗೆ ವ್ಯವಹರಿಸಬೇಕು, ಎಷ್ಟು ಮಕ್ಕಳನ್ನು ಹೆರಬೇಕೆಂಬ ಖಾಸಗಿ ಬದುಕಿನ ವಿಚಾರಗಳ ಮೇಲೆ ಫರ್ಮಾನ್‌ಗಳನ್ನು ಹೊರಡಿಸಿ ನಮ್ಮ ಬಹುತ್ವದ ಸಂಸ್ಕೃತಿಯನ್ನು ನಾಶಮಾಡಲು ಪ್ರಯತ್ನಿಸುತ್ತಿವೆ.

ಈ ಶಕ್ತಿಗಳು ಕ್ರಿಶ್ಚಿಯನ್ ಪಾದ್ರಿಗಳನ್ನು ಸುಟ್ಟವು, ಸನ್ಯಾಸಿಗಳನ್ನು ರೇಪ್ ಮಾಡಿದವು, ಚರ್ಚ್‌ಗಳನ್ನು ಧ್ವಂಸ ಮಾಡಿದವು. ನೈತಿಕ ಪೊಲೀಸ್‌ಗಿರಿ, ಗೋರಕ್ಷಣೆ ಇತ್ಯಾದಿ ಹೆಸರಿನಲ್ಲಿ ಈ ಮೂಲಭೂತವಾದಿ ಗುಂಪುಗಳು ಹಿಂಸಾತ್ಮಕ ಚಟುವಟಿಕೆಗಲ್ಲಿ ತೊಡಗಿಸಿಕೊಂಡಿವೆ. ಜನರಲ್ಲಿ ಭಯ, ಭೀತಿ ಮತ್ತು ಅಭದ್ರತೆಯನ್ನು ಹುಟ್ಟು ಹಾಕುತ್ತಿವೆ.

ಈ ಗುಂಪುಗಳಿಗೆ ಸೇರಿದ ನಾಯಕರು ತಮಗೆ ಸಮ್ಮತವಲ್ಲದ ವ್ಯಕ್ತಿಗಳ ತಲೆ ಕಡಿದರೆ, ನಾಲಿಗೆ ಸೀಳಿದರೆ, ಕಾಲು ಕೈ ಕತ್ತರಿಸಿದರೆ ಲಕ್ಷಗಟ್ಟಲೆ ಹಣ ಕೊಡುತ್ತೇವೆಂದು ಘಂಟಾಘೋಷವಾಗಿ ಬಹಿರಂಗ ಸಭೆಗಳಲ್ಲಿ ಹೇಳುತ್ತಿದ್ದಾರೆ. ಚುನಾಯಿತ ಜನ ಪ್ರತಿನಿಧಿಗಳು ಮತ್ತು ಜವಾಬ್ದಾರಿ ಸ್ಥಾನದಲ್ಲಿರುವ ಮುಖಂಡರು ಜನರಲ್ಲಿ ದ್ವೇಷ ಹುಟ್ಟಿಸುವ ಇಂತಹ ಹೇಳಿಕೆಗಳನ್ನು ನೀಡುತ್ತಿರುವುದು ಆತಂಕಕಾರಿಯಾಗಿದೆ. ಇಂತಹ ಹೇಳಿಕೆಗಳನ್ನು ಖಂಡಿಸಿ, ಹೇಳಿಕೆ ನೀಡಿದವರನ್ನು, ಹಿಂಸೆಗೆ ಪ್ರಚೋದನೆ ನೀಡುವವರನ್ನು ಸರ್ಕಾರವು ಶಿಕ್ಷಿಸುವ ಬದಲು ಇಂತಹ ವ್ಯಕ್ತಿಗಳ ಮೇಲೆ ದಾಖಲಾಗಿರುವ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯುತ್ತಿದೆ.

ಧರ್ಮನಿರಪೇಕ್ಷತೆ ಎಂದರೆ ಧರ್ಮವನ್ನು ರಾಜಕಾರಣದಿಂದ ಬೇರ್ಪಡಿಸುವುದು. ದುರಾದೃಷ್ಟವೆಂದರೆ ಧರ್ಮಗುರುಗಳು ಮತ್ತು ಧರ್ಮಪೀಠಗಳು ರಾಜಕಾರಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಿದ್ದಾರೆ. ಅನೇಕ ಧರ್ಮಗುರುಗಳು ಚುನಾವಣಾ ಕಣದಲ್ಲಿದ್ದಾರೆ. ರಾಜಕೀಯ ಅಧಿಕಾರ ಧರ್ಮಗುರುಗಳ ಕೈಗೆ ಹೋಗುತ್ತಿರುವುದೂ ಕೂಡ ಅಪಾಯಕಾರಿ ಬೆಳವಣಿಗೆಯಾಗಿದೆ.

ಈ ಬೆಳವಣಿಗೆಗಳಿಂದ ಧರ್ಮನಿರಪೇಕ್ಷತೆ ಮತ್ತು ಬಹುತ್ವಕ್ಕೆ ಧಕ್ಕೆ ಬಂದೊದಗಿದೆ. ಇದರ ಪರಿಣಾಮವಾಗಿ ದೇಶದಲ್ಲಿ ಶಾಂತಿ ಕದಡಿದೆ, ಪ್ರಗತಿ ಕುಂಠಿತವಾಗಿದೆ, ಹಿಂಸೆ ಹೆಚ್ಚುತ್ತಿದೆ, ಜನರನ್ನು ಭಯ ಮತ್ತು ಅಭದ್ರತೆ ಕಾಡುತ್ತಿದೆ.

## 6. ಮಾಯವಾಗುತ್ತಿರುವ ಕಲ್ಯಾಣ ರಾಜ್ಯದ ಕಲ್ಪನೆ

ನಮ್ಮ ಸಂವಿಧಾನದಲ್ಲಿ ಭಾರತ ದೇಶವನ್ನು ಒಂದು ಕಲ್ಯಾಣ ರಾಜ್ಯವನ್ನಾಗಿ ಕಟ್ಟುವ ಸಂಕಲ್ಪ ಮಾಡಲಾಗಿದೆ. ಕಲ್ಯಾಣ ರಾಜ್ಯವೆಂದರೆ ಸರ್ಕಾರಕ್ಕೆ ಜನಸಾಮಾನ್ಯರ ಕನಿಷ್ಠ ಅಗತ್ಯತೆಗಳಾದ ಆಹಾರ, ವಸತಿ, ಕುಡಿಯುವ ನೀರು, ಆರೋಗ್ಯ, ಶಿಕ್ಷಣ, ಉದ್ಯೋಗ ಇತ್ಯಾದಿಗಳನ್ನು ಒದಗಿಸುವ ಬಗ್ಗೆ ಸರ್ಕಾರಕ್ಕೆ ಹೆಚ್ಚು ಜವಾಬ್ದಾರಿ ಇರುವುದು. ಆದರೆ ಇತ್ತೀಚಿನ ಸರ್ಕಾರಗಳು ಶಿಕ್ಷಣ, ಆರೋಗ್ಯ ಸೇರಿದಂತೆ ಎಲ್ಲ ಕ್ಷೇತ್ರಗಳನ್ನು ಖಾಸಗಿಯವರ ಕೈಗೆ ಒಪ್ಪಿಸುತ್ತಾ ತನ್ನ ಜವಾಬ್ದಾರಿಯಿಂದ ದೂರ ಸರಿಯುತ್ತಿದೆ. ಖಾಸಗೀಕರಣವು ಎಲ್ಲ ಸೌಲಭ್ಯಗಳನ್ನು ಕೇವಲ ವ್ಯಾಪರೀ ದೃಷ್ಟಿಯಿಂದ ನೋಡುವುದರಿಂದ ಹಾಗೂ ಲಾಭ ಮಾಡುವುದು ಕಂಪನಿಗಳ ಮುಖ್ಯ ಉದ್ದೇಶವಾಗಿರುವುದರಿಂದ ಸಾಮಾನ್ಯ ಜನರು ಬಹಳ ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಭಾರತವು ಉನ್ನತ ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಬಾಹ್ಯಾಕಾಶ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ಸಾರಿಗೆ ಇತ್ಯಾದಿ ಕ್ಷೇತ್ರಗಳಲ್ಲಿ ಕ್ರಾಂತಿಕಾರಕ ಸಾಧನೆಯನ್ನು ಮಾಡಿದೆ. ಈ ಸಾಧನೆಗಳ ಪರಿಣಾಮವಾಗಿ ಕೈಗಾರಿಕಾ ಉತ್ಪಾದನೆ, ಕೃಷಿ ಉತ್ಪಾದನೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಅಪಾರ ಸಂಪತ್ತನ್ನು ಗಳಿಸಿದೆ. ಹಿಂದೆಂದಿಗಿಂತ ಭಾರತ ಇಂದು ಬಹಳ ಶ್ರೀಮಂತವಾಗಿದೆ. ಆದರೆ ಸಂಪತ್ತು ಯಾರ ಹಿಡಿತದಲ್ಲಿದೆ ಎಂಬುದು ಪ್ರಶ್ನೆಯಾಗಿದೆ. ಹೆಚ್ಚು ಸಂಪತ್ತು ಉತ್ಪಾದನೆಯಾಗಿ ಶ್ರೀಮಂತರ ಕೈಸೇರಿದರೆ ಅದು ಹನಿಹನಿಯಾಗಿ ಹರಿದು ಬಡವರ ಕೈಸೇರುತ್ತದೆ ಎಂಬ ವಾದ ಸುಳ್ಳಾಗಿದೆ. ಕೆಲವೇ ಜನರ ಕೈಯಲ್ಲಿ ಅಪಾರ ಸಂಪತ್ತು ಸಂಗ್ರಹವಾಗಿದ್ದು, ಬಹುಸಂಖ್ಯಾತ ಜನರು ಅತ್ಯಲ್ಪ ಸಂಪತ್ತು ಹಂಚಿಕೊಂಡಿದ್ದಾರೆ. ಹೆಚ್ಚು ಹೆಚ್ಚು ಜನರು ಸಂಪತ್ತು ಮತ್ತು ಸೌಲಭ್ಯಗಳ ಅಸಮಾನ ಹಂಚಿಕೆಯಿಂದ ತತ್ತರಿಸಿದ್ದಾರೆ. ಈ ರೀತಿಯ ಅಸಮಾನ ಭಾರತವನ್ನು ನಾವು ಕಟ್ಟಿದ್ದೇವೆ. ಅಸಮಾನತೆಯಿಂದ ದೇಶದಲ್ಲಿ ಬಹುಸಂಖ್ಯಾತ ಜನರನ್ನು ಹಸಿವು, ಬಡತನ, ನಿರುದ್ಯೋಗ, ಅಭದ್ರತೆ ಇತ್ಯಾದಿಗಳು ಕಾಡುತ್ತಿವೆ.

ದೇಶದ ಸಂಪತ್ತಿನ ಹಂಚಿಕೆ

| # | ಶೇ. ಜನಸಂಖ್ಯೆ | ಶೇ. ಸಂಪತ್ತು |
|---|---|---|
| 1 | 1 | 58 |
| 2 | 9 | 22 |
| 3 | 90 | 20 |

ಇಂದು ಭ್ರಷ್ಟಾಚಾರ ಸಮಾಜದ ಎಲ್ಲಾ ಕ್ಷೇತ್ರಗಳಿಗೆ ಹಬ್ಬಿದೆ. ಗಂಭೀರವಾದ ವಿಚಾರವೆಂದರೆ, ನಮ್ಮ ದೇಶದ ಸೂಕ್ಷ್ಮ ಕ್ಷೇತ್ರಗಳಾದ ರಕ್ಷಣಾ ಇಲಾಖೆ, ಸಂಶೋಧನೆ, ನ್ಯಾಯಾಂಗ, ಶಿಕ್ಷಣ, ಆರೋಗ್ಯ ಇತ್ಯಾದಿ ಕ್ಷೇತ್ರಗಳಿಗೂ ಹಬ್ಬಿದೆ. ರಾಜಕೀಯ ಭ್ರಷ್ಟಾಚಾರವು ದೇಶದ ಉಳಿದೆಲ್ಲಾ ಭ್ರಷ್ಟಾಚಾರಗಳನ್ನು ನಿಯಂತ್ರಿಸುತ್ತಿದೆ. ಎಲ್ಲಿ ಭ್ರಷ್ಟಾಚಾರವಿರುತ್ತದೆಯೋ ಅಲ್ಲಿ ಪ್ರತಿಭೆಗೆ ದುಡಿಮೆಗೆ ಮತ್ತು ಪ್ರಾಮಾಣಿಕತೆಗೆ, ಬೆಲೆ ಇರುವುದಿಲ್ಲ. ಎಲ್ಲವನ್ನು

ಲಂಚಕೊಟ್ಟು ಕೊಂಡುಕೊಳ್ಳಬಹುದಾದರೆ ಅಲ್ಲಿ ನ್ಯಾಯಕ್ಕೆ ಬೆಲೆ ಇರುವುದು ಹೇಗೆ ಸಾಧ್ಯ?

ವಿಜಯ ಮಲ್ಯ, ಲಲಿತ್ ಮೋದಿ, ನೀರವ್ ಮೋದಿ, ಮೆಹುಲ್ ಚೌಕ್ಸಿ, ಮುಂತಾದವರು ನಮ್ಮ ಸಾರ್ವಜನಿಕ ಬ್ಯಾಂಕ್‌ಗಳಿಂದ ಸಾವಿರಾರು ಕೋಟಿ ರೂಪಾಯಿಗಳ ಸಾಲಪಡೆದು ಮರು ಪಾವತಿ ಮಾಡದೆ ವಿದೇಶಗಳಿಗೆ ಪಲಾಯನ ಮಾಡಿ, ಅಲ್ಲಿ ಭೋಗ ಜೀವನ ನಡೆಸುತ್ತಿದ್ದಾರೆ. ಕಳೆದ 10 ವರ್ಷಗಳಲ್ಲಿ ಅಂದರೆ 2007ರಿಂದ 2017ರ ಅವಧಿಯಲ್ಲಿ ಬ್ಯಾಂಕುಗಳು ಅನುತ್ಪಾದಕ ಸಾಲಗಳು (Non-performing Assets) ಎಂಬ ಹೆಸರಿನಲ್ಲಿ ಲಕ್ಷಗಟ್ಟಲೆ ಕೋಟಿ ರೂಪಾಯಿಗಳನ್ನು ಇಂತಹ ಸಿರಿವಂತರಿಗೆ ಮಾಫಿ ಮಾಡಿದೆ. ಇಂತಹ ಕಳ್ಳರನ್ನು ಕರೆತಂದು ಶಿಕ್ಷೆಗೆ ಒಳಪಡಿಸಲು ಸರ್ಕಾರಕ್ಕೆ ಸಾಧ್ಯವಾಗಿಲ್ಲ. ಹೀಗೆ ಸಾಮಾನ್ಯ ಜನರ ದುಡಿಮೆಯನ್ನು ಲೂಟಿ ಹೊಡೆಯಲಾಗುತ್ತಿದೆ.

ದೊಡ್ಡ ದೊಡ್ಡ ಕಂಪನಿಗಳು ಮತ್ತು ಉದ್ಯಮಿಗಳು ಕಟ್ಟಬೇಕಾದ ಲಕ್ಷಾಂತರ ಕೋಟಿ ರೂಪಾಯಿಗಳ ತೆರಿಗೆ ಹಣವನ್ನು ವಸೂಲಿ ಮಾಡಲಾಗುತ್ತಿಲ್ಲ. ಮತ್ತೊಂದು ಕಡೆ ಜನ ಸಾಮಾನ್ಯರ ಮೇಲೆ ಹೆಚ್ಚು ಹೆಚ್ಚು ತೆರಿಗೆಗಳನ್ನು ವಿಧಿಸಲಾಗುತ್ತಿದೆ. ಈ ಎಲ್ಲಾ ಬೆಳವಣಿಗೆಗಳಿಂದ ಜನ ಸಾಮಾನ್ಯರ ಬದುಕು ದಿನೇ ದಿನೇ ಬಹಳ ಸಂಕಷ್ಟಕ್ಕೆ ಒಳಗಾಗುತ್ತಿದೆ.

## 7. ಅಪ್ರಸ್ತುತವಾಗುತ್ತಿರುವ ಸಾಮಾಜಿಕ ನ್ಯಾಯ:

20ನೇ ಶತಮಾನದವರೆಗೆ ಸಾಮಾಜಿಕ ನ್ಯಾಯ ನಮ್ಮ ಸಮಾಜದಲ್ಲಿ ಒಂದು ನೀತಿಯಾಗಿತ್ತು. ಆದರೆ ರಾಜನೀತಿಯಾಗಿರಲಿಲ್ಲ. ಕಡ್ಡಾಯವಾಗಿ ಜಾರಿ ಮಾಡಲಾಗದ ಒಂದು ನೀತಿಯಾಗಿಯೇ ಉಳಿಯಿತು. ಮೊದಲನೇ ಬಾರಿಗೆ ಬಾಬಾ ಸಾಹೇಬ್ ಅಂಬೇಡ್ಕರ್‌ರವರು **'ಸಾಮಾಜಿಕ ನ್ಯಾಯ ಒಂದು ಭಿಕ್ಷೆಯಲ್ಲ ಅದೊಂದು ಹಕ್ಕು'** ಎಂಬುದಾಗಿ ಪ್ರತಿಪಾದಿಸಿದರು. ಸಾಮಾಜಿಕ ನ್ಯಾಯಕ್ಕಾಗಿ ರಾಷ್ಟ್ರಮಟ್ಟದ ಸಂಘಟಿತ ಹೋರಾಟವನ್ನು ರೂಪಿಸಿದರು. ಈ ಹೋರಾಟದ ಫಲವಾಗಿ ಸಾಮಾಜಿಕ ನ್ಯಾಯ ಕೇವಲ ಸಮಾಜದ ನೀತಿಯಾಗಿ ಉಳಿಯದೆ ಸರ್ಕಾರದ ನೀತಿಯಾಗಿ ಸ್ಥಾನಗಳಿಸುವಂತಾಯಿತು. ಸ್ವಾತಂತ್ರ ಪೂರ್ವದಲ್ಲಿ ಸಾಮಾಜಿಕ ನ್ಯಾಯದ ಪರವಾದ ಕೆಲವು ಕಾನೂನುಗಳು ಜಾರಿಗೆ ಬಂದವು.

ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಸಾಮಾಜಿಕ ನ್ಯಾಯವು ಪ್ರಮುಖ ಸ್ಥಾನವನ್ನು ಪಡೆದುಕೊಂಡಿದೆ. ಕಾನೂನಿನ ದೃಷ್ಟಿಯಲ್ಲಿ ಎಲ್ಲರೂ ಸರಿ ಸಮಾನರು. ಯಾವುದೇ ಜಾತಿ, ವರ್ಣ, ಲಿಂಗ, ಧರ್ಮದ ಹೆಸರಿನಲ್ಲಿ ಬೇಧಭಾವ ತೋರಬಾರದು. ಸಮಸ್ತ ಜನತೆಯ ಕಲ್ಯಾಣವೇ ಸರ್ಕಾರದ ಗುರಿ. ಸಮಾನತೆಯೆಂದರೆ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಲು ಸಮನಾದ ಅವಕಾಶಗಳನ್ನು ನೀಡುವುದು ಎನ್ನುವುದನ್ನು ಸ್ಪಷ್ಟಪಡಿಸಲಾಗಿದೆ.

ಸಾಮಾಜಿಕ ನ್ಯಾಯವೆಂದರೆ ಹಿಂದುಳಿದವರ, ಬಡವರ, ದುರ್ಬಲರ, ತುಳಿತಕ್ಕೆ ಮತ್ತು ಶೋಷಣೆಗೆ ಒಳಪಟ್ಟ ಅಸಹಾಯಕರನ್ನು ರಾಜಕೀಯವಾಗಿ, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮೇಲಕ್ಕೆತ್ತಲು ಶಾಸನಗಳನ್ನು, ಕಾರ್ಯಕ್ರಮಗಳನ್ನು

ಮತ್ತು ಯೋಜನೆಗಳನ್ನು ರೂಪಿಸಿ ಅವುಗಳನ್ನು ಜಾರಿಗೊಳಿಸುವುದು. ಆ ಮೂಲಕ ಸಮಾಜದಲ್ಲಿರುವ ಅಸಮಾನತೆಯನ್ನು ಹೋಗಲಾಡಿಸುವುದು. ಕಳೆದ 70 ವರ್ಷಗಳ ಸ್ವತಂತ್ರ ಭಾರತದಲ್ಲಿ ಸಾಮಾಜಿಕ ನ್ಯಾಯವನ್ನು ಸಾಧಿಸಲು ಹಲವು ಶಾಸನಗಳನ್ನು ಮತ್ತು ಕಾರ್ಯಕ್ರಮಗಳನ್ನು ತಂದು ಒಂದಷ್ಟು ಸುಧಾರಣೆಯಾಗಿದೆ. ದಲಿತರ, ಹಿಂದುಳಿದವರ, ಅಲ್ಪಸಂಖ್ಯಾತರ, ಮಹಿಳೆಯರ, ವಿಕಲಚೇತನರ, ವೃದ್ಧರ, ಬಡವರ, ಇತ್ಯಾದಿ ಜನವಿಭಾಗದ ಬದುಕು ಸ್ವಲ್ಪಮಟ್ಟಿಗೆ ಸುಧಾರಣೆಯಾಗಿದೆ.

ಶಾಸಕಾಂಗದಲ್ಲಿ, ಶಿಕ್ಷಣದಲ್ಲಿ ಮತ್ತು ಉದ್ಯೋಗದಲ್ಲಿ ಮೀಸಲಾತಿ ನೀಡುವುದು ಸಾಮಾಜಿಕ ನ್ಯಾಯದ ಒಂದು ಭಾಗ ಮಾತ್ರ. ಆದರೆ ಮೀಸಲಾತಿ ಒಂದೇ ಸಾಮಾಜಿಕ ನ್ಯಾಯವಲ್ಲ. ಎಲ್ಲ ರೀತಿಯ ಅಸಮಾನತೆಯನ್ನು ಹೋಗಲಾಡಿಸಿ ಸಮಾನತೆಯನ್ನು ತರುವುದೇ ಸಾಮಾಜಿಕ ನ್ಯಾಯದ ಗುರಿ. ದುಡಿಮೆಗೆ ಸಮನಾದ ಪ್ರತಿಫಲ ನೀಡುವುದು, ಜನರ ಕನಿಷ್ಠ ಅಗತ್ಯತೆಗಳನ್ನು ಪೂರೈಸುವುದು ಸಹ ಸಾಮಾಜಿಕ ನ್ಯಾಯ.

ಜಾಗತೀಕರಣದ ಪರಿಣಾಮವಾಗಿ ಅತಿಯಾದ ವ್ಯಾಪಾರೀಕರಣ ಬೆಳೆಯುತ್ತಿದೆ. ಕಾರ್ಮಿಕರು ಬೀದಿಪಾಲಾಗುತ್ತಿದ್ದಾರೆ. ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಗ್ರಾಮಾಂತರ ಜನ ನಗರಗಳಿಗೆ ಗುಳೆ ಹೋಗುತ್ತಿದ್ದಾರೆ. ನಗರಗಳಲ್ಲಿ ಕೊಳಚೆ ಪ್ರದೇಶಗಳು ಬೆಳೆಯುತ್ತಿವೆ. ದಿನೇ ದಿನೇ ಜನ ಸಾಮಾನ್ಯರ ಬದುಕು ಸಂಕಷ್ಟಕ್ಕೆ ದೂಡಲ್ಪಟ್ಟಿದೆ. ಖಾಸಗೀಕರಣದ ಪರಿಣಾಮವಾಗಿ ಸರ್ಕಾರದ ಅಧಿಕಾರವು ಕ್ರಮೇಣ ಕಡಿಮೆಯಾಗುತ್ತಿದೆ. ಒಂದು ನಿರ್ದಿಷ್ಟ ಭೂ ಪ್ರದೇಶದ ಮೇಲಿರುವ ರಾಜಕೀಯ ಅಧಿಕಾರದ ಸ್ಥಾನವನ್ನು ಬಹುರಾಷ್ಟ್ರೀಯ ಕಂಪನಿಗಳು ಆಕ್ರಮಿಸುತ್ತಿವೆ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆ ಅಪ್ರಸ್ತುತಗೊಳ್ಳುತ್ತಿದೆ.

ಎಲ್ಲಿಯವರೆಗೆ ಸರ್ಕಾರ ಹೆಚ್ಚು ಹೆಚ್ಚು ಅವಕಾಶಗಳನ್ನು ಸೃಷ್ಟಿಸುವುದಿಲ್ಲವೋ, ದುಡಿಮೆಗೆ ಸಮನಾದ ಪ್ರತಿಫಲವನ್ನು ಮತ್ತು ಉದ್ಯೋಗದ ಭದ್ರತೆಯನ್ನು ನೀಡುವುದಿಲ್ಲವೋ ಅಲ್ಲಿಯವರೆಗೆ ಮೀಸಲಾತಿ, ಒಳಮೀಸಲಾತಿ, ಬಡ್ತಿಯಲ್ಲಿ ಮೀಸಲಾತಿ, ಬೇರೆ ಜಾತಿಯವರಿಗೆ ಮೀಸಲಾತಿ ಬೇಡಿಕೆ ಇತ್ಯಾದಿಗಳು ಮುಂದುವರಿಯುತ್ತವೆ. ಈ ಸಮಸ್ಯೆಗೆ ಶಾಶ್ವತವಾದ ಪರಿಹಾರವೆಂದರೆ ಸರ್ಕಾರ ತನ್ನ ನೀತಿಯಲ್ಲಿ ಸೂಕ್ತ ಬದಲಾವಣೆಗಳನ್ನು ತಂದು ಹೆಚ್ಚು ಹೆಚ್ಚು ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಬೇಕಾಗಿದೆ. ಭೂ ಸುಧಾರಣಾ ಕ್ರಮಗಳನ್ನು ಕೈಗೊಂಡು, ಕೃಷಿ ಭೂಮಿಯ ಒಡೆತನ ಮತ್ತು ಮನೆ ನಿವೇಶನಗಳ ಒಡೆತನವನ್ನು ಎಲ್ಲ ದುರ್ಬಲ ವರ್ಗಗಳಿಗೆ ಒದಗಿಸಬೇಕು. ಸರ್ಕಾರ ಈ ಕೆಲಸವನ್ನು ಮಾಡಿದಾಗ ಮೀಸಲಾತಿಗೆ ಸಂಬಂಧಿಸಿದ ಹಲವು ಪ್ರಶ್ನೆಗಳು ಹಿಂದಕ್ಕೆ ಸರಿಯುತ್ತವೆ. ಸರ್ಕಾರ ಕಡ್ಡಾಯವಾಗಿ ಈ ಕೆಲಸ ಮಾಡಬೇಕಾದರೆ ಉದ್ಯೋಗ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕಾಗಬೇಕು.

## 8. ಮಾನವ ಹಕ್ಕುಗಳ ಉಲ್ಲಂಘನೆ

ವಿಶ್ವಸಂಸ್ಥೆಯು 1948ರಲ್ಲೇ ಮಾವನಹಕ್ಕುಗಳನ್ನು ಘೋಷಿಸಿತು. ಆ ದಿನಗಳಲ್ಲಿ ನಮ್ಮ ದೇಶದ ಸಂವಿಧಾನ ಸಭೆ ಕರಡು ಸಂವಿಧಾನ ರಚನೆಯ ಕಾರ್ಯದಲ್ಲಿ ತೊಡಗಿತ್ತು. ನಮ್ಮ ಸಂವಿಧಾನದ ರಚನಕಾರರು ಮಾನವ ಹಕ್ಕುಗಳ ಘೋಷಣೆಯಿಂದ ಪ್ರಭಾವಿತರಾಗಿ

ಅವುಗಳನ್ನು ನಮ್ಮ ಸಂವಿಧಾನದಲ್ಲಿ ಅಳವಡಿಸಿದರು. ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ಮತ್ತು ಹಲವು ಅನುಚ್ಛೇದಗಳಲ್ಲಿ ವಿಶ್ವಸಂಸ್ಥೆ ಘೋಷಣೆ ಮಾಡಿರುವ ಮಾನವ ಹಕ್ಕುಗಳನ್ನು ಕಾಣಬಹುದು.

ಭಾರತದ ಸಂವಿಧಾನವು ಮಾನವ ಹಕ್ಕುಗಳನ್ನು ರಕ್ಷಿಸುವ ಮತ್ತು ಜಾರಿಗಳಿಸುವ ಅಧಿಕಾರವನ್ನು ನ್ಯಾಯಾಂಗಕ್ಕೆ ನೀಡಿದೆ. ಅನುಚ್ಛೇದ 32ರ ಅನುಸಾರ ಭಾರತದ ಸರ್ವೋಚ್ಚ ನ್ಯಾಯಾಲಯವು ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸುವ ಅಧಿಕಾರವನ್ನು ಪಡೆದಿದೆ. ಅನುಚ್ಛೇದ 226ರಲ್ಲಿ ರಾಜ್ಯದ ಉಚ್ಚ ನ್ಯಾಯಾಲಯಗಳು ರಿಟ್‌ಗಳನ್ನು ಹೊರಡಿಸಿ ಮೂಲಭೂತ ಹಕ್ಕುಗಳನ್ನು ಜಾರಿಗೊಳಿಸುವ ಅಧಿಕಾರ ಹೊಂದಿವೆ.

ಭಾರತದ ದೇಶದ ಸಂಸತ್ತು 1993ರಲ್ಲಿ ಮಾನವ ಹಕ್ಕುಗಳ ಕಾಯಿದೆಯನ್ನು ಜಾರಿಗೆ ತಂದಿದೆ. ರಾಷ್ಟ್ರ ಮಟ್ಟದಲ್ಲಿ ಮತ್ತು ರಾಜ್ಯಮಟ್ಟದಲ್ಲಿ ಮಾನವ ಹಕ್ಕುಗಳ ಆಯೋಗಗಳನ್ನು ರಚಿಸಲಾಗಿದೆ. ಹೀಗೆ ಸಮಾಜದ ಬಹುಪಾಲು ಚಟುವಟಿಕೆಗಳನ್ನು ಕಾನೂನಿನ ನಿಯಂತ್ರಣಕ್ಕೆ ಒಳಪಡಿಸಿದ್ದೇವೆ.

ಮಾನವ ಹಕ್ಕುಗಳನ್ನು ರಕ್ಷಿಸುವಲ್ಲಿ ಮತ್ತು ಅನುಷ್ಠಾನಗೊಳಿಸುವಲ್ಲಿ ನ್ಯಾಯಾಂಗ ಮಹತ್ತರ ಕೊಡುಗೆಯನ್ನು ನೀಡಿದೆ. ಭಾರತ ಸರ್ವೋಚ್ಚ ನ್ಯಾಯಾಲಯ ನೂರಾರು ತೀರ್ಪುಗಳಲ್ಲಿ ಭಾರತ ಸಂವಿಧಾನದ ಹಲವು ಅನುಚ್ಛೇದಗಳನ್ನು ವ್ಯಾಖ್ಯಾನ ಮಾಡುತ್ತಾ ಮಾನವ ಹಕ್ಕುಗಳ ವ್ಯಾಪ್ತಿಯನ್ನು ವಿಸ್ತಾರಗೊಳಿಸಿದೆ. ಉದಾಹರಣೆಗೆ ಜೀವಿಸುವ ಹಕ್ಕು, ಮೂಲ ಸವಲತ್ತುಗಳನ್ನು ಪಡೆಯುವ ಮತ್ತು ಮಾನವ ಘನತೆಯಿಂದ ಬದುಕುವ ಹಕ್ಕನ್ನು ಒಳಗೊಳ್ಳುತ್ತದೆ. ಸಂಪ್ರದಾಯ, ಸಂಸ್ಕೃತಿ ಮತ್ತು ಪರಂಪರೆಯ ಹಕ್ಕು, ಮಹಿಳೆಯರನ್ನು ಸಭ್ಯತೆ ಮತ್ತು ಸೂಕ್ತ ಘನತೆಯಿಂದ ನಡೆಸಿಕೊಳ್ಳುವ ಹಕ್ಕು, ತಿಳಿದುಕೊಳ್ಳುವ ಹಕ್ಕು, ಮಾಹಿತಿ ಹಕ್ಕು, ಖಾಸಗಿ ಹಕ್ಕು, ವಿದೇಶ ಪ್ರವಾಸದ ಹಕ್ಕು, ತ್ವರಿತ ವಿಚಾರಣೆಯ ಹಕ್ಕು, ಕುಟುಂಬ ಮತ್ತು ಸ್ನೇಹಿತರೊಂದಿಗೆ ಬೆರೆಯುವ ಹಕ್ಕು, ಏಕಾಂತ ಬಂಧನದ ವಿರುದ್ಧದ ಹಕ್ಕು, ಬೇಡಿ ತೊಡಿಸುವುದರ ವಿರುದ್ಧ ಹಕ್ಕು, ಉಚಿತ ಕಾನೂನು ನೆರವಿನ ಹಕ್ಕು, ವೈದ್ಯಕೀಯ ನೆರವು ಹಕ್ಕು, ಆರೋಗ್ಯಕರ ಪರಿಸರ ಹಕ್ಕು ಇತ್ಯಾದಿಯಾಗಿ.

ಇಂದು ರೈತರು ಆರ್ಥಿಕವಾಗಿ, ಸಾಮಾಜಿಕವಾಗಿ ಮತ್ತು ಸಾಂಸ್ಕೃತಿಕವಾಗಿ ದಿವಾಳಿಯಾಗಿ ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. ನಿರುದ್ಯೋಗ ಹೆಚ್ಚಾಗಿ ಯುವಜನರು ಸಮಾಜ ಘಾತುಕ ಚಟುವಟಿಕೆಗಳಲ್ಲಿ ತೊಡಗುತ್ತಿದ್ದಾರೆ. ಮಹಿಳೆಯರು, ಮಕ್ಕಳು, ದಲಿತರು ಮತ್ತು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ದೇಶದಲ್ಲಿ ಆರ್ಥಿಕ ಭಯೋತ್ಪಾದನೆ ಮತ್ತು ಸಾಮಾಜಿಕ ಭಯೋತ್ಪಾದನೆ ತಲೆದೋರಿದೆ.

ಸರ್ಕಾರ, ಪೊಲೀಸ್ ಮತ್ತು ಸೈನ್ಯದಿಂದಲೇ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ. ಭಯೋತ್ಪಾದಕರಿಂದ, ಉಗ್ರಗಾಮಿಗಳಿಂದ, ಮೂಲಭೂತವಾದಿಗಳಿಂದ, ಕೋಮುವಾದಿ ಗಳಿಂದ ಮತ್ತು ಮಾಫಿಯಗಳಿಂದ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತಿದೆ.

ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ರಾಜ್ಯ ಆಯೋಗಗಳು ಸಮರ್ಪಕವಾಗಿ

ಕೆಲಸ ನಿರ್ವಹಿಸುತ್ತಿಲ್ಲ. ಮಾನವ ಹಕ್ಕುಗಳನ್ನು ರಕ್ಷಿಸುವಲ್ಲಿ ಮತ್ತು ಜಾರಿಗೊಳಿಸುವಲ್ಲಿ ರಾಜಕೀಯ ಇಚ್ಛಾಶಕ್ತಿ ಕೊರತೆ ಎದ್ದು ಕಾಣುತ್ತಿದೆ. ಹೀಗೆ ಸಂವಿಧಾನದಲ್ಲಿ ನೀಡಿರುವ ಹಕ್ಕುಗಳನ್ನು ಕಳೆದುಕೊಳ್ಳುತ್ತಿದ್ದೇವೆ.

ಕೇವಲ ಅಭಿವೃದ್ಧಿ ಆದರೆ ಸಾಲದು, ಅಭಿವೃದ್ಧಿಯ ಸಾಧನೆ ಜನರ ಜೀವನಮಟ್ಟವನ್ನು ಸುಧಾರಿಸಿದಾಗ ಅದು ನಿಜವಾದ ಅಭಿವೃದ್ಧಿ ಎನ್ನಿಸಿಕೊಳ್ಳುವುದು. ಮಾನವೀಯತೆಯನ್ನೊಳಗೊಂಡ ಅಭಿವೃದ್ಧಿ ನಮಗೆ ಬೇಕಾಗಿದೆ.

# ಭಾಗ 11

## ಮುಂದಿನ ದಾರಿ

*"ನಾವು ಸುರಕ್ಷಿತವಾಗಿ ಬದುಕಲು, ನಮಗೋಸ್ಕರ, ನಮ್ಮ ಮುಂದಿನ ಪೀಳಿಗೆಗಾಗಿ ನಮ್ಮ ಸಂವಿಧಾನವನ್ನು, ಅದರ ಆಶಯಗಳನ್ನು ರಕ್ಷಿಸಬೇಕು".*

ಸಂವಿಧಾನ ಭಾರತೀಯರ ಮಹಾಗ್ರಂಥ. ವಿವಿಧ ಧರ್ಮಗಳ, ಜಾತಿಯ, ಸಂಸ್ಕೃತಿಯ, ಭಾಷೆಯ, ನಂಬಿಕೆಗಳ, ಅಭಿಪ್ರಾಯಗಳ, ಆಚಾರ, ವಿಚಾರಗಳ, ಆಹಾರ ಪದ್ಧತಿಗಳ, ಉಡುಪುಗಳ ಜನರನ್ನು ಒಟ್ಟಿಗೆ ಮುನ್ನಡೆಸುತ್ತಿರುವುದು ಭಾರತದ ಸಂವಿಧಾನ.

ಪ್ರಜಾಪ್ರಭುತ್ವ, ಜಾತ್ಯತೀತತೆ, ಸಾಮಾಜಿಕ ನ್ಯಾಯವೆಂಬ ಸಿದ್ಧಾಂತಗಳನ್ನು ಬಿತ್ತಿ, ಬೆಳೆಸುತ್ತಿರುವುದು ಭಾರತದ ಸಂವಿಧಾನ. ನಾವೆಲ್ಲರೂ ಅನುಭವಿಸುತ್ತಿರುವ ಮಾನವ ಹಕ್ಕುಗಳು, ಮೂಲಭೂತ ಹಕ್ಕುಗಳು ಮತ್ತು ಎದುರಿಸುವ ಸಮಸ್ಯೆಗಳಿಗೆ ಹಲವು ಸಾಂವಿಧಾನಿಕ ಪರಿಹಾರಗಳನ್ನು ನೀಡಿರುವುದು ಭಾರತದ ಸಂವಿಧಾನ.

ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗವೆಂಬ ಸ್ವತಂತ್ರ ಸಂಸ್ಥೆಗಳನ್ನು ಸ್ಥಾಪಿಸಿ ಅವುಗಳಲ್ಲಿ ಈ ದೇಶದ ಜನರು ಭಾಗವಹಿಸುವಂತೆ ಮಾಡಿರುವುದು ಭಾರತದ ಸಂವಿಧಾನ. ಜನಸಾಮಾನ್ಯರ ಕನಿಷ್ಠ ಅವಶ್ಯಕತೆಗಳನ್ನು ಸ್ವಲ್ಪ ಮಟ್ಟಿಗಾದರೂ ಪೂರೈಸಿರುವುದು ಭಾರತ ಸಂವಿಧಾನದ ಆಶಯವಾದ ಕಲ್ಯಾಣ ರಾಜ್ಯದ ಮೌಲ್ಯ. ಧರ್ಮ, ಜನಾಂಗೀಯ, ಜಾತಿ, ಲಿಂಗ, ಭಾಷೆ ಅಥವಾ ಜನ್ಮಸ್ಥಳದ ಆಧಾರದ ಮೇಲೆ ತಾರತಮ್ಯವನ್ನು ನಿಷೇಧಿಸಿ ಎಲ್ಲರಿಗೂ ಸಮಾನ ರಕ್ಷಣೆ ಮತ್ತು ಅವಕಾಶಗಳನ್ನು ನೀಡಿರುವುದು ಭಾರತದ ಸಂವಿಧಾನ. ಆದ್ದರಿಂದ, ನಾವು ಸುರಕ್ಷಿತವಾಗಿ ಬದುಕಲು, ನಮಗೋಸ್ಕರ, ನಮ್ಮ ಮುಂದಿನ ಪೀಳಿಗೆಗಾಗಿ ನಮ್ಮ ಸಂವಿಧಾನವನ್ನು, ಅದರ ಆಶಯಗಳನ್ನು ರಕ್ಷಿಸಬೇಕು.

ನಮ್ಮ ಸಂವಿಧಾನವನ್ನು ನಾವು ಕಳೆದುಕೊಂಡರೆ ಅಂತರ್ಯುದ್ಧ ನಡೆದು ಭಾರತ ದೇಶ ಛಿದ್ರ ಛಿದ್ರವಾಗಿ ಹೋಳಾಗುತ್ತದೆ. ಪ್ರಜಾಪ್ರಭುತ್ವ, ಜಾತ್ಯತೀತತೆ, ಸಾಮಾಜಿಕ ನ್ಯಾಯವೆಂಬ ಸಿದ್ಧಾಂತಗಳು ನಾಶವಾಗಿ ಅರಾಜಕತೆ, ಮತೀಯವಾದ, ಕೋಮುವಾದ, ಮೂಲಭೂತವಾದವೆಂಬ ಅಮಾನವೀಯ ಸಿದ್ಧಾಂತಗಳು ರಾರಾಜಿಸುತ್ತವೆ. ಜನಸಾಮಾನ್ಯರು ಗಳಿಸಿದ ಹಕ್ಕುಗಳನ್ನು ಕಳೆದುಕೊಂಡು ಬಾಯಿಗೆ ಬೀಗ ಹಾಕಿಕೊಂಡು ಗುಲಾಮರಂತೆ ಜೀವಿಸಬೇಕಾಗುತ್ತದೆ. ಮಹಿಳೆಯರು, ದಲಿತರು, ಅಲ್ಪಸಂಖ್ಯಾತರು ಮತ್ತು ಬಡವರು ಶೋಷಣೆ, ದಬ್ಬಾಳಿಕೆ, ಕ್ರೌರ್ಯ, ಹಿಂಸೆ, ಅಭದ್ರತೆಗಳಿಗೆ ಬಲಿಯಾಗಬೇಕಾಗುತ್ತದೆ. ರೂಲ್ ಆಫ್ ಲಾ ಹೋಗಿ ಜಂಗಲ್ ಲಾ ವ್ಯವಸ್ಥೆ ಬರುತ್ತದೆ. ಆದ್ದರಿಂದ, ನಮ್ಮ ಸಂವಿಧಾನವನ್ನು ನಾವು ಉಳಿಸಿಕೊಳ್ಳಬೇಕಾಗಿದೆ.

**ಹಾಗಾದರೆ ಇಂತಹ ಗಂಭೀರ ಪರಿಸ್ಥಿತಿಯಲ್ಲಿ ನಮ್ಮ ಕರ್ತವ್ಯವೇನು?**

ಮೊತ್ತ ಮೊದಲಿಗೆ ನಾವೆಲ್ಲರೂ ನಮ್ಮ ಸಂವಿಧಾನವನ್ನು ಓದಬೇಕು, ಅರ್ಥೈಸಬೇಕು. ಸಂವಿಧಾನದ ಮೂಲತತ್ವಗಳನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಅದರಂತೆ ನಡೆದುಕೊಳ್ಳಬೇಕು. ಸಂವಿಧಾನದ ಆಶಯಗಳನ್ನು ಬದುಕಿನ ವಿಧಾನವಾಗಿಸಿಕೊಳ್ಳಬೇಕು. ನಮ್ಮ ಕುಟುಂಬದ ಸದಸ್ಯರಿಗೆ ಸಂವಿಧಾನದ ಮಹತ್ವವನ್ನು ಮನವರಿಕೆ ಮಾಡಿಕೊಡಬೇಕು. ನಮ್ಮ ಸುತ್ತಮುತ್ತಲಿನ ಬಂಧು, ಬಳಗ, ಗೆಳೆಯರಲ್ಲಿ, ವಿದ್ಯಾರ್ಥಿ ಯುವಜನರ ಮಧ್ಯೆ ನಮ್ಮ ಸಂವಿಧಾನದ ತಿಳುವಳಿಕೆಯನ್ನು ಹಂಚಿಕೊಳ್ಳಬೇಕು. ಸಂವಿಧಾನದ ಪ್ರತಿಯೊಂದು ಆಶಯವನ್ನು ಅನುಷ್ಠಾನಗೊಳಿಸಲಿಕ್ಕೆ ಪ್ರಯತ್ನಿಸಬೇಕು. ಸಂವಿಧಾನ ಎದುರಿಸುತ್ತಿರುವ ಸವಾಲುಗಳನ್ನು ಹಿಮ್ಮೆಟ್ಟಿಸಬೇಕು.

ನಮ್ಮ ಸಂವಿಧಾನದ ಉಳಿವಿಗಾಗಿ, ದೇಶದ ಸಮಗ್ರತೆಗಾಗಿ ಮತ್ತು ಜನತೆಯ ಕಲ್ಯಾಣಕ್ಕಾಗಿ ನಾವೆಲ್ಲರೂ ಎಲ್ಲ ರೀತಿಯ ತ್ಯಾಗಕ್ಕೆ ಸಿದ್ಧರಾಗೋಣ.



# ಭಾರತದ ಸಂವಿಧಾನ

## ಪೀಠಿಕೆ

ಭಾರತದ ಜನತೆಯಾದ ನಾವು,
ಭಾರತವನ್ನು ಸಾರ್ವಭೌಮ, ಸಮಾಜವಾದಿ, ಧರ್ಮನಿರಪೇಕ್ಷ
ಪ್ರಜಾಸತ್ತಾತ್ಮಕ ಗಣರಾಜ್ಯವನ್ನಾಗಿ
ರೂಪಿಸುವುದಕ್ಕಾಗಿ;
ಭಾರತದ ಎಲ್ಲಾ ಪ್ರಜೆಗಳಿಗೆ
ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯವನ್ನು;
ವಿಚಾರ, ಅಭಿವ್ಯಕ್ತಿ, ನಂಬಿಕೆ, ಧರ್ಮ ಮತ್ತು
ಉಪಾಸನೆಯ ಸ್ವಾತಂತ್ರ್ಯವನ್ನು;
ಸ್ಥಾನಮಾನ ಮತ್ತು ಅವಕಾಶಗಳ ಸಮಾನತೆಯನ್ನು
ದೊರೆಯುವಂತೆ ಮಾಡುವುದಕ್ಕಾಗಿ;
ವ್ಯಕ್ತಿಗೌರವ, ದೇಶದ ಏಕತೆ ಮತ್ತು ಸಮಗ್ರತೆಗಾಗಿ ಎಲ್ಲರಲ್ಲಿ
ಭ್ರಾತೃತ್ವ ಭಾವನೆಯನ್ನು ಮೂಡಿಸುವುದಕ್ಕೆ
ದೃಢಸಂಕಲ್ಪ ಮಾಡಿ,
ನಮ್ಮ ಸಂವಿಧಾನ ಸಭೆಯಲ್ಲಿ
1949ನೆಯ ಇಸವಿಯ ನವೆಂಬರ್ ತಿಂಗಳ 26ನೇ ದಿನದಂದು
ಈ ಸಂವಿಧಾನವನ್ನು ನಮಗೆ ನಾವೇ ಅರ್ಪಿಸಿಕೊಂಡು,
ಅಂಗೀಕರಿಸಿ, ಶಾಸನವಾಗಿ ವಿಧಿಸಿಕೊಂಡಿದ್ದೇವೆ.

**ನಾವೆಲ್ಲರೂ ನಮ್ಮ ಸಂವಿಧಾನವನ್ನು ಓದಬೇಕು, ಅರ್ಥೈಸಬೇಕು. ಸಂವಿಧಾನದ ಮೂಲತತ್ವಗಳನ್ನು ಮೈಗೂಡಿಸಿಕೊಳ್ಳಬೇಕು ಮತ್ತು ಅದರಂತೆ ನಡೆದುಕೊಳ್ಳಬೇಕು. ಸಂವಿಧಾನದ ಆಶಯಗಳನ್ನು ಬದುಕಿನ ವಿಧಾನವಾಗಿಸಿಕೊಳ್ಳಬೇಕು. ಸಂವಿಧಾನದ ಪ್ರತಿಯೊಂದು ಆಶಯವನ್ನು ಅನುಷ್ಠಾನಗೊಳಿಸಲಿಕ್ಕೆ ಪ್ರಯತ್ನಿಸಬೇಕು. ಸಂವಿಧಾನ ಎದುರಿಸುತ್ತಿರುವ ಸವಾಲುಗಳನ್ನು ಹಿಮ್ಮೆಟ್ಟಿಸಬೇಕು.**

ಪ್ರಕಟಣೆ

ಸಹಯಾನ (ಡಾ. ಆರ್. ವಿ. ಭಂಡಾರಿ ನೆನಪಿನ ಸಂಸ್ಕೃತಿ ಅಧ್ಯಯನ ಕೇಂದ್ರ) ಕೆರೆಕೋಣ
ಹಾಗೂ
ಸಮುದಾಯ ಕರ್ನಾಟಕ ಬೆಂಗಳೂರು